- ಶ್ರೀ -

— ಶ್ರೀಮತೇ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

।

ಮೂನ್ರಾವದಾಯಿರಂ

।

1 ಪೆರಿಯ ತಿರುವನ್ತಾದಿ (ಪಾಶುರಗಳು 112)

2 ತಿರುವಾಶಿರಿಯಂ (ಪಾಶುರಗಳು 20)

ನಮ್ಮಾಳ್ವಾರ್

(ತಿರುಕ್ಕುರುಗೂರ್ ಶಠಗೋಪನ್)

।

ಮೂಲಸಹಿತ ಪಾಶುರ

ತಮಿಳು ಮೂಲ ಕನ್ನಡದಲ್ಲಿ ಪ್ರತಿಪದಾರ್ಥ ವ್ಯಾಖ್ಯಾನ
ಮತ್ತು
ವಿವರಣೆಯೊಂದಿಗೆ

ಸಂಪುಟ - 13

Garani Srinivasan

20.12.82

ದಿವ್ಯಪ್ರಬನ್ಧಮ್ - ಮೂರನೆಯ ಸಾವಿರ - ಪೆರಿಯ ತಿರುವನ್ದಾದಿ

திவ்யப்ரபந்தம் - மூன்றாவதாயிரம் - பெரிய திருவந்தாதி.

ತನಿ - தனியன்

முந்துற்ற நெஞ்சே! முயற்றி தரித்துரைத்து
வந்தித்து வாயார வாழ்த்தி - சந்த
முருகூரும் சோலைசூழ் மொய்பூம் பொருநல்
குருகூரன் மாறன் பேர் கூறு.

ಮುನ್ದುಱ್ಱ ನೆಂಜೇ! ಮುಯಱ್ಱಿ ತರಿತ್ತುರೈತ್ತು
ವನ್ದಿತ್ತು ವಾಯಾರ ವಾೞ್ತ್ತಿ ಚನ್ದ
ಮುರುಕೂರುಂ ಚೋಲೈ ಸೂೞ್ ಮೊಯ್ ಪೂಮ್ ಪೊರುನಲ್
ಕುರುಕೂರನ್ ಮಾಱನ್ ಪೇರ್ ಕೂಱು.

ಮುನ್ದುಱ್ಱ முந்துற்ற = (ವಿಷಯಗಳಲ್ಲಿ) ಮುನ್ನುಗ್ಗುವ ಸ್ವಭಾವದ, ನೆಂಜೇ நெஞ்சே = ಮನಸ್ಸೇ, ಮುಯಱ್ಱಿ ತರಿತ್ತು முயற்றி தரித்து = ಉತ್ಸಾಹವನ್ನು ಹೊಂದಿ (ಉತ್ಸಾಹದಿಂದ), ಉರೈತ್ತು உரைத்து = ಹೇಳಿ, ವನ್ದಿತ್ತು வந்தித்து = ನಮಸ್ಕರಿಸಿ, ವಾಯ್ ಆರ வாய் ஆர = ಬಾಯಿ ತುಂಬ, ವಾೞ್ತ್ತಿ வாழ்த்தி = ಸ್ತುತಿಸಿ, ಚನ್ದಮ್ சந்தம் = ಅಂದವಾದ, ಮುರುಕು முருகு = ಜೇನು, ಊರುಮ್ ஊறும் = ಸ್ರವಿಸುವಂಥ (ಹರಿಯುತ್ತಿರುವ, ಚೋಲೈ சோலை = ಉಪವನಗಳಿಂದ, ಸೂೞ್ சூழ் = ಸುತ್ತುವರಿದಿರುವ, ಮೊಯ್ மொய் = ದಟ್ಟವಾಗಿ (ಒತ್ತಾಗಿ), ಪೂಮ್ பூம் = ಹೂಗಳಿಂದ ತುಂಬಿರುವ, ಪೊರುನಲ್ பொருநல் = ತಕ್ಕಂತೆ ಹೊಂದಿಕೊಂಡಿರುವ (ತಾಮ್ರಪರ್ಣೀನದಿಯುಳ್ಳ ಕೂಡಿದ), ಕುರುಕೂರನ್ குருகூரன் = ತಿರುಕ್ಕುರುಕೂರಿನವನಾದ, ಮಾಱನ್ மாறன் = 'ಮಾರನ' (ಮಾಱನ್ ಎಂಬ ಹೆಸರಿನ ಶಠಕೋಪರ), ಪೇರ್ பேர் = ಹೆಸರನ್ನು, ಕೂಱು கூறு = ಹೇಳು.

ವಿಷಯಗಳಲ್ಲಿ ಮುನ್ನುಗ್ಗುವ ಸ್ವಭಾವದ ನನ್ನ ಮನಸ್ಸೇ, ಉತ್ಸಾಹದಿಂದ ಹೇಳಿ, ನಮಸ್ಕರಿಸಿ, ಬಾಯಿತುಂಬ ಸ್ತುತಿಸಿ, ಅಂದವಾದ (ಮ-ರವಾದ) ಜೇನು ಸುರಿಸುತ್ತಿರುವ ಉಪವನಗಳಿಂದ ಸುತ್ತುವರಿದಿರುವ, ಒತ್ತಾಗಿ ಹೂಗಳಿಂದ ತುಂಬಿರುವ, (ತಾಮ್ರಪರ್ಣೀ ನದಿಗೆ) ತಕ್ಕಂತೆ ಹೊಂದಿಕೊಂಡಿರುವ ತಿರುಕ್ಕುರುಕೂರಿನವನಾದ 'ಮಾರ'ನ ಹೆಸರನ್ನು ಹೇಳು.

ಈ ತನಿ ಹೇಳುತ್ತದೆ: ಮನಸ್ಸೇ, ನೀನು ವಿಷಯಗಳನ್ನು, ಎಂದರೆ, ಭಗವಂತನ ಗುಣಾತಿಶಯಗಳನ್ನು, ಚೇತನನು ಉಜ್ಜೀವನಕ್ಕೆ ಬೇಕಾದ ವಿಷಯವನ್ನು ಕೇಳಲಿಕ್ಕೆ ಕೇಳಲು ತವಕಪಡುತ್ತೀ. ಅದನ್ನೆಲ್ಲಾ ಬಹಳ ಸ್ವಾರಸ್ಯಪೂರ್ವಕವಾಗಿ ಹೇಳಬಲ್ಲವ

Garani Srinivasan

(2)

'ನಮ್ಮಾಳ್ವಾರ್' ಎಂದು ಪ್ರಸಿದ್ಧರಾದ ಶಠಕೋಪರು. ಅವರಿಗೆ 'ಮಾರ' ಎಂಬುದೊಂದು ಹೆಸರು. ತಂದೆ ತಾಯಿಗಳು ಇಟ್ಟಿದ್ದರು. ಹೆಸರಿಗೆ ತಕ್ಕಂತೆ ಅವರು ಮಾರನನ್ನು ಜಯಿಸಿದ ಜಿತೇಂದ್ರಿಯರು. ~~ಶ್ರೀವೈಷ್ಣವ ಪ್ರಪನ್ನ~~, ವೇದಾಂತಿಗಳು, ಭಗವದ್ರಾಮಾನುಜರಲ್ಲಿ ಸಾಂಪ್ರದಾಯಿಕ ದರ್ಶನದ ಆಯ ಶಿಖರದಲ್ಲಿ ಪ್ರವರ್ತಕರಾದ ಅನುಸರಣೀಯರಾಗಿ, ಶೇಷ್ಠಿಗಳಾಗಿ, ಪರಮ ಪೂಜ್ಯರೆನಿಸಿಕೊಂಡವರು. ಅವರು ತಿರುಕ್ಕುರುಕೂರು ಎಂಬ ದಿವ್ಯಕ್ಷೇತ್ರದಲ್ಲಿ ಭಗವದ್ವಿಷಯವೂ ಜೀವನ ಉದ್ಧಾರ ಮಾರ್ಗವೂ ಹೇಳುವ ವಿಷಯಗಳೆಲ್ಲವೂ ಅವರು ತಮ್ಮ ನಾಲ್ಕು ಪ್ರಬಂಧಗಳಲ್ಲಿ ಇರುವವು. ನಾಲ್ಕು ವೇದಗಳ ಸಾರವನ್ನು ಅವರು ಸ್ಪಷ್ಟದಿಂದ ಅವರ ರಚಿಸಿ ಪ್ರಸಿದ್ಧರಾದವರು. ಆದ್ದರಿಂದಲೇ, ಮನಸ್ಸೇ, ನೀನು ಉತ್ಸಾಹದಿಂದ ಅವರನ್ನು ಹೃದಯದಿಂದ ಅವರ ವಿಷಯವನ್ನು ಅವರ ಮಾಹಾತ್ಮ್ಯವನ್ನೂ ತಿಳಿಯಲು ಸಿದ್ಧನಾಗು. ಜೀವಿತಾಂತ ನವಿಯಾದ ಅವರ ಊರ ಭಕ್ತಿಯಿಂದಲೂ ಸ್ಮರಿಸು, ನಮಸ್ಕರಿಸು. ಅಂತೆಯೇ ಉಜ್ಜೀವನಕ್ಕಾಗಿ ಪ್ರಬಂಧಗಳನ್ನು ಓದು. ಅದು ನಿನಗೆ ಒಳ್ಳೆಯದು.

— o —

21.12.82

- ಶ್ರೀಃ - ③ - ಶ್ರೀಮತೇ ನಮಃ -

ದಿವ್ಯಪ್ರಬನ್ಧಮ್ - ಮೂಱನೆಯ ಸಾವಿರ - ಪೆರಿಯ ತಿರುವಂದಾದಿ.

திவ்யப்ரபந்தம் - மூன்றாவதாயிரம் - பெரிய திருவந்தாதி

1. முயற்றி சுமந்தெழுந்து முந்துற்ற நெஞ்சே!,
இயற்றுவாய் எம்மொடு நீ கூடி, - நயப்புடைய
நாவின் தொடைக்கிளவி யுள் பொதிவோம், நற்பூவைப்
பூவின்ற வண்ணன் புகழ்.

ಮುಯಱ್ಱಿ ಶುಮನ್ದೆಳುನ್ದು ಮುನ್ದುಱ್ಱ ನೆಂಜೇ!,
ಇಯಱ್ಱುವಾಯ್ ಎಮ್ಮೊಡು ನೀ ಕೂಡಿ, - ನಯಪ್ಪುಡೈಯ
ನಾವಿನ್ ತೊಡೈಕ್ಕಿಳವಿ ಯುಳ್ ಪೊದಿವೋಮ್, ನಱ್ಪೂವೈ
ಪ್ಪೂವಿನ್ಱ ವಣ್ಣನ್ ಪುಗೞ್.

ಮುಯಱ್ಱಿ முயற்றி = ಉತ್ಸಾಹವನ್ನು, ಶುಮನ್ದು சுமந்து = ಹೊತ್ತು ಎಳುನ್ದು எழுந்து = ಜಾಗ್ರತನಾಗಿ, ಮುನ್ದುಱ್ಱ முந்துற்ற = ಮುನ್ನುಗ್ಗುವ, ನೆಂಜೇ நெஞ்சே = ಮನಸ್ಸೇ, ಇಯಱ್ಱುವಾಯ್ இயற்றுவாய் = ಕೆಲಸದಲ್ಲಿ ತೊಡಗಬೇಕು, ಎಮ್ಮೊಡು எம்மொடு = ನಮ್ಮೊಡನೆ, ನೀ நீ = ನೀನು, ಕೂಡಿ கூடி = ಸೇರಿಕೊಂಡು, ನಯಪ್ಪುಡೈಯ நயப்பு உடைய = ಇಂಪನ್ನುಳ್ಳ (ಬಹು ಮಧುರವಾದ, ಸರಸವಾದ), ನಾ நா = ನಾಲಗೆಯಿಂದ, ನಾವಿನ್ நா.ன் = ಹೊಸೆದ (ಛಂದೋಬದ್ಧ), ತೊಡೈ தொடை = ಅಲಂಕಾರಸಾಂಸ್ಕೃತ, ಕ್ಕಿಳವಿ கிளவி = ಭಾಷೆಯ, ಉಳ್ உள் = ಅಂತರಂಗವನ್ನು, ಪೊದಿವೋಮ್ பொதிவோம் = ಕೂಡಿ (ಹೊಂದಿ) ಕೊಳ್ಳೋಣ, ನಱ್ நற் = ಶ್ರೇಷ್ಠವಾದ, ಪೂವೈಪ್ಪೂ பூவைப்பூ = ಅಗಸೆಯ ಹೂವನ್ನು, ಈನ್ಱ ஈன்ற = ಸೃಷ್ಟಿಸುವ, ವಣ್ಣನ್ வண்ணன் = ಬಣ್ಣದವನ, ಪುಗೞ್ புகழ் = ಕಲ್ಯಾಣಗುಣಗಳನ್ನು.

ಉತ್ಸಾಹವನ್ನು ಹೊತ್ತು, ಜಾಗ್ರತನಾಗಿ, ಮುನ್ನುಗ್ಗುವ ಮನಸ್ಸೇ, ನಮ್ಮೊಡನೆ ನೀನು ಸೇರಿಕೊಂಡು ಕೆಲಸದಲ್ಲಿ ತೊಡಗಬೇಕು. ನಾಲಗೆಯಿಂದ ಹೊರಬಿದ್ದ ಅಗಸೆಯ ಹೂವನ್ನು (ಹೂವಿನ ಬಣ್ಣವನ್ನು) ಸೃಷ್ಟಿಸುವ ಬಣ್ಣದವನ ಕಲ್ಯಾಣಗುಣಗಳನ್ನು ವಿವರಿಸುವ ಅಲಂಕಾರದಿಂದ ಕೂಡಿದ ಸಾಂಸ್ಕೃತ ಭಾಷೆಯ ಅಂತರಂಗವನ್ನು ಕೂಡಿ ಕೊಳ್ಳೋಣ. (1)

ಇದು ಶ್ರೀಶಠಕೋಪರು (ನಮ್ಮಾಳ್ವಾರರು) ರಚಿಸಿರುವ ಮೂರನೆಯ ಪ್ರಬಂಧ. ನಾಲ್ಕು ವೇದಗಳ ಸಾರಸಂಗ್ರಹವನ್ನು ಅವರು ತಮ್ಮ ನಾಲ್ಕು ಪ್ರಬಂಧಗಳಲ್ಲಿ, ಸುಂದರವಾದ ತಮಿಳು ಭಾಷೆಯಲ್ಲಿ, ಅಲಂಕಾರಗಳಿಂದ ಕೂಡಿ ಶೋಭಿಸುವಂತೆ ರಚಿಸಿಕೊಟ್ಟಿದ್ದಾರೆ. ಅವರ 'ತಿರುವಿರುತ್ತಮ್' ಎಂಬುದು ಋಗ್ವೇದದ

ಸಾರವಾದರೆ, 'ತಿರುವಾಶಿರಿಯಮ್' ಎಂಬುದು ಯಜುರ್ವೇದದ ಸಾರವಾಯಿತು. ಈ 'ಪೆರಿಯ ತಿರುವಂದಾದಿ'ಯು ಅಥರ್ವಣ ವೇದದ ಸಾರವೆಂದು ಹೇಳಲಾಗುತ್ತದೆ.

ದಿವ್ಯಪ್ರಬಂಧದ ಮೂರನೆಯ ಸಾವಿರದ ಮೊದಲ ನಾಲ್ಕು ಪ್ರಬಂಧಗಳೂ 'ಅಂತಾದಿ'ಗಳೆ. ಅವುಗಳು ಒಂದೊಂದೂ ಒಂದು ನೂರು ಪಾಶುರಗಳಿಂದ ಕೂಡಿದ್ದು. ಶ್ರೀ ಶಠಗೋಪರು ರಚಿಸಿರುವ ಈ 'ಅಂತಾದಿ'ಯಲ್ಲಿ ಕೇವಲ ಎಂಬತ್ತೇಳು ಪಾಶುರಗಳು ಮಾತ್ರವೇ ಆದರೂ ಇದನ್ನು 'ಪೆರಿಯ ತಿರುವಂದಾದಿ' ಎಂದೇಕೆ ಕರೆಯಬೇಕು?

ಸಂಖ್ಯೆಯಲ್ಲಿ ದೊಡ್ಡದಲ್ಲದಿದ್ದರೂ ಹೇಳುವ ವಿಷಯದಲ್ಲಿಯೂ, ಹೇಳುವ ರೀತಿಯಲ್ಲಿಯೂ ಕಂಡುಕೊಂಡಿರುವ ಹಿರಿಮೆಯಿಂದ ಇದಕ್ಕೆ 'ಪೆರಿಯ' ಎಂದರೆ, 'ಹಿರಿಮೆಯುಳ್ಳ' ತಿರುವಂದಾದಿ ಎಂಬ ಹೆಸರನ್ನು ಹೊಂದಿದೆ. ಈ ತಿರುವಂದಾದಿಯಲ್ಲಿ ಆಳ್ವಾರರು ತಮ್ಮ ಮನಸ್ಸಿಗೆ ಉಪದೇಶ ಮಾಡುತ್ತಾರೆ.

ಮನಸ್ಸು ಚಂಚಲವಾದದ್ದು. ಒಂದು ಕ್ಷಣಕಾಲವೂ ಅದು ನಿಲುಗಡೆಯನ್ನು ಹೊಂದಿರಲಾರದು. ದುಂಬಿಯು ಮಧುವನ್ನರಸುತ್ತಾ ಹೇಗೆ ಹೂವಿನಿಂದ ಹೂವಿಗೆ ಎಡೆಬಿಡದಂತೆ ಹಾರಾಡುತ್ತಿರುವುದೋ ಹಾಗೆಯೇ ಮನಸ್ಸು ಸದಾ, ವಿಷಯಾಸಕ್ತಿಯನ್ನು ಅರಸುತ್ತಾ ಚಂಚಲಗೊಳ್ಳುತ್ತಲೇ ಇರುತ್ತದೆ. ಚಂಚಲವಾದ ಮನಸ್ಸನ್ನು ನಿಗ್ರಹಿಸಬೇಕೆಂದೂ, ಅದನ್ನು ಅಂತರ್ಮುಖ ಮಾಡಬೇಕೆಂದೂ ಎಲ್ಲ ಉಪದೇಶಗಳೂ ಸಾರುತ್ತ ಬಂದಿವೆ. ಆಳ್ವಾರರು ಇದರಲ್ಲಿ ಹಿಡಿಯುವುದು ಹೊರಡು! ಚಂಚಲವಾದ ಮನಸ್ಸನ್ನು ಕಡೆಗಣಿಸಿ, ಅದನ್ನು ಯಾತನೆಗೆ ಒಳಗು ಮಾಡುವುದರಲ್ಲಿಯೇ ಕಾಲಕಳೆಯುವ ಬದಲಿಗೆ, ಅದರ ಸ್ವಭಾವಕ್ಕೆ ತಕ್ಕಂತೆ ಅದು ಚಲಿಸುವಂತೆ ಮಾಡುತ್ತಲೇ ಅದನ್ನು ಹದಗೊಳಿಸಿಕೊಳ್ಳಬಹುದು ಎನ್ನುತ್ತಾರೆ ಆಳ್ವಾರರು. ಭಗವಂತನ ಕಲ್ಯಾಣಗುಣಗಳು ಅಸಂಖ್ಯಾತವಾದವು. ಅವುಗಳಲ್ಲಿ ಒಂದೊಂದೂ ಮನಸ್ಸಿಗೆ ಹೊಸದು. ಮನಸ್ಸನ್ನು ಅತ್ತಕಡೆಗೆ ಬಿಟ್ಟುಕೊಂಡು, ಭಗವಂತನ ಒಂದೊಂದು ಕಲ್ಯಾಣಗುಣವನ್ನು ಗಮನಿಸುವಂತೆಯೂ, ತಿಳಿಯುವಂತೆಯೂ, ಅನುಭವಿಸುವಂತೆಯೂ ಮಾಡುತ್ತ ಹೋಗುವುದರಿಂದ ಮನಸ್ಸಿನ ಚಾಂಚಲ್ಯವನ್ನು (ಎಂದರೆ, ಅದರ ನಿಜಸ್ವಭಾವವನ್ನು) ಕೆಡಿಸದೆಯೇ, ಅದನ್ನು ಭಗವದ್ಗುಣಾನುಭವದಲ್ಲಿ ತಿಳಿಯಾಗಿ ಮುಳುಗಿಸಿ, ಬೆಳಗಿಸಿಕೊಂಡು, ಆನಂದಿಸುವಂತೆ ಮಾಡಬಹುದು! ಈ ತಿರುವಂದಾದಿಯಲ್ಲಿ ಆಳ್ವಾರರು ಈ ಹೊಸ ದಾರಿಯನ್ನು ಹಿಡಿದಿರುವುದರಿಂದಲೇ ಇದು 'ಪೆರಿಯ' ತಿರುವಂದಾದಿಯಾಗಿದೆ!

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನಿನಗೆ ಹೊಸ ಹೊಸ ವಿಷಯಗಳನ್ನು ತಂದುಕೊಳ್ಳಲು ನಾ [illegible]

ಉತ್ಸಾಹದಿಂದ ಕಲಿತು ಕೊಂಡರೆ, ನೀನು ಉಜ್ಜೀವನ ಹೊಂದುತ್ತೀಯೆ. ನಿನ್ನ ನಿಜ ಸ್ವಭಾವ ಏನೆಂಬುದು ನಿನಗೆ ಅರ್ಥವಾಗುತ್ತದೆ. ನನ್ನ ನಾಲಗೆಯಿಂದ ಹೊರಬೀಳುವ ಮಾತುಗಳು ಅರ್ಥಪೂರ್ಣವಾದವು. ಅವುಗಳನ್ನು ಸುಂದರವಾಗಿ ಜೋಡಿಸಿ ಹೇಳಲಾಗಿದೆ. ಭಾಷೆಯ ಹೊರ ಅಲಂಕಾರಕ್ಕೆ ನೀನು ಮರುಳಾಗಬಾರದು. ಅದರ ಅಂತರಾರ್ಥದ ಕಡೆಗೆ ನಿನ್ನ ಗಮನವನ್ನು ಹರಿಸಬೇಕು. ಸೌಂದರ್ಯವನ್ನೇ ಸೃಷ್ಟಿಸುವ ಪರಮ ಸುಂದರನಾದ ಭಗವಂತನ ಅನಂತ ಕಲ್ಯಾಣ ಗುಣಗಳನ್ನು ಅರಿತು ಅನುಭವಿಸುವ ಕೆಲಸದಲ್ಲಿ ನಾವೀಗ ತೊಡಗಿದ್ದೇವೆ. ನೀನು ನಮ್ಮೊಡನೆ ಸಹ-ಕರಿಸಬೇಕು. ನಾವು ಈಗ ಮಾಡುವ ಕಾರ್ಯದಲ್ಲಿ ನೀನೂ ಉತ್ಸಾಹದಿಂದ ಮುನ್ನುಗ್ಗಬೇಕು.

2. புகழ்வோம் பழிப்போம் புகழோம் பழியோம்,
இகழ்வோம் மதிப்போம் மதியோம்—இகழோம், மற்று
எங்கள்மால்! செங்கண்மால் சீறல்நீ தீவினையோம்,
எங்கள்மால் கண்டாயிவை.

ಪುಗಳ್ವೋಮ್ ಪಳಿಪ್ಪೋಮ್ ಪುಗಳೋಮ್ ಪಳಿಯೋಮ್,
ಇಗಳ್ವೋಮ್ ಮದಿಪ್ಪೋಮ್ ಮದಿಯೋಮ್—ಇಗಳೋಮ್, ಮಟ್ರು
ಎಙ್ಗಳ್ ಮಾಲ್! ಶೆಙ್ಗಣ್ ಮಾಲ್ ಶೀಱಲ್ ನೀ ತೀವಿನೈಯೋಮ್,
ಎಙ್ಗಳ್ ಮಾಲ್ ಕಣ್ಡಾಯಿವೈ.

ಪುಗಳ್ವೋಮ್ புகழ்வோம் = ಹೊಗಳುತ್ತೇವೆ, ಪಳಿಪ್ಪೋಮ್ பழிப்போம் = ತೆಗಳುತ್ತೇವೆ, ಪುಗಳೋಮ್ புகழோம் = ಸ್ತುತಿಸೆವು, ಪಳಿಯೋಮ್ பழியோம் = ತೆಗಳೆವು, ಇಗಳ್ವೋಮ್ இகழ்வோம் = ನಿರಾದರಿಸುತ್ತೇವೆ (ನಿರಾದರಿಸುವೆವು), ಮದಿಪ್ಪೋಮ್ மதிப்போம் = ಆದರಿಸುವೆವು, ಮದಿಯೋಮ್ மதியோம் = ಆದರಿಸೆವು, ಇಗಳೋಮ್ இகழோம் = ನಿರಾದರಿಸೆವು, ಮಟ್ರು மற்று = ಮತ್ತು, (ಆದರೆ) ಎಙ್ಗಳ್ ಮಾಲ್ எங்கள் மால் = ನಮ್ಮ ಮೋಹಕರೂಪನೇ, ಶೆಙ್ಗಣ್ ಮಾಲ್ செங்கண் மால் = ಕಮಲದಂತೆ ಕಣ್ಣುಳ್ಳ ಸ್ವಾಮಿಯೇ, ಶೀಱಲ್ ನೀ சீறல் நீ = ನೀನು ಕೋಪಗೊಳ್ಳಬಾರದು, ತೀವಿನೈಯೋಮ್ தீவினையோம் = ಕಡುಪಾಪಿಗಳು ನಾವು, ಎಙ್ಗಳ್ ಮಾಲ್ எங்கள் மால் = ನಮ್ಮ ಸ್ವಾಮಿಯೇ, ಕಣ್ಡಾಯ ಇವೈ கண்டாய் இவை = ನೀನು ಇವುಗಳನ್ನು ಕಂಡೆಯಾ?

ಹೊಗಳುತ್ತೇವೆ, (ಅಥವಾ) ತೆಗಳುತ್ತೇವೆ. ಸ್ತುತಿಸೆವು ಎಂದರೆ ತೆಗಳೆವು. ಆದರಿಸುವೆವು ಎಂದರೆ ನಿರಾದರಿಸುವೆವು. ಆದರಿಸೆವು ಎಂದರೆ ನಿರಾದರಿಸೆವು. (ನಮ್ಮ ಮೋಹಕರೂಪನೇ, ಕಮಲದಂತೆ ಕಣ್ಣುಳ್ಳವನೇ, ನೀನು ಕೋಪಗೊಳ್ಳಬಾರದು. ನಾವು ಕಡುಪಾಪಿಗಳು. ನಮ್ಮ ಸ್ವಾಮಿಯೇ ಇವುಗಳನ್ನು ಕಂಡೆಯಾ?

ಮೊದಲ ಪಾಶುರದಲ್ಲಿ ಆಳ್ವಾರರು ತಮ್ಮ ಮನಸ್ಸನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರು. ತಾವು ಕೊಡುವ ಕೆಲಸದಲ್ಲಿ ಅದು ಉತ್ಸಾಹಗೊಳ್ಳಬೇಕೆಂದೂ ಆ ಕಾರ್ಯದಲ್ಲಿ ಮುನ್ನುಗ್ಗಬೇಕೆಂದೂ ಕೇಳಿಕೊಂಡರು. ಅವರು ಹೇಳ ಹೊರಟಿರುವುದು ಸರ್ವೇಶ್ವರನ ದಿವ್ಯಕಲ್ಯಾಣ ಗುಣಗಳನ್ನು ಮನಸಾರ ಸ್ತುತಿಸುವುದು. ಅದೇಕೋ, ಆ ವಿಷಯವನ್ನು ನೆನೆದಾಗ, ಅವರಿಗೆ ಸಂಕೋಚ ಮೂಡಿಬಂದಿರಬೇಕು: "ನಾನೆಷ್ಟು, ಭಗವಂತನೆಷ್ಟು? ಅವನ ಅಸಂಖ್ಯಾತವಾದ ಕಲ್ಯಾಣಗುಣಗಳನ್ನು ಹೊಗಳಿ ಹೇಳುವುದಕ್ಕೆ ಪಾಮರನಾದ ನನ್ನಿಂದ ಸಾಧ್ಯವಾದೀತೇ?" ಎಂದು. ಆದ್ದರಿಂದ, ಅವರು ಈ ಪಾಶುರದಲ್ಲಿ ಅವರು ತಮ್ಮ ಮನಸ್ಸಿನಲ್ಲಿ ಮೂಡಿಬಂದದ್ದನ್ನು ಯಥಾವತ್ತಾಗಿ ಭಗವಂತನಲ್ಲಿಯೇ ಅರಿಕೆ ಮಾಡಿಕೊಳ್ಳುತ್ತಾರೆ. "ವೇಲಕರಾಂಯೇ", "ಕಂದಾವರೆಯಂತೆ ಕಣ್ಣುಳ್ಳವನೇ", "ನಮ್ಮ ಒಡೆಯನೇ" ಎಂಬ ಮೂರು ಪದಗಳಿಂದ ಸ್ವಾಮಿಯನ್ನು ಹೊಗಳಲು ಮೊದಲು ಮಾಡಿದ್ದಾರೆ. ಬಿಡುವಾಯೂ ಭಗವಂತನು ಎಲ್ಲಾ ಚೇತನಾಚೇತನ ವಸ್ತುಗಳಿಗೂ ಒಡೆಯ. ಅತ್ಯಂತ ಚೆಲುವ. ತಮ್ಮ ಒಳಗಣ್ಣಿನಿಂದ ಅವರು ಅನುಭವಿಸಿದ ಸುಂದರ. [illegible]ಕರವಾದ ಕಣ್ಣುಳ್ಳವನು.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನಿನ್ನ ಗುಣಕೀರ್ತನಗಳನ್ನು ನನ್ನಂಥ ತಮೋಪಾಪಿಯಿಂದ ಸಾಧ್ಯವಾದೀತೇ? ನಾನು ನಿನ್ನನ್ನು ಹೊಗಳುತ್ತೇನೆಂದು ಭಾವಿಸಿ ಏನನ್ನಾದರೂ ಹೇಳಹೊರಟೆನೆಂದರೆ, ಅದು ನಿಜವಾಗಿ ಹೊಗಳಿಕೆಯೋ ಅಥವಾ ತೆಗಳಿಕೆಯೋ ಎಂಬ ಶಂಕೆಯುಂಟಾಗುತ್ತದೆ. ನಿನ್ನನ್ನು ಕುರಿತು ಏನನ್ನೂ ಹೇಳದೆ ಸುಮ್ಮನೆ ಇರುವುದರಿಂದ, ನಿನ್ನನ್ನು ಈಗ ಹೊಗಳುವುದೂ ಇಲ್ಲ, ತೆಗಳುವುದೂ ಇಲ್ಲ ಎಂದಂತಾಗುತ್ತದೆ. ನಿನ್ನನ್ನು ಆದರದಿಂದ ಕಾಣುತ್ತೇನೆ ಎಂದುಕೊಂಡರೆ ಅದು ಆದರವೋ ನಿರಾದರವೋ ತಿಳಿಯದೆ ಹೋಗುತ್ತದೆ. ಆದ್ದರಿಂದ, ತಮೋಪಾಪಿಯಾದ ನಾನು ಈಗ ಆಡುವ ಮಾತುಗಳಿಂದ ನೀನು ಕೋಪಗೊಳ್ಳಬಾರದು. ನಾನು ಏನೇ ಹೇಳಿದರೂ ಅದನ್ನು ನೀನು ಒಳ್ಳೆಯ ಮಾತೆಂದೇ ಸ್ವೀಕರಿಸಬೇಕೆಂಬುದು ನನ್ನ ಮೊದಲ ಪ್ರಾರ್ಥನೆ.

ಬಾಯಿ ಬಿಟ್ಟು ಭಗವಂತನನ್ನು ಹೊಗಳುವ ನೆಪದಿಂದ ಅವನನ್ನು ಅವಹೇಳನ ಮಾಡುವುದಕ್ಕಿಂತಲೂ, ತೆಪ್ಪಗೆ ಬಾಯಿಮುಚ್ಚಿ ಕುಳಿತಿರುವುದು ಲೇಸು. ಆದರೆ, 'ವಾಲಕರಂ', 'ಪುಂಡರೀಕಾಕ್ಷ', 'ಸರ್ವೇಶ್ವರ' ಎಂಬ ಮಾತುಗಳಿಂದ ಅವನ ಗುಣಗಾನ ಮಾಡುವುದು ಒಳ್ಳೆಯದೇ ಅಲ್ಲವೇ?

"ನಾನು ಅಲ್ಪ, ಪಾಪಿ; ನೀನು ಮಹನೀಯ, ಸರ್ವೇಶ್ವರ" ಎಂದು ಹೇಳತೊಡಗುವುದು ಭಗವಂತನ ಹಿರಿಮೆಯನ್ನೂ, ನಮ್ಮ ಅಲ್ಪತೆಯನ್ನೂ ಸೂಚಿಸುವ ಮಾತು. ಇದು ಪೂರ್ಣ ಶರಣಾಗತಿ ತತ್ತ್ವದ ಒಂದು ಭಾಗ. ಆಳ್ವಾರರು ಮೊದಲಲ್ಲೇ ಇದನ್ನು ಸೂಚಿಸಿಕೊಡುತ್ತಿದ್ದಾರೆ. ಭಕ್ತಿ, ಮುಕ್ತಿ, ಪ್ರಪತ್ತಿ ಎಂಬ ವಿಷಯಗಳು ದಿವ್ಯಪ್ರಬಂಧಕ್ಕೆ ಬಲು ಮುಖ್ಯವಾದ ಅಡಿಪಾಯ. ಅದನ್ನು ನೆನಪಿಗೆ ತರಬೇಡವೇ?

Garani Srinivasan

3. இவையன்றே நல்ல இவையன்றே தீய,
இவையென் றிவையறிவ னேலும், – இவையெல்லாம்
என்னாலடைப்புநீக் கொண்ணா திறையவனே!,
என்னால் செயற்பால தென்?

ಇವೈಯನ್ಱೇ ನಲ್ಲ ಇವೈಯನ್ಱೇ ತೀಯ,
ಇವೈಯೆನ್ ಱಿವೈಯಱಿವ ನೇಲುಮ್, – ಇವೈಯೆಲ್ಲಾಮ್
ಎನ್ನಾಲಡೈಪ್ಪುನೀಕ್ ಕೊಣ್ಣಾ ದಿಱೈಯವನೇ!,
ಎನ್ನಾಲ್ ಶೆಯಱ್ಪಾಲದೆನ್?

ಇವೈ ಅನ್ಱೇ ನಲ್ಲ இவை அன்றே நல்ல = ಇವು ಅಲ್ಲವೇ ಒಳ್ಳೆಯದು, ಇವೈ ಅನ್ಱೇ ತೀಯ இவை அன்றே தீய = ಇವು ಅಲ್ಲವೇ ಕೆಟ್ಟದ್ದು, ಇವೈ ಎನ್ಱು இவை என்று = ಇವು ಒಂದೇಯೋ (ಇಂಥದ್ದೇ) ಎಂದು, ಇವೈ இவை = ಇವುಗಳನ್ನು, ಅಱಿವನ್ ಏಲುಮ್ அறிவன் ஏலும் = ಅರಿತವನಾದರೂ, ಇವೈ ಎಲ್ಲಾಮ್ இவை எல்லாம் = ಇವೆಲ್ಲವೂ, ಎನ್ನಾಲ್ என்னால் = ನನ್ನಿಂದ, ಅಡೈಪ್ಪು அடைப்பு = ಅನುಸರಿಸಲೂ, ನೀಕ್ಕ நீக்க = ಬಿಡಲೂ, ಒಣ್ಣಾದು ஒண்ணாது = ಸಾಧ್ಯವಿಲ್ಲ, ಇಱೈಯವನೇ இறையவனே = ಸ್ವಾಮೀ, ಎನ್ನಾಲ್ என்னால் = ನನ್ನಿಂದ, ಶೆಯಱ್ಪಾಲ್ செயற்பால் = ಮಾಡತಕ್ಕದ್ದು, ಅದು ಎನ್ அது என் ಅದೇನು?

ಇವಲ್ಲವೇ ಒಳ್ಳೆಯದು, ಇವಲ್ಲವೇ ಕೆಟ್ಟದ್ದು, ಇವು ಒಂದೇಯೋ (ಇಂಥದ್ದೇ) ಎಂದು ಇವುಗಳನ್ನು ಅರಿತುಕೊಳ್ಳಬಲ್ಲೆನಾದರೂ, ಇವೆಲ್ಲವೂ ನನ್ನಿಂದ ಅನುಸರಿಸುವುದಾಗಲಿ, ಬಿಟ್ಟುಬಿಡುವುದಾಗಲಿ, ಸಾಧ್ಯವಿಲ್ಲ. ಸ್ವಾಮೀ ನನ್ನಿಂದ ಮಾಡುವಂಥದ್ದು ಯಾವುದು? (3)

ಹಿಂದಿನ ಪಾಶುರದ ವಿಷಯವನ್ನೇ ಇಲ್ಲಿ ಮುಂದುವರಿಸಲಾಗುತ್ತದೆ. ಬುದ್ಧಿ ಅಲ್ಪವಾದದ್ದರಿಂದ, ಭಗವಂತನನ್ನು ಹೊಗಳುವ ಹಾಗೆ ಮಾತನಾಡಿದರೂ ಸಹ ಅದು ಅವನನ್ನು ಕೆಣಕಿದಂತೆಯೇ ಆಗಬಹುದು. ಅಂಥ ಅನುಮಾನಾಸ್ಪದವಾದ ಹೊಗಳಿಕೆಗಿಂತಲೂ, ಸುಮ್ಮನೆ ಸುಮ್ಮನಿರುವುದು ಮೇಲಲ್ಲವೇ? ಇದನ್ನು ನಿರ್ಧರಿಸುವುದು ಹೇಗೆ? — ಎಂಬುದು ವಿಷಯ.

ಆಳ್ವಾರರು ಕೇಳುತ್ತಾರೆ: ಸ್ವಾಮೀ, ನನಗೆ ನೀನು ಕೊಟ್ಟಿರುವ ಬುದ್ಧಿಯಿಂದ ಯಾವುದು ಯುಕ್ತ, ಯಾವುದು ಅಯುಕ್ತ, ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು ಎಂಬುದು ನನಗೆ ಗೊತ್ತಾಗುತ್ತದೆ. ಆದರೆ, ಅದೇ ರೀತಿಯಲ್ಲ, ಅವುಗಳನ್ನು ಅನುಸರಿಸುವುದಕ್ಕೂ ಬಿಡುವುದಕ್ಕೂ, ಎಂದರೆ, ನಾನು ಅರಿತುಕೊಂಡದ್ದನ್ನು ಕಾರ್ಯಗತ ಮಾಡುವುದಕ್ಕೆ, ನನಗೆ ಸಾಧ್ಯವಿಲ್ಲವಾಗಿದೆ. ಆದ್ದರಿಂದ, ನಾನು ಯಾವುದನ್ನು ಹೇಗೆ ಮಾಡಲಿ ಎಂಬುದನ್ನು ನೀನೇ ನನಗೆ

Garani Srinivasan

ತಿಳಿಯಬೇಕಾಗಿದೆ.

4. எண்ணின் மிகுபுகழார் யாவரே?, பின்னையும் மற்
றெண்ணில் மிகுபுகழேன் யானல்லால், - என்ன
கருஞ்சோதிக் கண்ணன், கடல்புரையும், சீலப்
பெருஞ்சோதிக் கென்னெஞ்சாள் பெற்று.

ಎನ್ನಿನ್ ಮಿಕ್ಕುಪುಗಳಾರ್ ಯಾವರೇ?, ಪಿನ್ನೈಯುಮ್ ಮ
ತ್ತೆಣ್ಣಿಲ್ ಮಿಕ್ಕುಪುಗಳೇನ್ ಯಾನಲ್ಲಾಲ್, - ಎನ್ನ
ಕರುಂಶೋದಿ ಕ್ಕಣ್ಣನ್, ಕಡಲ್ ಪುರೈಯುಮ್, ಶೀಲ
ಪ್ಪೆರುಂಶೋದಿ ಕ್ಕೆನ್ನೆಂಜಾಳ್ ಪೆಟ್ರು.

ಎನ್ನಿನ್ எண்ணின் = ನನ್ನ ಹೊರತು, ಮಿಕ್ಕು மிகு = ಬಹಳ, ಪುಗಳಾರ್ புகழார் = ಹೊಗಳುವವರು, ಯಾವರೇ யாவரே = ಯಾರಿರಬಹುದೇ? ಪಿನ್ನೈಯುಮ್ பின்னையும் = ಇನ್ನು ಮುಂದೆಯೂ, ಮತ್ತು ಎಣ್ಣಿಲ್ மற்றெண்ணில் = ಮತ್ತೆ ಯೋಚಿಸಿದರೂ, ಮಿಕ್ಕು மிகு = ಬಹಳ, ಪುಗಳೇನ್ புகழேன் = ಹೊಗಳುವವನು, ಯಾನ್ ಅಲ್ಲಾಲ್ யான் அல்லால் = ನಾನಲ್ಲದೆ,- ಎನ್ನ என்ன = ನನ್ನ, ಕರುಮ್ ಶೋದಿ கரும் சோதி = ಕಪ್ಪುಬಣ್ಣದಿಂದ ಹೊಳೆಯುವ, (ಕಪ್ಪುಬಣ್ಣದ), ಕಣ್ಣನ್ கண்ணன் = ಆಕರ್ಷಕನೂ (ಕೃಷ್ಣನೂ), ಕಡಲ್ ಪ್ಪುರೈಯುಮ್ கடல் புரையும் = ಕಡಲನ್ನು ಹೋಲುವ, ಶೀಲನ್ = ಸ್ವಭಾವದವನೂ, ಪೆರುಮ್ ಶೋದಿಕ್ಕು பெரும் சோதிக்கு = ದೊಡ್ಡ ಜ್ಯೋತಿಸ್ವರೂಪದವನೂ, ಆಳ್ವಿವನೂ, ಆದ ಸ್ವಾಮಿಗೆ, ಎನ್ ನೆಂಜು என் நெஞ்சு = ನನ್ನ ಮನಸ್ಸು, ಆಳ್ ಪೆಟ್ರು ஆள் பெற்று = ದಾಸನಾಗಿ.

ನನ್ನ ಕಪ್ಪುಬಣ್ಣದ ಆಕರ್ಷಕನಾದ, ಕಡಲನ್ನು ಹೋಲುವ ಸ್ವಭಾವದವನಾದ, ದೊಡ್ಡ ಜ್ಯೋತಿಸ್ವರೂಪನಾದ ಸ್ವಾಮಿಗೆ ನನ್ನ ಮನಸ್ಸು ದಾಸನಾಗಿ, ನನ್ನ ಹೊರತು ಬಹಳ ಹೊಗಳುವವರು ಯಾರಿರಬಹುದೇ? ಇನ್ನು ಮುಂದೆಯೂ, ಯೋಚಿಸಿ ನೋಡಿದರೂ, ಬಹಳ ಹೊಗಳುವವನು ನಾನಲ್ಲದೆ (ಬೇರೆಯಾರಿರಬಹುದು?) (4)

ಹಿಂದಿನ ಪಾಶುರದಲ್ಲಿ, ತಮ್ಮ ಅಲ್ಪತೆಯನ್ನು ಭಗವಂತನ ಅವರ ಹಿರಿಮೆಯನ್ನು ಆಳ್ವಾರರು ಸೂಚಿಸಿದರು. ಈಗ, ತಮ್ಮ ಮನಸ್ಸು ಭಗವಂತನ ಮಹಾ ಸ್ವಭಾವಗಳಿಗೆ ಒಳಪಟ್ಟು, ಅವನಿಗೆ ಆಳಾಗಿರುವುದರಿಂದ, ಎಡೆಬಿಡದಂತೆ ಸ್ವಾಮಿಯನ್ನು ಹೊಗಳುವುದೇ ಇದರ ಸ್ವಭಾವವಾಗಿದೆ ಎನ್ನಲಾಗುತ್ತದೆ.

"ಎನ್ನ ಕರುಂಶೋದಿ" – ಭಗವಂತನೇ ತನ್ನ ಅತ್ಯಂತ ಪ್ರಿಯವಸ್ತು. ಅದು ಕಪ್ಪುಬಣ್ಣದ ಪ್ರಕಾಶದಿಂದ ಕೂಡಿದ್ದರೂ ಸಹ, ಅದು ತನಗೆ (ಆಳ್ವಾರರಿಗೆ - ಅವರ ಮನಸ್ಸಿಗೆ) ಅತ್ಯಂತ ಆಕರ್ಷಕವಾದದ್ದು.

'ಕಡಲ್ ಪ್ಪುರೈಯುಮ್ ಶೀಲನ್' – ಇಲ್ಲಿ ಭಗವಂತನನ್ನು ಕಡಲಿಗೆ ಹೋಲಿಸಲಾಗಿದೆ. ಎಲ್ಲೆ ಕಾಣದಂತೆ ವಿಸ್ತಾರವಾಗಿ ಹರಡಿರುವುದು, ಗಂಭೀರವಾದದ್ದು

ಕದಲು. ಹಾಗೆಯೇ, ಭಗವಂತನೂ ಸಹ ಅನಂತನೂ, ಸರ್ವವ್ಯಾಪಿಯೂ, ಗಂಭೀರನೂ, ಕದಲಬಲ್ಲಾದವನೂ ಆಗಿದ್ದಾನೆ.

ಆಳ್ವಾರರು ಹೇಳುತ್ತಾರೆ: ನನ್ನ ಮನಸ್ಸು ಪೂರ್ಣವಾಗಿ ಭಗವಂತನಲ್ಲಿ ದಾಸ್ಯವಿಟ್ಟಿದೆ. ಆದ್ದರಿಂದ, ಅದು ಅತ್ಯಂತ ಪ್ರಶಾಂತವೂ ಕದಲದ ಸ್ವಭಾವದವನೂ ಆದ ಸ್ವಾಮಿಯನ್ನು ಬಾಯಿತುಂಬ ಹೊಗಳುವುದರಲ್ಲೇ ನಿರತವಾಗಿದೆ. ಎಷ್ಟು ಯೋಚಿಸಿ ನೋಡಿದರೂ, ನನ್ನಂತೆ ಭಗವಂತನನ್ನು ಬೇರೆಯಾಗಿ ಧ್ಯಾನಿಸಲಾರರು ಎನಿಸುತ್ತದೆ.

5. பெற்ற தாய் நீயே பிறப்பித்த தந்தை நீ,
மற்றையா ராவாரும் நீபேசில், — எற்றேயோ!
மாய! மா மாயவளை மாய முலை வாய்வைத்த,
நீயம்மா! காட்டும் நெறி.

ಪೆತ್ತ್ರ ತಾಯ್ ನೀಯೇ ಪಿಱಪ್ಪಿತ್ತ ತನ್ದೈ ನೀ,
ಮತ್ತ್ರೈಯಾ ರಾವಾರುಮ್ ನೀ ಪೇಶಿಲ್, — ಎತ್ತ್ರೇಯೋ!
ಮಾಯ! ಮಾ ಮಾಯವಳ್ಳೈ ಮಾಯ ಮುಲೈ ವಾಯ್ವೈತ್ತ,
ನೀಯಮ್ಮಾ! ಕಾಟ್ಟುಮ್ ನೆಱಿ.

ಪೆತ್ತ್ರ ತಾಯ್ ನೀಯೇ பெற்ற தாய் நீயே = ಹೆತ್ತ ತಾಯಿ ನೀನೇ, ಪಿಱಪ್ಪಿತ್ತ பிறப்பித்த = ಹುಟ್ಟಿಸಿದ, ತನ್ದೈ ನೀ தந்தை நீ = ತಂದೆ ನೀನು, ಮತ್ತ್ರೈಯಾರ್ மற்றையார் = ಮತ್ತವರು (ಇತರರು) ಯಾರು, ಆವಾರುಮ್ ஆவாரும் = ಆಗುವವರೂ, ನೀ நீ = ನೀನು, ಪೇಶಿಲ್ பேசில் = ಮಾತನಾಡಲು, (ಹೇಳಲು), ಎತ್ತ್ರೇಯೋ எற்றேயோ = (ನನ್ನನ್ನು) ದೂರ ಮಾಡುವೆಯೋ (ತಳ್ಳುವೆಯೋ), ಮಾಯ மாய = ಆಶ್ಚರ್ಯಕರನೇ, ಮಾ மா = ಮಹಾ, ಮಾಯವಳ್ಳೈ மாயவளை = ಮಾಯಗಾತಿಯನ್ನು, ಮಾಯ மாய = ಮಡಿಯುವಂತೆ, ಮುಲ್ಲೈ முலை = ಮೊಲೆಗೆ, ವಾಯ್ ವೈತ್ತ ನೀ வாய்வைத்த நீ = ಬಾಯಿ ಹಚ್ಚಿದ ನೀನು, ಅಮ್ಮಾ அம்மா = ಅಯ್ಯೋ, ಕಾಟ್ಟುಮ್ ನೆಱಿ காட்டும் நெறி = ನನಗೆ ದಾರಿಯನ್ನು ತೋರಿಸುವುದಕ್ಕೆ.

ನೀನೇ ಹೆತ್ತ ತಾಯಿ. ಹುಟ್ಟಿಸಿದ ತಂದೆಯೂ ನೀನು. ಹೇಳಹೋದರೆ ಇತರರು ಯಾರಾರು [illegible]ವಂತರಾಗುವವರೋ ಅವರೆಲ್ಲರೂ ನೀನು. ಆಶ್ಚರ್ಯಕರನೇ, ಮಹಾ ಮಾಯಗಾತಿಯನ್ನು ಮಡಿಯುವಂತೆ (ಅವಳ) ಮೊಲೆಗೆ ಬಾಯಿ ಹಚ್ಚಿದ ನೀನು ನನಗೆ ದಾರಿಯನ್ನು ತೋರದೆ ನನ್ನನ್ನು ದೂರ ತಳ್ಳುವೆಯೋ, ಅಯ್ಯೋ! (5)

ಭಗವಂತನನ್ನು ಸ್ತುತಿಸುವುದು ತಮ್ಮ ಮನಸ್ಸಿನ ಸ್ವಭಾವವಾಗಿದೆ ಎಂದು ಆಳ್ವಾರರು ಹೇಳಿದರು. ಈ ಪಾಶುರದಲ್ಲಿ ಅವರಿಗೆ ಭಗವಂತನೊಡನೆ ಇರುವ ಪವಿತ್ರವಾದ ಸಂಬಂಧವನ್ನೂ, ಆ ಕಾರಣದಿಂದಲಾದರೂ ಸ್ವಾಮಿಯು ತಮ್ಮನ್ನು ನಿರಾಕರಿಸಬಾರದು

Garani Srinivasan

ಎಂದು ಬೇಡಿಕೊಳ್ಳುತ್ತಾರೆ.

'ಮಾ ಮಾಯವಳ್ಳೈ ಮಾಯ ಮುಲೈ ವಾಯ್ ವೈತ್ತ ನೀ" — ಇದು ಭಗವಂತನು ಶ್ರೀಕೃಷ್ಣಾವತಾರದಲ್ಲಿ ನಡೆಸಿದ ಒಂದು ಆಶ್ಚರ್ಯಕರ ಪ್ರಸಂಗ. ಶ್ರೀಕೃಷ್ಣನು ಮಗುವಾಗಿ, ನಂದಗೋಕುಲದಲ್ಲಿ ಬೆಳೆಯುತ್ತಿರುವಾಗ, ಅವನ ಸೋದರಮಾವನಾದ ದುಷ್ಟ ಕಂಸನು ಅವನನ್ನು ಕೊಲ್ಲಲು ಪೂತನಿ ಎಂಬ ರಾಕ್ಷಸಿಯನ್ನು ಕಳುಹಿಸಿದನು. ಅವಳು ತಾಯಿ ಯಶೋದೆಯ ರೂಪವನ್ನು ಅಳವಡಿಸಿಕೊಂಡು, ಅವಳಿಲ್ಲದ ಸಮಯದಲ್ಲಿ ಬಂದು, ದಿವ್ಯಶಿಶುವಾದ ಕೃಷ್ಣನನ್ನೆತ್ತಿಕೊಂಡು ವಿಷದ ಮೊಲೆಯನ್ನೂಡಿಸಲು ಯತ್ನಿಸಿದಳು. ಶ್ರೀಕೃಷ್ಣನು (ಏನೂ ಅರಿಯದಂತೆಯೇ) ಅವಳ ಮೊಲೆಯನ್ನು ಆದರದಿಂದ ಕುಡಿಯುವ ನೆಪದಲ್ಲಿ ಅವಳ ಪ್ರಾಣವನ್ನು ಹೀರಿ ಅವಳನ್ನು ಕೊಂದು ಹಾಕಿದನು. ಇದು ಎಂಥ ಆಶ್ಚರ್ಯಕರವಾದದ್ದು!

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನನಗೆ ಜನ್ಮವಿತ್ತ ತಾಯಿಯೂ, ತಂದೆಯೂ ನೀನು. ಅಲ್ಲದೆ, ನನಗೆ ಹಿತಕಾರಿಗಳಾಗಿರುವ ಬಂಧು, ಬಳಗ, ಗುರು, ಗೆಳೆಯ, ಇತ್ಯಾದಿ ಎಲ್ಲರೂ ನೀನೇ. ನಿನ್ನ ಹೊರತು ನನಗೆ ಯಾರೂ ಹಿತಕಾರಿಗಳಿಲ್ಲ. ಮಾಯದಿಂದ ನಿನ್ನನ್ನು ಕೊಲ್ಲಲು ಬಂದ ವಂಚಕಿಯಾದ ಪೂತನಿಯ ವಿಷದ ಮೊಲೆಯನ್ನುಣ್ಣುವ ನೆಪದಿಂದಲೇ ಅವಳ ಪ್ರಾಣಗಳನ್ನೇ ಹೀರಿ ಕೊಂದ ಆಶ್ಚರ್ಯಕಾರಿ ನೀನಲ್ಲವೇ? ನನ್ನ ಉಜ್ಜೀವನಕ್ಕೆ ನೀನು ದಾರಿ ತೋರಬಾರದೇ? ವಾತ್ಸಲ್ಯದಿಂದ ನನ್ನನ್ನು ನೋಡಿಕೊಳ್ಳುವ ಬದಲಾಗಿ ದೂರತಳ್ಳುವೆಯಾ?

ಸರ್ವಜ್ಞನಾದ ಭಗವಂತನು ಸರ್ವಸಮರ್ಥನೂ ಹೌದು. ಅವನನ್ನೇ ಗತಿ ಎಂದು ನಂಬಿ, ಆಶ್ರಯಿಸಿದವರನ್ನು ಅವನು ಎಂದಿಗೂ ದೂರತಳ್ಳನು. ಕಾರುಣ್ಯಮೂರ್ತಿಯು ಅವನಲ್ಲವೇ!

6. நெறிகாட்டி நீக்குதியோ? நின்பால், கருமா
முறிமேனி காட்டுதியோ?, மேனாள் அறியோமை
என்செய்வா னெண்ணினாய்? கண்ணனே!, ஈதுரையாய்
என்செய்தால் என்படோம் யாம்?

ನೆಱಿ ಕಾಟ್ಟಿ ನೀಕ್ಕುದಿಯೋ? ನಿನ್ಪಾಲ್ ಕರುಮಾ
ಮುಱಿ ಮೇನಿ ಕಾಟ್ಟುದಿಯೋ?, ಮೇನಾಳ್ ಅಱಿಯೋಮೈ
ಎನ್ ಶೆಯ್ವಾ ನೆಣ್ಣಿನಾಯ್? ಕಣ್ಣನೇ! ಈದುರೈಯಾಯ್
ಎನ್ ಶೆಯ್ದಾಲ್ ಎನ್ ಪಡೋಮ್ ಯಾಮ್?

ನೆಱಿ ಕಾಟ್ಟಿ நெறி காட்டி = ದಾರಿ (ವಿಧಿ)ಯನ್ನು ತೋರಿಸಿ, ನೀಕ್ಕುದಿಯೋ? நீக்குதியோ? = (ನನ್ನನ್ನು) ದೂರಮಾಡುವೆಯೋ (ನೀಕಿಬಿಡುವೆಯೋ?), ನಿನ್ಪಾಲ್ நின்பால் = ನಿನ್ನ ಕಡೆಯಿಂದ (ನಿನ್ನದಾದ), ಕರು கரு = ಕರಿಯ, ಮಾ மா = ಅದ್ಭುತವಾದ, ಮುಱಿ முறி = ಕೋಮಲವಾದ, ಮೇನಿ மேனி = ಸ್ವರೂಪವನ್ನು, ಕಾಟ್ಟುದಿಯೋ காட்டுதியோ = ತೋರುವೆಯೋ? ಮೇಲ್ ನಾಳ್ மேல் நாள் =

Garani Srinivasan

- ಶ್ರೀಮತೇ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

।

ಮೂನ್ರಾವದಾಯಿರಂ

।

1 ಪೆರಿಯ ತಿರುವನ್ದಾದಿ (ಪಾಶುರಗಳು 112)

2 ತಿರುವಾಶಿರಿಯಂ (ಪಾಶುರಗಳು 20)

ನಮ್ಮಾಳ್ವಾರ್

(ತಿರುಕ್ಕುರುಗೂರ್ ಶಠಗೋಪನ್)

।

ಮೂರನೆಯ ಸಾವಿರ

ತಮಿಳು ಪಾಶುರಲ ಕನ್ನಡದಲ್ಲಿ ಪ್ರತಿಪದಾರ್ಥ ವ್ಯಾಖ್ಯಾನ
ಮತ್ತು
ವಿವರಣೆಯೊಂದಿಗೆ

ಸಂಪುಟ-13

Garani Srinivasan

బలుహిందిన కాలదిందలూ, అఱియోఽమ్మై అఱ్ఱియోగ్గం = అఱియదవరాద (అజ్ఞానిగళాద)
నమ్మన్ను, ఎన్ శెయ్‌వాన్ గణ్ ణశియ్ ఖాణ్ = ఏను మాడబేకెందు,
ఎణ్ణినాయ్ గణ్ణణ్ణిఱుప్ = ఎణిసిద్దేయె? కణ్ణనే కణ్ణణాణే =
అశ్చర్యశక్తనే, ఈదు గా.క్కు = ఇదన్ను, ఉర్తియాంయ్ ఉఱ్ఱాయాయ్ = దేహ
ఉయ్యు, (దేహవు), ఎన్ శెయ్‌దాల్ గణ్ ణశియ్ క్కాగు = ఏనుమాడిదరే,
ఎన్ పదోఽమా గణ్ పఠింటోగం = ఏనన్ను అనుభవిసువెవు, యాం మా యాగం
= నావు.

ఆశ్చర్యశక్తనే, దారి (విధి)యన్ను తోరలిసి, నమ్మన్ను నీఽగ బిడువేయో?
నిన్న కథెయ అద్భుతవాద కోమలవాద స్వరూపవన్ను తోరువెయో?
బలు హిందిన కాలదిందలూ అజ్ఞానిగళాద నమ్మన్ను ఏను మాడబేకెందు
ఎణిసిద్దేయె? నావు ఏను మాడిదరే ఏనన్ను అనుభవిసువెవు? ఇదన్ను హేళు (6)

హిందిన పాశురదల్లి, 'స్వామీ నమగె దారి తోరు' ఎందు ఆళ్వారరు బేడి
కొండరష్టే! ఇల్లి అదన్ను ఇన్నష్టు స్పష్టవాగి అర్థ మాడికొళ్ళుత్తిద్దారే.

'నీయీ కొట్టి నీఽక్కుదియో?' — నిన్నన్ను సేరలు నన్న మనస్సు హాతొరెయ
యుత్తిదె. అదక్కె తక్క దారియన్ను తోరిసెందు నా బేడిదనష్టే. అదక్కె, "నీను
'హెగల్లి దారిగళివె' ఎందరే 'జ్ఞాన మార్గ', 'భక్తి మార్గ', 'కర్మమార్గ', మూరు
ద మార్గగళివె. ఇవుగళల్లి నినగె యావుదు హొందికెయాగిదెయో అదన్ను
మాడికో" ఎందు హేళి, నన్నన్ను ఉదాసీన మాడువెయా?

'నీన్ పాల్ కరుమ [illegible] ముటఱి వోటి కొటుదియో?' — "నిన్న కథెయ
అద్భుతవాద మత్తు కోమలవాద రూపవన్ను తోరువెయో?" అథవా "నిన్న
జగత్తన్ను కలగిసి హొండెనెంబ కథెయ భయంకర రూపవన్ను తోరువెయో?

"వేఽనాళ్ అఱియోఽమ్మై" — 'బలు హిందినిందలూ నావు నిన్న బగ్గె
అజ్ఞానిగళాగి, నిన్నన్ను అరితుకొళ్ళలారదె, హుట్టు-సావుగళ గొందలదల్లి-
యే సిక్కికొండు నరళుత్తిరువవరు నావు!

"ఎన్ శెయ్‌వాన్ ఎణ్ణినాయ్?" — 'నమ్మన్ను కురితు నీనేను యోచి
సిద్దీ? ఉద్ధరిసబేకెందే? అథవా, అధోస్థితియల్లియే కెడవిరబేకెందే?'

"ఎన్ శెయ్‌దాల్, ఎన్ పడోఽమా యాం మా" — 'నావేను మాడిదరే,
ఏనన్ను అనుభవిసుత్తేవె? — ఎందరే, యావుదన్ను మాడిదరే నమగె ఉజ్జీవ
నవుంటాగుత్తదె?, మత్తు ఏరింద నమగె సాంసారిక తాపత్రయదింద బిడు
గడెయుంటాగుత్తదె? నావేను మాడిదరే ఏను ఫల దొరెయువుదో నమగె
తిళియువుదిల్ల — అంథ అజ్ఞానిగళు నావు.

ಆಳ್ವಾರರು ಹೇಳುತ್ತಾರೆ: 'ಸ್ವಾಮೀ, ಅಜ್ಞಾನಿಯಾದ ನಾನು ಕೇಳುತ್ತಿರುವಂತೆ, ನನಗೆ ದಾಸ್ಯವನ್ನು ಕೊಟ್ಟು ಉದಾಸೀನನಾಗಿ ಬಿಡುತ್ತೀಯೋ? ಅಥವಾ, ನಿನ್ನ ಕೋಮಲವಾದ ದಿವ್ಯಸುಂದರವಾದ (ಕಾಯ) ರೂಪವನ್ನು ತೋರುವೆಯೋ? ಅಥವಾ, ನಿನ್ನ ನನ್ನ ಬಾಂಧವ್ಯವು ಕಡಿದು ಹೋಗುವಂತೆ ಭಯಂಕರವಾದ ಕಾಯರೂಪವನ್ನು ತೋರಿ ನನ್ನನು ಹೆದರಿಸುವೆಯೋ? ನೀನು ನಮ್ಮ ವಿಷಯದಲ್ಲಿ ಏನು ಮಾಡಬೇಕೆಂದು ಯೋಚಿಸಿದ್ದೀ? ನಾವು ಏನು ಮಾಡಿದರೆ ಏನನ್ನು ಅನುಭವಿಸುವವರಾಗುತ್ತೇವೆ ಎಂಬುದನ್ನು ಕೃಪೆಮಾಡಿ ನನಗೆ ಹೇಳುವೆಯಾ?

7. யாமே அருவினையோம் சேயோம், என்னெஞ்சினார்
தாமே அணுக்கராய்ச் சார்ந்தொழிந்தார், – பூமேய
செம்மாதை நின்மார்வில் சேர்வித்து, பாரிடந்த
அம்மா! நின் பாதத் தருகு.

ಯಾಮೇ ಅರುವಿನ್ನೈಯೋಮ್ ಶೇಯೋಮ್, ಎನ್ನೆಂಜಿನಾರ್
ತಾಮೇ ಅಣುಕ್ಕರಾಯ್ ಶ್ಶಾರ್ನ್ದೊಳಿನ್ದಾರ್,– ಪೂಮೇಯ
ಶೆಮ್ಮಾದೈ ನಿನ್ಮಾರ್ವಿಲ್ ಶೇರ್ವಿತ್ತು, ಪಾರಿಡನ್ದ
ಅಮ್ಮಾ! ನಿನ್ ಪಾದತ್ತರುಗು.

ಯಾಮೇ யாமே = ನಾವೇ, ಅರುವಿನ್ನೈಯೋಮ್ அருவினையோம் = ಕಡುಪಾತಕಿಗಳು, ಶೇಯೋಮ್ சேயோம் = ನಿನ್ನಿಂದ ದೂರವಾಗಿರುವವರು, ಎನ್ನೆಂಜಿನಾರ್ என்னெஞ்சினார் = ನನ್ನ ಹೃದಯದಲ್ಲಿರುವವರು, ತಾಮೇ தாமே = ತಾವೇ, ಅಣುಕ್ಕರಾಯ್ அணுக்கராய் = ಅತ್ಯಂತ ಸಮೀಪವರ್ತಿಗಳಾಗಿ, ಶಾರ್ನ್ದು ಒಳಿನ್ದಾರ್ சார்ந்து ஒழிந்தார் = ನನ್ನ ಅಂತರಂಗವನ್ನು ಸೇರಿರುವವರು, ಪೂಮೇಯ பூமேய = ಹೂವಿನಲ್ಲಿರುವ, ಶೆಮ್ಮಾದೈ செம்மாதை = ದಿವ್ಯಸುಂದರಿಯಾದ ಶ್ರೀಯನ್ನು (ಶ್ರೀದೇವಿಯನ್ನು), ನಿನ್ಮಾರ್ವಿಲ್ நின் மார்வில் = ನಿನ್ನ ಎದೆಯಲ್ಲಿ, ಶೇರ್ವಿತ್ತು சேர்வித்து = ಸೇರಿಸಿಕೊಂಡಿರುವ, ಪಾರ್ ಇಡನ್ದ பார் இடந்த = ಭೂಮಿಯನ್ನು ಉದ್ಧರಿಸಿದ, ಅಮ್ಮಾ அம்மா = ಸ್ವಾಮೀ, ನಿನ್ ಪಾದತ್ತು ಅರುಗು நின் பாதத்து அருகு = ನಿನ್ನ ತಿರುವಡಿಯ ಸಮೀಪದಲ್ಲಿ.

ಕಡುಪಾತಕಿಗಳೂ, ನಿನ್ನಿಂದ ದೂರವಾಗಿರುವವರೂ ನಾವೇ. ನಮ್ಮ ಹೃದಯದಲ್ಲಿರುವವರೂ, ಅತ್ಯಂತ ಸಮೀಪವರ್ತಿಗಳಾಗಿ, ನಮ್ಮ ಅಂತರಂಗವನ್ನು ಸೇರಿರುವವರೂ ತಾವೇ. ಹೂವಿನಲ್ಲಿ ವಾಸಿಸುವ ದಿವ್ಯಸುಂದರಿಯಾದ ಶ್ರೀದೇವಿಯನ್ನು ತಮ್ಮ ಹೃದಯದಲ್ಲೇ ಸೇರಿಸಿಕೊಂಡಿರುವ, ಮತ್ತು ಭೂದೇವಿಯನ್ನು ಉದ್ಧರಿಸಿದ ಸ್ವಾಮೀ, ನಿನ್ನ ತಿರುವಡಿಯ ಸಮೀಪದಲ್ಲಿ (ನನ್ನನ್ನಿರಿಸಿಕೊ). (7)

"ಸ್ವಾಮೀ, ನನಗೆ ದಾಸ್ಯವನ್ನು ಕೊಟ್ಟು, ನನ್ನಲ್ಲಿ ಉದಾಸೀನರಾಗುವಿರೋ?

ನಿಮ್ಮ ದಿವ್ಯ ಸ್ವರೂಪವನ್ನು ತೋರುತ್ತೀರೋ? ಏನು ಮಾಡಬೇಕೆಂದಿರುತ್ತೀರಿ?" ಎಂದು ಹಿಂದಿನ ಪಾಶುರದಲ್ಲಿ ಆಳ್ವಾರರು ಭಗವಂತನನ್ನು ಪ್ರಶ್ನಿಸಿದರಷ್ಟೆ. ತಮ್ಮ ಪ್ರಶ್ನೆ ತಪ್ಪಾದದ್ದೆಂದೂ, ಕಾಪಾಡುವ ಸ್ವಾಮಿಯಲ್ಲಿ ಅತಿಚಾರವೆಸಗಿದ ಹಾಗಾಯಿತೆಂದೂ ಆಳ್ವಾರರು ತಿಳಿದುಕೊಂಡಿರಬೇಕು. ಅದಕ್ಕೆ ಒಂದು ಬಗೆಯಲ್ಲಿ ಅವರು ಸಮಾಧಾನವನ್ನು ಹೇಳುತ್ತಾರೆ, ಈ ಪಾಶುರದಲ್ಲಿ.

"ಪೂ ಮೇಯು ಶೆಮ್ಮಾದುವೈ ನಿನ್ ಮಾರ್ವಿಲ್ ಶೇರ್ ವಿತ್ತು" — ದೇವಾಸುರರಿಂದ ಭಗವಂತನು ನಡೆಸಿದ ಸಮುದ್ರ ಮಥನದ ಕಾಲದಲ್ಲಿ ಕಮಲದ ಹೂವಿನಲ್ಲಿ ಹುಟ್ಟಿದ ದಿವ್ಯಸುಂದರಿಯಾದ ಶ್ರೀದೇವಿಯು ತಾನಾಗಿಯೇ ಭಗವಂತನನ್ನು ವರಿಸಿದ್ದರಿಂದ, ಆಕೆ ಎದೆಬಿಡದಂತೆ ತನ್ನ ವಕ್ಷದಲ್ಲಿಯೇ ಆಕೆಯನ್ನು ಇರಿಸಿಕೊಂಡು ಅನುಗ್ರಹಿಸಿದನು.

"ಪಾರಿಡನ್ದ ಅಮ್ಮಾ" — ಹಿರಣ್ಯಾಕ್ಷನು ಭೂಮಿಯನ್ನು ಎತ್ತಿಕೊಂಡು, ಪ್ರಳಯ ಜಲದಲ್ಲಿ ಎಲ್ಲಿಯೋ ಅಡಗಿಕೊಂಡಾಗ, ಭಗವಂತನು ಮಹಾವರಾಹನಾಗಿ ಅವತರಿಸಿ, ನೀರಲ್ಲಿ ಹೊಕ್ಕು, ಹಿರಣ್ಯಾಕ್ಷನನ್ನು ಕೊಂದು, ತನ್ನ ಒಂದು ಕೋರೆಹಲ್ಲಿನಿಂದ ಈ ಭೂಮಿಯನ್ನು ಇಡಿದು ಎತ್ತಿ, ಅದರ ಸ್ಥಳದಲ್ಲಿ ಇರಿಸಿದನು.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನಿನ್ನನ್ನು ವರಿಸಿದ ಶ್ರೀದೇವಿಗೆ ನಿನ್ನ ಹೃದಯದಲ್ಲಿಯೇ ಎಡೆಮಾಡಿಕೊಟ್ಟಿರುವೆ. ಕಡುಕಷ್ಟದಲ್ಲಿ ಸಿಕ್ಕಿಬಿದ್ದ ಭೂದೇವಿಯನ್ನು ಉದ್ಧರಿಸಿದೆ. ನನಗೂ ಅತ್ಯಂತ ಸಮೀಪವರ್ತಿಯಾಗಿ, ನನ್ನ ಹೃದಯದಲ್ಲಿಯೇ ಹೊರಗೆ, ಒಳಗೂ, ಸಾಕ್ಷಿಯಾಗಿ ನೆಲಸಿದ್ದೀ. ಇಷ್ಟಾದರೂ ಕಡುಪಾಪಿಯಾಗಿ, ನಿನ್ನಿಂದ ದೂರ ಸರಿಯುತ್ತಿರುವವನು ನಾನೇ. ನಿನ್ನನ್ನು ಕಣ್ಣಾರ ನೋಡುವ ಭಾಗ್ಯವನ್ನು ನನಗೆ ನೀಡುವುದರ ಜೊತೆಗೆ ನಿನ್ನ ತಿರುವಡಿಗಳ ಬಳಿಯಲ್ಲಿ ನಾನು ನಿತ್ಯವಾಸಮಾಡುವ ಭಾಗ್ಯವನ್ನೂ ನನಗೆ ನೀಡಬೇಕು. ಇದು ನನ್ನ ಪ್ರಾರ್ಥನೆ.

8. அருகும் சுவடும் தெரிந்துணரோம், அன்பே
பெருகும் மிக இதுவென்? பேசீர், பருகலாம்
பண்புடையீர்! பாரளந்தீர்! பாவியேம் கண் காண்பரிய,
நுண்புடையீர்! நும்மை நுமக்கு.

ಅರುಗುಮ್ ಶುವಡುಮ್ ತೆರಿನ್ದುಣರೋಮ್, ಅನ್ಬೇ
ಪೆರುಗುಮ್ ಮಿಗ ಇದುವೆನ್? ಪೇಶೀರ್, ಪರುಗಲಾಮ್
ಪಣ್ಬುಡೈಯೀರ್! ಪಾರಳನ್ದೀರ್! ಪಾವಿಯೇಮ್ ಕಣ್ ಕಾಣ್ಬರಿಯ,
ನುಣ್ಬುಡೈಯೀರ್! ನುಮ್ಮೈ ನುಮಕ್ಕು.

ನುಮ್ಮೈ நும்மை = ನಿಮ್ಮನ್ನು, ಅರುಗುಮ್ அருகும் = (ಅದರ) ಸಮೀಪಿಸುವುದನ್ನೂ, ಶುವಡುಮ್ சுவடும் = ಅದರ ಉಪಾಯವನ್ನೂ, ತೆರಿವು தெரிவு = ತಿಳಿವಳಿಕೆಯನ್ನು, ಉಣರೋಮ್ உணரோம் = ಅರಿತುಕೊಂಡಿಲ್ಲ (ನಾವು), (ಆದರೂ),

ನುಮಕ್ಕು ನ್ರುಮಕ್ಕು = ನಿಮ್ಮ ವಿಷಯದಲ್ಲಿ (ನಿಮಗಾಗಿ), ಅನ್ಬೇ ಅಣಾಲ = ಪ್ರೀತಿಯೇ ಪೆರುಧುಮಾ ಲಪರುಕ್ಕುಂ = ಹೆಚ್ಚಾಗುತ್ತಿದೆ ಮಿಡ ಮಿಕ = ಅತಿಶಯವಾಗಿ, ಇದುವೆನ ಕಿತ್ತುಲವಣ್ = ಇದಕ್ಕೆ ಕಾರಣವೇನು? ಪೇಶೀರ್ ಪೇಶೀರ್ = ಹೇಳಿರಿ!, ವಿರುಪ್ಪುಲ ಮಾಲರುಕ್ಕಲಾಂ = ಕೂಡಿಯುವಂಥ, ವಿಣ್ಣು ಬಣ್ಣ = ವಿಶಿಷ್ಟ ಗುಣಗಳನ್ನು (ಸ್ವಭಾವವನ್ನು), ಉಡೈಯೀರ್ ಉಲಗಯೀರ್ = ಉಳ್ಳವರೇ, ವಾರ್ ಪಾರ್ = ಭೂಮಿಯ ನ್ನು, ಅಳಸ್ತೀರ್ ಅಣಾಗ್ರಹೀರ್ = ಅಳೆದವರೇ, ಪಾವಿಯೋಮ ಪಾಮಿಯೋಂ = ಪಾಪಿಗಳಾದ ನಾವು, ಕಣ್ಣ್ ಕಣ್ಣು ಕಣ್ ಕಾಣ್ = ಕಣ್ಣಿನಿಂದ ಕಂಡು, ಅಂಯ ಅರಿಯ = (ಅರಿಯಲು) ಅಸಾಧ್ಯವಾದ, ನುಣ್ಣು ಉಡೈಯೀರ್ ನ್ರುಣ್ -
ಉಡೈಯೀರ್ = ಶ್ರೇಷ್ಠತೆಯನ್ನು (ಹಿರಿಮೆಯನ್ನು) ಉಳ್ಳವರೇ!

ಕೂಡಿಯುವಂಥ ವಿಶಿಷ್ಟ ಗುಣಗಳನ್ನು (ಸ್ವಭಾವಗಳನ್ನು) ಉಳ್ಳವರೇ, ಭೂಮಿಯನ್ನು ಅಳೆದುಕೊಂಡವರೇ, ಪಾಪಿಗಳಾದ ನಾವು ಕಣ್ಣಿನಿಂದ ಕಂಡು ಅರಿಯಲಾರದ ಹಿರಿಮೆಯನ್ನುಳ್ಳವರೇ (ಶ್ರೇಷ್ಠತೆಯನ್ನುಳ್ಳವರೇ), ನಿಮ್ಮನ್ನು ದಿನೇ ದಿನೇ ನಾವು ನೆನೆದಷ್ಟೂ, ಅದಕ್ಕೆ ಬೇಕಾದ ಸವಿಯನ್ನುಂಡು, ಅದರ ತೀವ್ರತೆಯನ್ನರಿತು ನಾವು ಸುಖವನ್ನುಂಡು, ಅತಿಶಯವಾಗಿ ಹೆಚ್ಚಾಗುತ್ತಿದೆ. ಆದರೆ ನಿಮಗಾಗಿ ನಮ್ಮ ಪ್ರೀತಿಯೇ ಅತಿಶಯವಾಗಿ ಹೆಚ್ಚಾಗುತ್ತಿದೆ. (8)
ಅಂತಿಲ್ಲ. (ಆದರೂ) ನಿಮಗಾಗಿ ನಮ್ಮ ಪ್ರೀತಿಯೇ ಅತಿಶಯವಾಗಿ ಹೆಚ್ಚಾಗುತ್ತಿದೆ.
ಇದಕ್ಕೆ ಕಾರಣವೇನು? ಹೇಳಿರಿ!

"ನಾನು ನಿಮ್ಮನ್ನು ನೋಡಬೇಕು. ಜಗತ್ತಿಗೆ ನಿಮ್ಮ ದರ್ಶನ ನೀಡುವ ಕೃಪೆಯನ್ನು ಮಾಡಬೇಕು" - ಎಂದು ಹಿಂದಿನ ಪಾಶುರದಲ್ಲಿ ಆಳ್ವಾರರು ಭಗವಂತನನ್ನು ಪ್ರಾರ್ಥಿಸಿದರು. ಈ ಪಾಶುರದಲ್ಲಿ ಅವರು ತಮ್ಮ ಅಲ್ಪತೆಯನ್ನೂ, ಭಗವಂತನ ಹಿರಿಮೆಯನ್ನೂ, ಅವನಬಗೆಗೆ ತಮಗಿರುವ ಮಹತ್ತರವಾದ ಪ್ರೀತಿಯನ್ನೂ ಹೇಳುತ್ತಾರೆ.

"ವಿರುಪ್ಪುಲಾಮಾ ವಿಣ್ಣುಡೈಯೀರ್" – ಭಗವಂತ ಸೌಲಭ್ಯ, ಸೌಶೀಲ್ಯ, ಶೌರ್ಯ, ಮುಂತಾದ ಗುಣಗಳನ್ನು ಎಷ್ಟೆಷ್ಟು ಬಗೆಯಲ್ಲಿ ಮನಸ್ಸು ಕಂಡುಕೊಳ್ಳುತ್ತಾ ಹೋದರೂ ತಣಿಯದು, ಅದಕ್ಕೆ ತೃಪ್ತಿ ಎಂಬುದೇ ಇರುವುದಿಲ್ಲ. ಕಡು ಬಾಯಾರಿದವನಿಗೆ ಗಂಗಾ ಜಲ ದೊರಕಿದ ಹಾಗೆ ಹೇಗೋ ಹಾಗೆ: ಅದನ್ನವನು ಎಷ್ಟೆಷ್ಟು ಕುಡಿದರೂ ತೃಪ್ತಿಯಿರುವುದಿಲ್ಲ.

"ವಾರಳಸ್ತೀರ್" — ಭಗವಂತನು ವಾಮನ ಮೂರ್ತಿಯಾಗಿ ಬಂದು, ಬಲಿ ಚಕ್ರವರ್ತಿಯಿಂದ ಮೂರು ಹೆಜ್ಜೆ ನೆಲವನ್ನು ದಾನವಾಗಿ ಪಡೆದ ಬಳಿಕ, ಅವನೇ ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದೇ ಹೆಜ್ಜೆಯನ್ನು ಎತ್ತಿಟ್ಟು, ಭೂಮಿಯನ್ನೆಲ್ಲಾ ಆ ಒಂದು ಹೆಜ್ಜೆಯಿಂದಲೇ ಅಳೆದುಕೊಂಡನಷ್ಟೆ. ಅಂಥ ಅದ್ಭುತಶಾಲಿ ಭಗವಂತ!

"ಪಾವಿಯೋಮ ಕಣ್ ಕಾಣ್ಬರಿಯ ನುಣ್ಣುಡೈಯೀರ್" — ನಾವು, ಎಂದರೆ, ಮನುಷ್ಯರು ಕಡುಪಾಪಿಗಳು. ಸಂಸಾರಿಗಳಾಗಿ ಪಾಪ ಮಾಡುತ್ತಲೇ ಇರುವವರು.

ಅಂಥವನಿಗೆ ಭಗವಂತನ ದರ್ಶನಲಾಭವುಂಟೇ? ಈ ಕಣ್ಣುಗಳಿಂದಲೇ ಭಗವಂತನನ್ನು ನೋಡಿ ಆನಂದಿಸಲು ಸಾಧ್ಯವೇ? ಮಾನವನ ಅಂತರಂಗದಲ್ಲಿ ಅಲ್ಲೇ ಸ್ವಾಮಿಯು ಅನುಪ್ರವಿಷ್ಟನಾಗಿ, ಸಾಕ್ಷಿಯಾಗಿ, ನೆಲಸಿದ್ದರೂ ಸಹ ಅವನನ್ನು ಮನಸ್ಸಾಗಲಿ, ಮಾತಾಗಲಿ ತಿಳಿಯಲು ಸಾಧ್ಯವಿಲ್ಲ. ಇಂತ ಸ್ಥಿತಿ ಯುವುದೂ ಕಷ್ಟವಾದ ಕೆಲಸವೇ!

ಆಳ್ವಾರರು ಹೇಳುತ್ತಾರೆ: ಭಗವಂತ, ನೀನು ವಾತ್ಸಲ್ಯಾದಿ ಗುಣಗಳನ್ನು ಸೌಲಭ್ಯಾದಿ ಗುಣಗಳನ್ನು ಹೊಂದಿರುವವನು. ನಿನ್ನ ಸೌಲಭ್ಯ ಸೌಶೀಲ್ಯಾದಿ ಗುಣಗಳನ್ನು ಎಷ್ಟೆಷ್ಟು ಬಗೆಯಲ್ಲಿ ಅನುಭೋಗಿಸಿದರೂ ಅದು ನನಗೆ ತೃಪ್ತಿ ತರದು. ನಿನ್ನನ್ನು ಕುರಿತು ಇನ್ನೂ ತಿಳಿಯಬೇಕೆನ್ನಿಸುತ್ತದೆ. ನೀನು ಮಹಾದ್ಭುತಕರ. ಅನಂತವಾದ ವಿಶಿಷ್ಟ ಗುಣಗಳುಳ್ಳವನು. ನಿನ್ನನ್ನು ನಾನು ಕ್ಷಮಿಸಿ ~~[illegible]~~ ನುಡಿಸಲಾಗಲಿ, ನಿನ್ನನ್ನು ನೇರವಾಗಿ ಕಣ್ಣಿಂದ ಕಾಣುವುದಾಗಲಿ, ಶಕ್ತಿ ತಿಳುವಳಿಕೆಯಾಗಲಿ ನನಗಿಲ್ಲ. ನೀನೇ ನನ್ನ ಅಂತರಂಗದಲ್ಲಿ, ನನಗೆ ಕಾಣಿಸದ ಹಾಗೆ, ನನ್ನ ಅನುಭೋಗಗಳಿಗೆ ಸಾಕ್ಷಿಯಾಗಿ ನೆಲಸಿದ್ದೀ. ಇದೇನು ಕಾರಣವೋ ಕಾಣೆ, ನಿನ್ನಲ್ಲಿ ನನಗೆ ಅತಿಶಯವಾದ ಪ್ರೀತಿಯಿದೆ. ಇದೇಕೆ ಎಂಬುದನ್ನು ಹೇಳಬಲ್ಲೆಯಾ?

9. நுமக்கடியோ மென்றென்று நொந்துரைக்கதென்?, மாலார்
தமக்கவர் தாம் சார்வரிய ராநுஸ், — ஏமக்கினி
யாதானும் ஆகிடு காண் நெஞ்சே!, அவர் திறத்தே
யாதானும் சிந்தித் திரு.

ನುಮಕ್ಕಡಿಯೋ ಮೆನ್ರೆನ್ರು ನೊನ್ದುರೈಕ್ಕೆನ್?, ಮಾಲಾರ್
ತಮಕ್ಕವರ್ ತಾಮ್ ಶಾರ್ವರಿಯರಾನಾಲ್, — ಎಮಕ್ಕಿನಿ
ಯಾದಾನುಮ್ ಆಹಿಡುಕಾಣ್ ನೆಂಜೇ!, ಎಮಕ್ಕನಿ
ಯಾದಾನುಮ್ ಶಿನ್ದಿತ್ತಿರು.

ನುಮಕ್ಕು நுமக்கு = ನಿಮಗೆ, ಅಡಿಯೋಮ್ அடியோம் = ದಾಸರು, ಎನ್ರು ಎನ್ರು என்று என்று = ಎಂದು ಎಂದು, ನೊನ್ದು நொந்து = ನೊಂದು, ಉರೈತ್ತು உரைத்து = ಹೇಳಿ, ಎನ್ ஏன் = ಏನು ಫಲ? ಮಾಲಾರ್ ~~ತಮಕ್ಕು~~ மாலார் ~~தமக்கு~~ = ವ್ಯಾಮೋಹಕರಾಯಾದ ಭಗವಂತನು, ತಮಕ್ಕು தமக்கு = ತಮಗೆ (~~[illegible]~~) ಅವರ್ ತಾಮ್ அவர் தாம் = ತಾನೇಯೇ, ಶಾರ್ವು ಅರಿಯರ್ ಆನಾಲ್ சார்வு அரியர் ஆனால் = ಹೊಂದಲು ಅಸಾಧ್ಯರಾದರೆ, ಎಮಕ್ಕು எமக்கு = ನಮಗೆ, ಇನಿ இனி = ಇನ್ನು, ಯಾದಾನುಮ್ யாதானும் = ಯಾವುದಾದರೂ (ಏನಾದರೂ), ಆಹಿಡು ಕಾಣ್ ஆகிடு காண் = ಆಗಿಬಿಡಲಿ, ಕಂಡೆಯಾ, ನೆಂಜೇ

Garani Srinivasan

நெஞ்சே = ಮನಸ್ಸೇ, ಎಮಕ್ಕು எமக்கு = ನಮಗೆ, ಇನಿ இனி = ಇನ್ನು,
ಯಾದಾನುಮ್ யாதானும் = ಏನನ್ನಾದರೂ, ಶಿನ್ದಿತ್ತು ಇರು சிந்தித்து
இரு = ಚಿಂತಿಸುತ್ತಾ ಇರು.

ಮನಸ್ಸೇ, 'ನಿಮಗೆ ದಾಸರು (ಪಾದಸೇವಕರು)' ಎಂದು, ಎಂದು, ನೊಂದು ಹೇಳಿ ಫಲವೇನು? ಪ್ರಾರ್ಥನೆಯಿಂದ ಭಗವಂತನು ತಮಗೆ ತಾನಾಗಿಯೇ ಸಮೀಪಿಸಲು ಅಶಕ್ಯರಾದರೆ, ನಮಗಿನ್ನು ಏನಾದರೂ ಆಗಬಹುದಲ್ಲ ತಂದೆಯಾ! ನಮಗೆ ಇನ್ನು ಏನನ್ನಾದರೂ ಚಿಂತಿಸುತ್ತಾ ಇರು. (9)

ಹಿಂದಿನ ಪಾಶುರದಲ್ಲಿ ಆಳ್ವಾರರು "ಭಗವಂತನು ನಮ್ಮ ಅಂತರಂಗದಲ್ಲಿಯೇ ನೆಲಸಿದ್ದಾನೆ. ಅದನ್ನು ಅರಿತುಕೊಳ್ಳಲಾರದೆ ನಾವೇ ಅವನಿಂದ ದೂರಸರಿದಿರುವವರು' ಎಂದು ಹೇಳಿದರಷ್ಟೆ. ಈ ಪಾಶುರದಲ್ಲಿ ಅದಕ್ಕೆ ವಿರುದ್ಧವಾಗಿರುವಂತೆ ಚಮತ್ಕಾರಪೂರ್ವಕವಾಗಿ ಆಳ್ವಾರರು ಹೇಳುತ್ತಿದ್ದಾರೆ: "ನಾವು ಮಾಡುವ ಪ್ರಾರ್ಥನೆಯನ್ನು ನಮ್ಮಲ್ಲಿಯೇ ಇರುವ ಭಗವಂತನು ಮನ್ನಿಸದಿದ್ದ ಬಳಿಕ, ಅವನು ನಮ್ಮಿಂದ ದೂರವಾದಂತೆಯೇ ಅಲ್ಲವೇ? ಹೀಗಾದ ಮೇಲೆ ನಾವು ಮಾಡತಕ್ಕದ್ದೇನಿದೆ?" ಎಂದು ನೊಂದು ನುಡಿಯುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನಾವು ಭಗವಂತನಲ್ಲಿ "ಸ್ವಾಮೀ ನೀನೇ ನಮಗೆ ಗತಿ", "ನೀನೇ ನಮ್ಮನ್ನು ಕಾಪಾಡು", 'ನೀನೇ ನಮ್ಮನ್ನು ಉದ್ಧರಿಸು" ಎಂದು ಎಡೆಬಿಡದಂತೆ ಎಷ್ಟೆಷ್ಟೋ ದೈನ್ಯದಿಂದ ಬೇಡಿಕೊಳ್ಳುತ್ತಾ ಬಂದೆವಷ್ಟೆ. ಅದರಿಂದ ನಮಗೆ ಬಂದ ಫಲವಾದರೂ ಏನು? ನಾವು ಭಗವಂತನನ್ನು ಸಮೀಪಿಸಲಾರದಷ್ಟು, ನಮ್ಮ ಬೇಡಿಕೆಯನ್ನು ಅವನು ಕೇಳಿಸಿಕೊಳ್ಳಲಾರದಷ್ಟು ದೂರದಲ್ಲಿ ಸ್ವಾಮಿಯೇ ನಿಂತ ಬಳಿಕ ನಾವಿನ್ನು ಮಾಡುವುದಾದರೂ ಏನು? ಆದರೂ ಚಿಂತೆ ನಮ್ಮ ಬೇಡಿಕೆ ಭಗವಂತನಿಗೆ ಅಪ್ರಿಯವಾಗಿ ಹೋದೀತೇ? ಇಲ್ಲ. ಮನಸ್ಸೇ, ಭಗವಂತನು ತನ್ನ ಚಿತ್ತಕ್ಕೆ ಬಂದಂತೆ ಮಾಡಲು ಬಿಡು. ಅದು ಅವನಿಗೇ ಸೇರಿದ್ದು. ನಾವು ಮಾತ್ರ ಅವನನ್ನು ಮರೆಯದಂತೆ, ತಪ್ಪದೆ, ಅವನನ್ನು ಕುರಿತು ಏನನ್ನಾದರೂ ಚಿಂತಿಸುತ್ತಲೇ ಇರೋಣ, ತಂದೆಯಾ!

10. இருநால்வர் ஈரைந்தின் மேலொருவன், எட்டோ
டொருநால்வ ரோரிருவ ரல்லால், - திருமாற்கு
யாமார்? வணக்கமார்? ஏபாவம் நன்னெஞ்சே!,
நாமா மிகவுடையோம் நாழ்.

ಇರುನಾಲ್ವರೀರೈನ್ದಿನ್ ಮೇಲೊರುವನ್, ಎಟ್ಟೋ
ಡೊರುನಾಲ್ವರೋರಿರುವರಲ್ಲಾಲ್ - ತಿರುಮಾಱ್ಕು
ಯಾಮಾರ್? ವಣಕ್ಕಮಾರ್? ಏಪಾವಮ್ ನನ್ನೆಞ್ಜೇ!,
ನಾಮಾ ಮಿಗವುಡೈಯೋಮ್ ನಾೞ್.

ಇರುನಾಲ್ವರ್ இருநால்வர் = ಅಷ್ಟ ವಸುಗಳು, ಈರೈನ್ದಿನ್ ಮೇಲ್ ಒರು ವರ್ ஈரைந்தின் மேல் ஒருவர் = ಏಕಾದಶ ರುದ್ರರು, ಎಟ್ಟೋಡು ಒರು ನಾಲ್ವರ್ எட்டோடு ஒருநால்வர் = ದ್ವಾದಶಾದಿತ್ಯರು, ಓರ್ ಇರುವರ್ ಅಲ್ಲಾಲ್ ஓர் இருவர் அல்லால் = ಅಶ್ವಿನೀದೇವತೆಗಳು ಅಲ್ಲದೆ, ತಿರುಮಾಱ್ಕು திரு மாற்கு = ಲಕ್ಷ್ಮೀಪತಿಗೆ, ಯಾಮಾರ್ யாம் ஆர் = ನಾವು ಯಾರು? ವಣಕ್ಕಮಾ ರ್? வணக்கம் ஆர் = (ನಮ್ಮ) ನಮಸ್ಕಾರಗಳು ಏನು ಮಹಾ? ಏ ಪಾವಮ್ ஏ பாவம் = ಅಯ್ಯೋ, ನಲ್ ನೆಂಜೇ நல் நெஞ்சே = (ನನ್ನ) ಒಳ್ಳೆಯ ಮನ ಸ್ಸೇ, ನಾಮಾ நாமா = ನಾವೇನು, ಮಿಗ ನಾಳ್ மிகநாழ் = ಬಹಳ ಪಾಪಗಳ ನ್ನು, ಉಡೈಯೋಮ್ உடையோம் = ಉಳ್ಳವರಲ್ಲವೇ?

ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಅಶ್ವಿನೀದೇವತೆಗಳು ಅಲ್ಲದೆ ಲಕ್ಷ್ಮೀಪತಿಗೆ ನಾವು ಯಾರು? (ನಮ್ಮ) ನಮಸ್ಕಾರಗಳು ಏನು ಮಹಾ? ಅಯ್ಯೋ, (ನನ್ನ) ಒಳ್ಳೆಯ ಮನಸ್ಸೇ, ನಾವು ತುಂಬ ಪಾಪಗಳನ್ನು ಮಾಡಿದವರಲ್ಲವೇ? (10)

ಹಿಂದಿನ ಪಾಶುರದಲ್ಲಿ, "ಭಗವಂತನು ನಮ್ಮ ದೈನ್ಯ ಪ್ರಾರ್ಥನೆಯನ್ನು ಕೇಳಿಸಿ ಕೊಳ್ಳದಷ್ಟು ಅಸಡ್ಡೆ ಮಾಡಿದರೂ ಚಿಂತೆಯಿಲ್ಲ. ನಾವು ಮಾತ್ರ ಅವನನ್ನು ಯಾವುದಾದ ರೊಂದು ಬಗೆಯಲ್ಲಿ ಎಡೆಬಿಡದಂತೆ ಚಿಂತಿಸುತ್ತಿರೋಣ," ಎಂದು ಆಳ್ವಾರರು ತಮ್ಮ ಮನಸ್ಸಿಗೆ ಆಜ್ಞೆ ಮಾಡಿದರು.

ಆ ವಿಷಯವನ್ನೇ ಇಲ್ಲಿ ಮುಂದುವರಿಸುತ್ತಾರೆ! "ಭಗವಂತನಿಗೆ ನಾವು ಎಷ್ಟು ಮಾತ್ರ? ದೋಷಪೂರ್ಣರಾದ ಅಲ್ಪಮಾನವರು ನಾವು. ನಮ್ಮ ಯೋಗ್ಯತೆಗೆ ತಕ್ಕಂತೆ ಭಗವಂತನು ನಮ್ಮನ್ನು ಅಲಕ್ಷಿಸಬೇಕು. ಅದು ಸಹಜವೇ ಅಲ್ಲವೇ?" ಎನ್ನುತ್ತಾ "ನನ್ನ ಒಳ್ಳೆಯ ಮನಸ್ಸೇ, ನಿನಗಾಗಿ ನಾನು ತುಂಬ ಮರುಗುತ್ತೇನೆ". ಎನ್ನುತ್ತಾರೆ.

ಆಳ್ವಾರರು ಹೇಳುತ್ತಾರೆ: "ನನ್ನ ಒಳ್ಳೆಯ ಮನಸ್ಸೇ, ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಅಶ್ವಿನೀದೇವತೆಗಳು ಮುಂತಾದ ಮೂವತ್ತು ಮೂರು ಕೋಟಿ ದೇವತೆಗಳು, ಎಲ್ಲ ಬಗೆಯಲ್ಲೂ ಪರಿಶುದ್ಧರಾಗಿ, ಭಗವಂತನನ್ನು ಸುತ್ತುವರಿದು, ಸದಾ ಎರಗಿ ಸ್ತುತಿಸುತ್ತಾ ಇರುತ್ತಾರೆ. ಕಡು ಪಾಪಿಗಳೂ, ದೋಷಪೂರ್ಣರು, ಅಲ್ಪಮಾನವರೂ ಆದ ನಮ್ಮ ನಮಸ್ಕಾರಗಳು ಸ್ತುತಿಗಳು ಭಗವಂತ ನಿಗೆ ಸೇರದೆ ಹೋಗುವುದರಲ್ಲಿ ಆಶ್ಚರ್ಯವೇನಿಲ್ಲ. ಮನಸ್ಸೇ, ನಮ್ಮ ನಮಸ್ಕಾರ ಗಳು ಆತನಿಗೆ ಹಿಡಿಸಲಿ, ಬಿಡಲಿ. ನಾವು ಮಟ್ಟಿಗೆ; ಅನನ್ಯಪ್ರಯೋಜನರಾಗಿ, ಎಂದರೆ, ಭಗವಂತನಿಂದ ಬೇರೆ ಏನನ್ನು ಬೇಡದಂತೆ 'ಸ್ವಾಮೀ, ನೀನೇ ನಮಗೆ ಗತಿ' ಎಂದು ಮಾತ್ರವೇ ಭಗವಂತನಲ್ಲಿ ಎಡೆಬಿಡದಂತೆ ಅಂಜಲಿ ಮಾಡುತ್ತಿರೋಣ.

ದೇವತೆಗಳು ಪರಿಶುದ್ಧರಾದರೂ ಸ್ವಾರ್ಥಿಗಳು. ಸ್ವಪ್ರಯೋಜನಾಪೇಕ್ಷಿಗಳು. ಹಿಂದಲ್ಲ ಹಿಂದಕ್ಕೆ ಭಗವಂತನಲ್ಲಿ ಮರೆಹೋಗುತ್ತಿರುವುದೇ ಅವರ ದಿನಚರಿ.

ಅವರ ಬೇಡಿಕೆಗೆ ಭಗವಂತನ ಬಲವು ಇರುವುದು ಸಹಜವೇ. ಆದರೆ ಸ್ವಾರ್ಥವಿಲ್ಲದೆ, ಯಾವುದನ್ನೂ ಆಶಿಸದೆ, ಅವನ ಇಷ್ಟದಂತೆ, ಅವನು ತೋರುವ ದಾರಿಯಲ್ಲಿಯೇ ನಡೆಯುತ್ತಿರುವ ಪ್ರಾಣಾರ್ಪಣ ಶರಣಾಗತರನ್ನು ಭಗವಂತನು ಎಂದಾದರೂ ಕೈಬಿಡುವನೇ? ಅವರನ್ನು ಆದರಿಸನೇ? ಉದ್ಧರಿಸನೇ? ತನ್ನ ಬಳಿಗೆ ಕರೆದುಕೊಳ್ಳನೇ? ತನ್ನ ಸೇವೆ ಮಾಡಲು ಅವರಿಗೆ ಎಡೆಕೊಡನೇ? ಎಂಬುದಕ್ಕೆ ಇಲ್ಲಿ ಬರತಕ್ಕ ವಿವರಣೆ ಎನಿಸುತ್ತದೆ.

11. நாழாலமர் முயன்ற வல்லரக்கனின்னுயிரை,
வாழா வகை வலிதல் நின் வலியே, - ஆழாந்
பாருநீ வானுநீ காலுநீ தீயுநீ
நீரும் நீயாய் நின்றநீ.

ನಾಳಾಲಮರ್ ಮುಯನ್ರ ವಲ್ಲರಕ್ಕನಿನ್ನುಯಿರೈ,
ವಾಳಾ ವಹೈ ವಲಿದಲ್ ನಿನ್ ವಲಿಯೇ, - ಆಳಾನ್
ಪಾರುನೀ ವಾನುನೀ ಕಾಲುನೀ ತೀಯುನೀ
ನೀರುಮ್ ನೀಯಾಯ್ ನಿನ್ರ ನೀ.

ನಾಳಾಲ್ நாழால் = ದಿವಸಗಳಿಂದ (ಕೂಡಿ), ಅಮರ್ அமர் = ಯುದ್ಧದಲ್ಲಿ, ಮುಯನ್ರ முயன்ற = ಮುನ್ನುಗ್ಗಿದ (ಯತ್ನಿಸಿದ), ವಲ್ ಅರಕ್ಕನ್ வல் அரக்கன் = ಬಲಿಷ್ಠನಾದ ರಾಕ್ಷಸನ, ಇನ್ ಉಯಿರೈ இன் உயிரை = ಇನಿದಾದ ಪ್ರಾಣವನ್ನು, ವಾಳಾ ವಹೈ வாழா வகை = ಬದುಕಿರದ ರೀತಿಯಲ್ಲಿ (ಬಾಳದ ಹಾಗೆ), ವಲಿದಲ್ வலிதல் = ಸೆಳೆದು ಹಾಕಿದ್ದು, ನಿನ್ நின் = ನಿನ್ನ, ವಲಿಯೇ வலியே = ಸಾಮರ್ಥ್ಯವೇ, ಆಳಾಂದ ஆழாந் = ಮುಳುಗಿ ಹೋಗದೆ ಇರುವ; ಪಾರುಮ್ ನೀ பாரும் நீ = ಭೂಮಿಯೂ ನೀನೇ, ವಾನುಮ್ ನೀ வானும் நீ = ಗಗನವೂ ನೀನೇ, ಕಾಲುಮ್ ನೀ காலும் நீ = ಗಾಳಿಯೂ ನೀನೇ, ತೀಯುಮ್ ನೀ தீயும் நீ = ಅಗ್ನಿಯೂ ನೀನೇ, ನೀರುಮ್ ನೀ நீரும் நீ = ನೀರೂ ನೀನೇ, ಆಯ್ ஆய் = ಆಗಿ, ನಿನ್ರ நின்ற நீ = ಇರುವ ನೀನು.

ದಿವಸಗಳಿಂದ ಕೂಡಿ ಯುದ್ಧದಲ್ಲಿ ಮುನ್ನುಗ್ಗಿದ (ಮೇಲೆಬಿದ್ದ) ಬಲಿಷ್ಠನಾದ ರಾಕ್ಷಸನ ಇನಿದಾದ ಪ್ರಾಣವನ್ನು, ಅವನು ಬದುಕಿರದ ಹಾಗೆ, ಸೆಳೆದು ಹಾಕಿದ್ದು ನಿನ್ನ ಸಾಮರ್ಥ್ಯವೇ! ಮುಳುಗಿ ಹೋಗದ ಭೂಮಿಯೂ, ಬಾನೂ, ಗಾಳಿಯೂ, ಅಗ್ನಿಯೂ, ನೀರೂ ಆಗಿ (11) ಇರುವವನು ನೀನೇ!

ಹಿಂದಿನ ಪಾಶುರದಲ್ಲಿ ಆಳ್ವಾರರು ತಮ್ಮ ಮನಸ್ಸಿಗೆ "ಭಗವಂತನನ್ನು ಎಡೆಬಿಡದೆ ಚಿಂತಿಸುತ್ತಿರುವುದೇ ನಮ್ಮ ಕರ್ತವ್ಯ" ಎಂದು ಉಪದೇಶಿಸಿದರು.

ಈ ಪಾಶುರದಲ್ಲಿ ಅವರು ಭಗವಂತನ 'ಬಲ'ವನ್ನು 'ಸಾಮರ್ಥ್ಯ'ವನ್ನು ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಭಗವಂತ! ನೀನು ದುಷ್ಟರನ್ನು ನಿಗ್ರಹಿಸತಕ್ಕವನು.

ರಾವಣಾಸುರನು ಎಷ್ಟೇ ಪರಾಕ್ರಮಿಯಾದರೂ, ಎಷ್ಟೇ ವರಗಳನ್ನು ಅನುಗ್ರಹಗಳನ್ನು ಪಡೆದುಕೊಂಡಿದ್ದರೂ, ಅವನು ಮಾಡಿದ ಮಹಾ ಪಾಪಗಳಿಗಾಗಿ, ದೋಷಪೂರ್ಣನಾದ ಅವನನ್ನು ನಿನ್ನ ಬಿಲ್ಲು ಬಾಣಗಳಿಂದಲೇ ನಿಗ್ರಹಿಸಿದೆಯಷ್ಟೆ. ಇದು ನಿನ್ನ ಸಾಟಿಯಿಲ್ಲದ ಪಾವಕತ್ವವನ್ನು ಸಾರುತ್ತದೆ. ನೀನೇ ಪಂಚಭೂತಗಳೂ ಎಲ್ಲೆಲ್ಲಿಯೂ ವ್ಯಾಪಿಸಿರುವವನು. ಈ ಮೂಲಕ, ಇಡೀ ಸೃಷ್ಟಿಗೇ ಕಾರಣನೂ ಆಧಾರನೂ ಆಗಿದ್ದೀ.

12. நீயன்றே ஆழ்துயரில் வீழ்விப்பான் நின்றுழன்றாய்?,
போயொன்று சொல்லியென்? போநெஞ்சே!, - நீயென்றும்
காழ்த்துபதேசந் தரினும் கைக்கொள்ளாய், கண்ணன் தாள்
வாழ்த்துவதே கண்டாய் வழக்கு.

ನೀಯನ್ಱೇ ಆೞ್ತುಯರಿಲ್ ವೀೞ್ವಿಪ್ಪಾನ್ ನಿನ್ಱುೞನ್ಱಾಯ್?,
ಪೋಯೊನ್ಱು ಶೊಲ್ಲಿಯೆನ್? ಪೋನೆಂಜೇ!, - ನೀಯೆನ್ಱುಮ್
ಕಾೞ್ತ್ತುಪದೇಶನ್ ತರಿನುಮ್ ಕೈಕ್ಕೊಳ್ಳಾಯ್, ಕಣ್ಣನ್ ತಾಳ್
ವಾೞ್ತ್ತುವದೇ ಕಂಡಾಯ್ ವೞಕ್ಕು.

ನೀ ಅನ್ಱೇ நீ அன்றே = ನೀನೇ ಅಲ್ಲವೇ, ಆೞ್ ஆழ் = ಆಳವಾದ (ಅಗಾಧವಾದ), ತುಯರಿಲ್ துயரில் = ದುಃಖ(ದಂಡ)ದಲ್ಲಿ, ವೀೞ್ವಿಪ್ಪಾನ್ வீழ்விப்பான் = ಬೀಳಿಸುವುದಕ್ಕಾಗಿ, ನಿನ್ಱು நின்று = ಸಿದ್ಧವಾಗಿದ್ದುಕೊಂಡು, ಉೞನ್ಱಾಯ್ உழன்றாய் = ಯತ್ನಿಸುತ್ತಿರುವೆ? ಪೋಯ್ ಒನ್ಱು போய் ஒன்று = ಪ್ರತಿಮಾತನ್ನು, ಶೊಲ್ಲಿ ಎನ್ சொல்லி என் = ಹೇಳಿ ಏನು ಪ್ರಯೋಜನ? ಪೋ ನೆಂಜೇ போ நெஞ்சே = ಹೋಗು ಮನಸ್ಸೇ (ಅದು ಹಾಗಿರಲಿ, ಮನಸ್ಸೇ), ನೀ ಎನ್ಱುಮ್ நீ என்றும் = ನೀನು ಎಡೆಬಿಡದಂತೆ, ಕಾೞ್ತ್ತು காழ்த்து = ಕಠಿಣವಾಗಿ, ಉಪದೇಶಮ್ ತರಿನುಮ್ உபதேசம் தரினும் = ಉಪದೇಶವನ್ನು ಕೊಟ್ಟರೂ ಸಹ, ಕೈಕೊಳ್ಳಾಯ್ கைகொள்ளாய் = ಅದನ್ನು ಕೈಗೊಳ್ಳುವುದಿಲ್ಲ, ಕಣ್ಣನ್ கண்ணன் = ಶ್ರೀಕೃಷ್ಣನ, ತಾಳ್ தாள் = ತಿರುವಡಿಗಳನ್ನು, ವಾೞ್ತ್ತುವದೇ வாழ்த்துவதே = ಸ್ತುತಿಸುವುದೇ, ಕಂಡಾಯ್ கண்டாய் = ಕಂಡೆಯಾ, ವೞಕ್ಕು வழக்கு = ಧರ್ಮ(ಮಾರ್ಗ)!

ಮನಸ್ಸೇ, ನೀನಲ್ಲವೇ ಆಳವಾದ ದುಃಖ(ದಂಡ)ದಲ್ಲಿ ಬೀಳಿಸುವುದಕ್ಕಾಗಿ ಸಿದ್ಧವಾಗಿದ್ದುಕೊಂಡು ಪ್ರಯತ್ನಿಸುತ್ತಿರುವೆ? ಪ್ರತಿಮಾತನ್ನು ಹೇಳಿ ಏನು ಪ್ರಯೋಜನ? ಹೋಗು, ಮನಸ್ಸೇ, ನೀನು ಯಾವಾಗಲೂ ಕಠಿಣಗೊಂಡು, ಉಪದೇಶವನ್ನು ಕೊಟ್ಟರೂ ಸಹ ಅದನ್ನು ಕೈಗೊಳ್ಳುವುದಿಲ್ಲ! ಶ್ರೀಕೃಷ್ಣನ ತಿರುವಡಿಗಳನ್ನು ಸ್ತುತಿಸುವುದೇ ಧರ್ಮ(ವಿಧಿ, ಮಾರ್ಗ) ಕಂಡೆಯಾ!

ಸರ್ವಥಾ ಮುನ್ನಾಗಿ ಮನಸ್ಸು ಇಂದ್ರಿಯಗಳ ವಶವಾಗುವುದು ಮತ್ತು ಮನುಷ್ಯನನ್ನು ಪ್ರಾಪಂಚಿಕ ಮಾರ್ಗದಲ್ಲಿಯೇ ನಡೆಸುವುದು. ಇದರಿಂದ ಬರುವ ಫಲವಾದರೂ ಏನು? ಮನುಷ್ಯನನ್ನು ಆತ್ತವಾದ ದುಃಖ ಸಂಕಟಗಳಲ್ಲಿ ಕೆಡವಿ, ಅವನನ್ನು ಶೋಕಕ್ಕೆ ಒಳಪಡಿಸುವುದೇ. ಇಂದ್ರಿಯಗಳ ವಶವಾದ ಮನಸ್ಸಿನ ನಡೆಯೇ ಇದು. ಇದನ್ನು ತಪ್ಪಿಸಬೇಕೆಂದು ಆಳ್ವಾರರು ತಮ್ಮ ಮನಸ್ಸಿಗೆ ಉಪದೇಶ ಮಾಡುತ್ತಾರೆ. ಅದನ್ನು ಒಲಿಸಿಕೊಳ್ಳಲು ಯತ್ನಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನೀನು ಹೇಗೆ ಹಾಗೆ ನಡೆಯುತ್ತಿರುವೆ. ಹೇಳಿದ ಮಾತಿಗೆ ನ ಮನ ಕೊಡುವುದಿಲ್ಲ. ಮಾತಿಗೆ ಪ್ರತಿ ಮಾತನ್ನಾಡುತ್ತ ಬರುವುದರಿಂದ ಪ್ರಯೋಜನವೇನು? ನೀನು ಬಯಸುವ ದಾರಿಯಿಂದ ಬರುವುದಾದರೂ ಏನು ಎಂಬುದು ಗೊತ್ತಿದೆಯೇ? ಆತ್ತವಾದ ದುಃಖ ಸಂಕಟಗಳಲ್ಲಿ ನನ್ನನ್ನು ಕೆಡವಿ ಗೋಳಾಡಿಸುವುದೇ ಅಲ್ಲವೇ? ಇದೆಲ್ಲವನ್ನು ಬಿಡು. ನಿನಗೆ ನಾನು ಪದೇ ಪದೇ ಹೇಳುವ ಉಪದೇಶವನ್ನು ಕೇಳಲಾದರೂ ಪಾಲಿಸು. ಅದರಿಂದ, ನೀನೂ, ನಿನ್ನಿಂದ ನಾನೂ ಉದ್ಧಾರಗೊಳ್ಳೋಣ. ಅದಕ್ಕೆ ಅತ್ಯಂತ ಸುಲಭವಾದ ಮಾರ್ಗವಿದೆ. ಅತ್ಯಂತ ಸುಲಭವಾದ ಭಗವಂತನ ತಿರುವಡಿಗಳನ್ನು ಆಶ್ರಯಿಸುವುದೂ ಅವುಗಳನ್ನು ಎಡಬಿಡದಂತೆ ಭಜಿಸುವುದೂ ಆ ಸರಳ ಮಾರ್ಗ!

13\. வழுக்கொடு மாறுகொ ளன்றடியார் வேண்ட,
இழுக்கவுங் காண்டு மிறைவ! – இழப்புண்டே?,
எம்மாட் கொண்டாகிலும் யான் வேண்ட, என் கண்கள்
தம்மாற் காட்டுன் மேனிச்சாய்.

ವಲುಕ್ಕೊಡು ಮಾಱುಕೊಳನ್ ಱಡಿಯಾರ್ ವೇಣ್ಡ,
ಇೞಕ್ಕವುಙ್ ಕಾಣ್ಡು ಮಿಱೈವ! – ಇೞಪ್ಪುಣ್ಡೇ?,
ಎಮ್ಮಾಟ್ಕೊಣ್ಡಾಗಿಲುಮ್ ಯಾನ್ ವೇಣ್ಡ, ಎನ್ ಕಣ್ಗಳ್
ತಮ್ಮಾಱ್ ಕಾಟ್ಟು ನ್ ಮೇನಿಚ್ಚಾಯ್.

ವಲುಕ್ಕೊಡು வழுக்கொடு = ಧರ್ಮಮಾರ್ಗದಿಂದ, ಮಾಱುಕೊಳ್ மாறுகொ ள = ವ್ಯತ್ಯಾಸ ಹೊಂದುವುದು, ಅನ್ಱು அன்று = ಮಾತ್ರವಲ್ಲ, ಅಡಿಯಾರ್ அடியார் = ದಾಸರು (ಪಾದಸೇವಕರು), ವೇಣ್ಡ வேண்ட = ಬೇಡಲು, ಇಲುಕ್ಕವುಮ್ இழுக்கவும் = ವ್ಯಥೆಪಡುವುದನ್ನು (ದುಃಖಪಡುವುದನ್ನು), ಕಾಣ್ಡುಮ್ காண்டும் = ಕಾಣುತ್ತೇವೆ, ಇಱೈವ இறைவ = ಸ್ವಾಮೀ, ಇಲುಪ್ಪುಣ್ಡೇ இழப்பு உண்டே = ನಷ್ಟವಾದರೂ ಇದೆಯೇ, ಎಮ್ ಆಮ் எம் ஆம் = ನಮ್ಮ, ಆಟ್ಕೊಣ್ಡು ஆட் கொண்டு = ಸೇವೆಯನ್ನು ಪರಿಗ್ರಹಿಸಿ (ಸೇವೆಯನ್ನು ಸ್ವೀಕರಿಸಿ) ಆದರೂ, ಯಾಮ್ யாம் = ನಾವು, ವೇಣ್ಡ வேண்ட = ಬೇಡ

Garani Srinivasan

ಎನ್ ಕಣ್ಗಳ್ ತಮ್ಮಾಲ್ என் கண்கள் தம்மால் = ನನ್ನ ಕಣ್ಣುಗಳಿಂದ, ಕಾಟ್ಟು காட்டு = ತೋರಿಸು, ಉನ್ உன் = ನಿನ್ನ, ಮೇನಿ ಶಾಯ್ மேனி சாய் = ದೇಹಕಾಂತಿಯನ್ನು (ದೇಹದ ಛಾಯೆಯನ್ನು, ದೇಹದ ಹೊಳಪನ್ನು).

ಸ್ವಾಮಿ, ಧರ್ಮಮಾರ್ಗದಿಂದ ವ್ಯತ್ಯಾಸಹೊಂದುವುದು ಮಾತ್ರವಲ್ಲ. ಪಾದಸೇವಕರು ಬೇಡಿಯೂ, ದುಃಖಪಡುವುದನ್ನು ನೋಡುತ್ತೇನೆ. ನಮ್ಮ ಸೇವೆಯನ್ನು ಸ್ವೀಕರಿಸಿ, ನಾವು ಬೇಡಿದರೆ, ನಮ್ಮ ಕಣ್ಣುಗಳಿಗೆ ನಿನ್ನ ದೇಹದ ಛಾಯೆಯನ್ನು (ಹೊಳಪನ್ನು) ತೋರಿಸು. (13)
(ಇದರಲ್ಲಿ) ನಿನಗೆ ನಷ್ಟವಾದರೂ ಉಂಟೇ?

ಹಿಂದಿನ ಪಾಶುರದಲ್ಲಿ ಆಳ್ವಾರರು ತಮ್ಮ ಮನಸ್ಸಿಗೆ ಹಿತವಚನವನ್ನು ನುಡಿದರು: 'ಭಗವಂತನ ತಿರುವಡಿಗಳನ್ನಾಶ್ರಯಿಸಿ ಅವನನ್ನು ಕೀರ್ತಿಸುವುದೇ ಕರ್ತವ್ಯ' ಎಂದು ಅದಕ್ಕೆ ಉಪದೇಶ ಮಾಡಿದರು. ತನ್ನಾರ ಸೌಂದರ್ಯದಲ್ಲಿ ಭಗವಂತನನ್ನು ಸ್ತುತಿಸುವುದಾದರೂ ಹೇಗೆ ಎಂಬ ಸಂಶಯ ಅವರ ಮನಸ್ಸಿಗೆ ಬಂದಿರಬೇಕು. ಆದ್ದರಿಂದ, ಅವರು ಈ ಪಾಶುರದಲ್ಲಿ ಭಗವಂತನನ್ನೇ ಬೇಡುತ್ತಾರೆ: 'ನಿನ್ನ ದಿವ್ಯರೂಪವನ್ನು ತೋರಿಸು. ಇದರಿಂದ ನಿನ್ನನ್ನು ಪೂರ್ಣವಾಗಿ ಸ್ತುತಿಸಲು ಅನುಕೂಲವಾಗುತ್ತದೆ' ಎಂದು ಪ್ರಾರ್ಥಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮಿ, ನಿನ್ನ ಪಾದಸೇವಕರು ಆಶಿಸಿದ ದಿವ್ಯಸ್ವರೂಪವನ್ನು ತೋರಿಸುತ್ತೀ. ಅವರಿಗೆ ಕೂಡಲೇ ನೀನು ಅವರ* ನಿನ್ನ ಧರ್ಮಮಾರ್ಗದಲ್ಲಿಯೇ ನಿನ್ನ ದರ್ಶನಲಾಭವಾಗುತ್ತದೆ. ನನ್ನ ಮನಸ್ಸನ್ನು ನಡೆದುಕೊಳ್ಳುವಂತೆ (ಅದನ್ನು) ಹದಗೊಳಿಸಿಕೊಳ್ಳುತ್ತೇನೆ. ಈ ನನ್ನ ಅಲ್ಪದೇಹ ಇದನ್ನು ಕೃಪೆಮಾಡಿ ಸ್ವೀಕರಿಸು. ನಿನ್ನ ದೇಹದ ಹೊಳಪನ್ನು ನನಗೂ ತೋರಿಸು. ಹೀಗೆ ಮಾಡುವುದರಿಂದ, ನಿನಗೆ ಯಾವ ಬಗೆಯ ನಷ್ಟವೂ ಆಗುವುದಿಲ್ಲ.

14. சாயால் கரியானை உள்ளறியாராய் நெஞ்சே,
பேயார் முலை கொடுத்தார் பேயராய், – நீயார் பேய்த்
தேம்பூண் சுவைத்து ஊனறிந்தறிந்தும், தீவினையாம்
பாம்பார் வாய்க் கைநீட்டல் பார்த்து.

ಶಾಯಾಲ್ ಕರಿಯಾನ್ನೈ ಉಳ್ಳರಿಯಾರಾಯ್ ನೆಂಜೇ,
ಪೇಯಾರ್ ಮುಲೈ ಕೊಡುತ್ತಾರ್ ಪೇಯರಾಯ್, – ನೀಯಾರ್ ಪೇಯ್
ತ್ತೇಮ್ಪೂಣ್ ಶುವೈತ್ತು ಊನರಿನ್ದರಿನ್ದುಮ್, ತೀವಿನೈಯಾಮ್
ಪಾಂಬಾರ್ ವಾಯ್ ಕ್ಕೈನೀಟ್ಟಲ್ ಪಾರ್ತ್ತು.

ಶಾಯಾಲ್ சாயால் = ಮೈಬಣ್ಣದಿಂದ, ಕರಿಯಾನ್ನೈ கரியானை = ಕಪ್ಪುಬಣ್ಣದವನನ್ನು, ಉಳ್ ಅರಿಯಾರ್ ಆಯ್ ಉள் அறியார் ஆய் = (ಅವನ) ಅಂತರಂಗವನ್ನು ಅರಿತುಕೊಳ್ಳದವರಾಗಿ, ನೆಂಜೇ நெஞ்சே = ಮನಸ್ಸೇ, ಪೇಯಾರ್ பேயார் = ರಾಕ್ಷಸಿಯು, ಮುಲೈ ಕೊಡುತ್ತಾರ್ முலை கொடுத்தார் = (ವಿಷದ)

Garani Srinivasan

ಮೋಡಿಯನ್ನುಂಟುಮಾಡಿಸಿದಳು, ಪೇಯರ್ ಆಯ್ ಬೇಬ್ರ್ ತ್ರಾಯ್ = ಬುದ್ಧಿಕೆಟ್ಟವಳಾಗಿ, ನೀ ಕ್ರೀ = ನೀನು, ಆರ್ ಆರ್ = (ಅವಳಿಗೆ) ಯಾರು?, ಹೇಯ್ ಬೇಬ್ = ರಾಕ್ಷಸಿಯು ಕೇಮ್ಬು ಕ್ರೂಂ = ಅಳಿಯುವಂತೆ, ಲೂನ್ ಲಾಣ್ = (ಅವಳ) ಉಣಿಸಿದನ್ನು, ಶಂಪೈಕೆತ್ತ ಈಣೆವಿಕ್ರಿತು = ಅನುಭವಿಸಿ (ಆಸ್ವಾದಿಸಿ, ಚಪ್ಪರಿಸುತ್ತಾ ತಿಂದದು), ಲೂನ್ ಲಾಣ್ = ದೇಹದ ವಿಷಯವನ್ನು, ಅಯಿಸ್ಡ ಅಗ್ರಿಕ್ತು = ತಿಳಿದು, ಅಯಿಸ್ಡವ ಅಗ್ರಿಕ್ತುಂ = ತಿಳಿದೂ, ~~ಹೆಮ್ಮು ಆರ್ ಪಾಮ್ ಆರ್ =~~ ತೀವಿಸ್ಟ್ ಆಮ ಕ್ರೀ ಯಿದಿಲಾ ತ್ರಾಂ = ಕ್ರೂರ ಕರ್ಮಗಳೆಂಬ, ಪೆಮ್ಬರ್ ಪಾಂಪಾರ್ = ನವಿರದ, ವಾಯ್ ಯಾಯ್ = ಬಾಯಲ್ಲಿ, ಕೈ ನೀಟುವ್ ಲಾಕ್ರೀಟಟಲ್ = ಕೈ ಚಾಚುವುದಕ್ಕೆ, ಪಾರಕ್ತ ಪಾರ್ಕ್ರೀ = ನೋಡುತ್ತಿರುವೆಯಲ್ಲ!

ಮನಸ್ಸೇ, ಕಪ್ಪುಬಣ್ಣದವನ್ನು ಅವನ ಮೈಬಣ್ಣದಿಂದ ಅವನ ಅಂತರಂಗವನ್ನು ಅಂತು ಕೇಳ್ಳದವಳಾಗಿ, ರಾಕ್ಷಸಿಯು (ವಿಷದ) ಮೋಡಿಯನ್ನುಂಟುಮಾಡಿಸಿದಳು. ಬುದ್ಧಿಕೆಟ್ಟ ಅವಳಿಗೆ ~~ನೀನು~~ ಅವನು ಯಾರು? ಆ ರಾಕ್ಷಸಿಯು ಉಣಿಸಿದನ್ನು ಚಪ್ಪರಿಸಿ ತಿಂದೆಯು ತ್ತಾ (~~ನೀನು~~ ಅವನು) ಅವಳು ಅಳಿಯುವಂತೆ ಮಾಡಿದನು. ದೇಹದ ವಿಷಯವನ್ನು ತಿಳಿದೂ ತಿಳಿದೂ ಕ್ರೂರವಾದ ಪಾಪಕರ್ಮಗಳೆಂಬ ನವಿರದ ಬಾಯಲ್ಲಿ ಕೈಯಿಡುವುದಕ್ಕೆ ನೋಡುತ್ತಿರುವೆಯಲ್ಲ! (14)

ಹಿಂದಿನ ಪಾಶುರದಲ್ಲಿ "ಸ್ವಾಮೀ, ನಿನ್ನ ದೇಹದ ಸೌಖ್ಯವನ್ನು ಕೇಳಿದೆನು" ಎಂದು ಅಂಗಲಾಚಿದರು ಆಳ್ವಾರರು. ಇಲ್ಲಿ ದೇಹದ ಸೌಖ್ಯವನ್ನು ನೋಡಿ ಬೆರಗಾಗಬಾರದು. ಅವರು ಬೇಳ್ಳು ದೇಹವನ್ನು ನೆಚ್ಚಿ ಕೆಡಬಾರದು ಎಂಬುದನ್ನು ಸ್ವಾರಸ್ಯವಾದ ರೀತಿಯಲ್ಲಿ ತ್ತಾರೆ.

ದೇಹವನ್ನು, ಅದರ ಅಂದಚಂದಗಳನ್ನು ನೆಚ್ಚಿಕೊಂಡರೆ ಎಂದಿದ್ದರೂ ಕೆಡುಕೇ. ಈ ವಿಷಯವನ್ನು ಸುಂದರವಾದ ನಿದರ್ಶನದಿಂದ ವಿವರಿಸಿದ್ದಾರೆ. ಪೂತನಿಗೂ ಶ್ರೀಕೃಷ್ಣನಿಗೂ ಎಲ್ಲಿಯ ಸಂಬಂಧ! ಆದರೆ, ಆ ಪೂತನಿ ತನ್ನ ಮಗುವನ್ನು ಎಂದುಕೊಂಡಳು. ಅದು ಎಷ್ಟು ಆಕರ್ಷಕ ಸುಂದರ! ಎಂದುಕೊಂಡಳು. ಅದ ನಂದಗೋಕುಲದಲ್ಲಿ ಕಂಡಳು. ಆ ಕಾರಣದಿಂದ, ತನ್ನ ರಾಕ್ಷಸತ್ವವನ್ನು ಮರೆಮಾಚಿ, ತಾಯಿ ನ್ನು ಎತ್ತಿಕೊಳ್ಳಬೇಕಲ್ಲ. ಆ ಕಾರಣದಿಂದ, ತನ್ನ ರಾಕ್ಷಸತ್ವವನ್ನು ಸ್ವಾಭಾವಿಕವಾಗಿ ತಾಯಿ ಯಶೋದೆಯಂತೆ ಮಾರುವೇಷದಿಂದ ಬಂದು ಮಗುವನ್ನು ಸ್ವಾಭಾವಿಕವಾಗಿ ತಾಯಿ ಎತ್ತಿಕೊಳ್ಳುವಂತೆ ಎತ್ತಿಕೊಂಡು, ತನ್ನ ವಿಷದ ಹಾಲನ್ನು ಕುಡಿಸಿದಳು. ಆ ಮಗು ಯಾರು? ನ್ವಾಮಿ ನಲ್ಲವೇ? ದೇಹ ಮಾತ್ರ ಅರಿಯದ ಮಗುವಿನದು, ಅಷ್ಟೇ. ಅದು ಅವಳ ಅಂತರಂಗವನ್ನು ಅರಿತುಕೊಂಡಿತು. ಆದರೂ ತಿಳಿಯದಂತೆಯೇ, ಅವಳ ವಂಚನೆಯ ಕೃತ್ಯದಿಂದ, ಅವಳ ವಿಷದ ಹಾಲನ್ನು ಚಪ್ಪರಿಸುತ್ತ ಕುಡಿಯುವುದರ ಜೊತೆಯಲ್ಲೇ ಅವಳ ಪ್ರಾಣವನ್ನು ಹೀರಿಬಿಟ್ಟಿತು! ದೇಹದ ಸೌಖ್ಯದಿಂದ ವಂಚಿಸ ಹೋದರೆ ಬಂದ ಫಲ ಅಪಾಯ ಕಾರಿಯಾ!

ಆಳ್ವಾರರು ಹೇಳುತ್ತಾರೆ: ಮನಸ್ಸೇ, ದೇಹದ ಅಂದಚೆಂದಗಳಿಗೆ ಮರುಳಾಗ ಬೇಡ. ಎಂದಿದ್ದರೂ ಅದು ವಂಚಿಸತಕ್ಕದ್ದೇ. ಮನುಷ್ಯನನ್ನು ಕಡು ನಾಶಕ್ಕೀಡನ್ನಾಗಿ ಮಾಡತಕ್ಕದ್ದೇ. ತಿಳಿದೂ ತಿಳಿದೂ ಯಾರಾದರೂ ಕ್ರೂರವಾದವರ ಬಾಯಲ್ಲಿ ಸಿಕ್ಕಿ ಇರುವರೋ? ಹಾಗೆಯೇ, ನೀನೂ ನೀನು, ತಿಳಿದೂ ತಿಳಿದೂ ದೇಹೇಂದ್ರಿಯಗಳ ವಶವಾಗ ಬೇಡ. ಪಾಪಕರ್ಮಗಳನ್ನೆಸಗಬೇಡ. ಅದು ಅನರ್ಥಕಾರಿಯೇ ಸರಿ. (ನಿನ್ನ ಉದ್ಧಾರದ ಕಡೆಗೆ ನಿನ್ನ ದೃಷ್ಟಿಯನ್ನು ಹರಿಸು.)

15. பார்த்தோர் எதிரிதா நெஞ்சே!, படுதுயரம்
பேர்த்தோதப் பீடழிவாம் பேச்சில்லை,— ஆர்த்தோதம்
தம்மேனி தாள் தடவத் தாம் கிடந்து, தம்முடைய
செம்மேனிக் கண்வளர்வார் சீர்.

ಪಾರ್ತ್ತೋರ್ ಎದಿರಿದಾ ನೆಂಜೇ!, ಪಡುದುಯರಮ್
ಪೇರ್ತ್ತೋದ ಪ್ಪೀಡಳಿವಾಮ್ ಪೇಚ್ಚಿಲ್ಲೈ,— ಆರ್ತ್ತೋದಮ್
ತಮ್ಮೇನಿ ತಾಳ್ತಡವತ್ತಾಮ್ ಕಿಡನ್ದು, ತಮ್ಮುಡೈಯ
ಶೆಮ್ಮೇನಿಕ್ಕಣ್ ವಳರ್ವಾರ್ ಶೀರ್.

ಎದಿರಿದಾ எதிரிதா = ಎದುರಲ್ಲಿರುವಾಗ, ಪಾರ್ತ್ತು பார்த்து = ಕಂಡುಕೊಂಡು, ಓರ್ ஓர் = ಒಬ್ಬ,(ಅಂತಹವನು), ನೆಂಜೇ நெஞ்சே = ಮನಸ್ಸೇ, ಪಡುದುಯರಮ್ படுதுயரம் = ಆಳವಾದ ದುಃಖ(ಸಂಕಟ)ಗಳು, ಪೇರ್ತ್ತು பேர்த்து = ಕೀಳುವಂತೆ, ಓದ ஓத = ಹೇಳಲು, ಪೀಡು பீடு = (ಸ್ವಾಮಿಯ) ಹಿರಿಮೆಯು, ಅಳಿವು ಆಮ್ அழிவு ஆம் = ನಾಶವಾಗುವುದು,(ಎಂಬ), ಪೇಚ್ಚು ಇಲ್ಲೈ பேச்சில்லை = ಮಾತೇ ಇಲ್ಲ, ಆರ್ತ್ತು ஆர்த்து = ಅಬ್ಬರಿಸುತ್ತಾ, ಓದಮ್ ஓதம் = ಸಾಗರವು, ತಮ್ தம் = ತಮ್ಮ (ಸ್ವಾಮಿಯ), ಮೇನಿ மேனி = ದೇಹವನ್ನು, ತಾಳ್ தாள் = ಕಾಲುಗಳನ್ನು, ತಡವ தடவ = ನೀವರುತ್ತಿರಲು, ತಾಮ್ தாம் = ತಾವು (ಸ್ವಾಮಿಯು), ಕಿಡನ್ದು கிடந்து = ಪವಡಿಸಿ, ತಮ್ಮುಡೈಯ தம்முடைய = ತಮ್ಮ, ಶೆಮ್ ಮೇನಿ செம் மேனி = ಕೋಮಲ ಶರೀರವು, ಕಣ್ ವಳರ್ವಾರ್ கண் வளர்வார் = ನಿದ್ರಿಸುವ, ಶೀರ್ சீர் = ಹಿರಿಮೆಯನ್ನು.

ಮನಸ್ಸೇ, ಅಬ್ಬರಿಸುವ ಕಡಲು ಸ್ವಾಮಿಯ ದೇಹವನ್ನು ಕಾಲು(ಪಾದ)ಗಳನ್ನು ನೀವರುತ್ತಿರುವಾಗ, ~~ತಾನು ಮಲಗಿರುವ~~ ತನ್ನ ಕೋಮಲ ಶರೀರವು ನಿದ್ರಿಸುವಂತೆ ತಾನು ಪವಡಿಸಿರುವ ಹಿರಿಮೆಯನ್ನು ಎದುರಲ್ಲಿದ್ದಾಗಲೇ ಕಂಡುಕೊಂಡು ತಿಳಿದುಕೋ. ಆಳವಾದ ದುಃಖ ಸಂಕಟಗಳು ನಾಶವಾಗುವುದಕ್ಕಾಗಿ ಹೇಳುವ ಸ್ವಾಮಿಯ ಹಿರಿಮೆಯು (15)
ಅಳಿಯುವ ಮಾತೇ ಇಲ್ಲ;

ಹಿಂದಿನ ಪಾಶುರದಂತೆಯೇ ಇಲ್ಲಿಯೂ ಆಳ್ವಾರರು ತಮ್ಮ ಮನಸ್ಸಿಗೆ ಹಿತವಚನವನ್ನು ನುಡಿಯುತ್ತಿದ್ದಾರೆ.

Garani Srinivasan

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಭಗವಂತನ ಶ್ರೀರಾಮನಾಗಿ ಅವತರಿಸಿದಾಗ, ಸೀತೆಯನ್ನು ಕಳೆದುಕೊಂಡನಂತರ, ಆಕೆ ಲಂಕೆಯಲ್ಲಿರುವುದನ್ನು ತಿಳಿದು, ಲಂಕೆಗೆ ಮುತ್ತಿಗೆ ಹಾಕಲು ಕಡಲನ್ನು ದಾಟಬೇಕಿತ್ತು. ಕಡಲು ತನಗಾ ತನ್ನ ಮೇಲೆಗಾ ದಾರಿಯನ್ನು ತೆರವು ಮಾಡಬೇಕೆಂದು ಸಂಕಲ್ಪಿಸಿ, ಶ್ರೀರಾಮನು ಕಡಲತೀರದಲ್ಲಿ ದರ್ಭಶಯನನಾಗಿ ಮಲಗಿದನು. ಕಡಲು ಅಬ್ಬರಿಸುತ್ತಾ ಬಂದು ಅವನ ದೇಹವನ್ನು ಪಾದಗಳನ್ನು ಸವರುತ್ತಿದ್ದರೂ, ಅವನು ತನ್ನ ಸಂಕಲ್ಪವು ಸಿದ್ಧಿಸುವ ತನಕ ಹಾಸಿಗೆಯಲ್ಲಿ ಪವಡಿಸಿದ್ದನು. ಇದು [struck] ಸ್ವಾಮಿಯ ಹಿರಿಮೆಯನ್ನು ಹೇಳುವುದಕ್ಕೆ! ಹೀಗೆ ಭಗವಂತನು ಬೇರೆಬೇರೆ ಅವತಾರಗಳಲ್ಲಿ ನಡೆಸಿದ ಹಿರಿಮೆ ಲೆಕ್ಕವಿಲ್ಲದಷ್ಟಿದೆ. ಅವುಗಳನ್ನೆಲ್ಲಾ ಮೇಲಿಂದ ಮೇಲೆ ಹೇಳಿಕೊಳ್ಳುತ್ತಾ ಬರುವುದರಿಂದ, ಸ್ವಾಮಿಯ ಹಿರಿಮೆಗೆ ಕುಂದುಂಟಾಗುವುದಿಲ್ಲ. ಆದರೆ, ಯಾವುದನ್ನು ನೀನು ಹೇಳುವೆಯೋ ಅದು ನಿನ್ನ ಕಣ್ಣ ಮುಂದೆ ನಡೆದಂತೆ ಭಾವಿಸಿಕೊಂಡು, ಆನಂದಿಸುತ್ತಾ, ಸ್ವಾಮಿಯ ಹಿರಿಮೆಯನ್ನು ಅರಿತುಕೋ.

16. சீரால் பிறந்து சிறப்பால் வளராது,
பேர்வாமனாகாக்கால் பேராளா!, மார்பாரப்
புல்கிநீ யுண்டுமிழ்ந்த பூமிநீ ரேற்பரிதே?,
சொல்லுநீ யாமறியச் சூழ்ந்து.

ಶೀರಾಲ್ ಪಿಱನ್ದು ಶಿಱಪ್ಪಾಲ್ ವಳರಾದು,
ಪೇರ್ ವಾಮನಾಕಾಕ್ಕಾಲ್ ಪೇರಾಳಾ!, ಮಾರ್ಬಾರ
ಪ್ಪುಲ್ಗಿ ನೀ ಯುಣ್ಡುಮಿೞನ್ದ ಪೂಮಿನೀರೇಱ್ಪರಿದೇ?,
ಶೊಲ್ಲು ನೀ ಯಾಮಱಿಯ ಶ್ಶೂೞನ್ದು.

ಶೀರಾಲ್ சீரால் = ಸೊಬಗಿನಿಂದ (ಅತಿಶ್ರೇಷ್ಠನಾಗಿ), ಪಿಱನ್ದು பிறந்து = ಹುಟ್ಟಿ, ಶಿಱಪ್ಪಾಲ್ சிறப்பால் = ಅದ್ವಿತೀಯನಾಗಿ, ವಳರಾದು வளராது = ಬೆಳೆಯದಂತೆ, ಪೇರ್ ವಾಮನ್ பேர் வாமன் = ಹೆಸರಿಗೆ ತಕ್ಕಂತೆ ವಾಮನನಾಗಿ, ಆಕಾಕ್ಕಾಲ್ ஆகாக்கால் = ಆಗದೆ ಇರುವುದರಿಂದ, ಪೇರಾಳಾ பேராளா = ಮಹಾನುಭಾವನೇ (ಮಹನೀಯನೇ), ಮಾರ್ಬು மார்பு = ಎದೆ, ಆರ ஆர = ತುಂಬುವಂತೆ (ತಣಿಯುವಂತೆ), ಪ್ಪುಲ್ಗಿ புல்கி = ಆಲಿಂಗಿಸಿಕೊಂಡು, ನೀ நீ = ನೀನು, ಉಣ್ಡು உண்டு = (ಅದನ್ನು) ಉಂಡು, ಉಮಿೞನ್ದ உமிழ்ந்த = ಉಗುಳಿದ, ಪೂಮಿ பூமி = ಭೂಮಿಗಾಗಿ, ನೀರ್ நீர் = ನೀರನ್ನು, ಏಱ್ಪು ஏற்பு = ಎರೆಸಿಕೊಳ್ಳುವುದು, ಅರಿದೇ அரிதே = ಆಶ್ಚರ್ಯವೇ (ಅಸಾಧ್ಯವೇ?), ಶೊಲ್ಲು ನೀ சொல்லுநீ = ನೀನೇ ಹೇಳು, ಯಾಮ್ யாம் = ನಾವು, ಅಱಿಯ அறிய = ಅರಿತುಕೊಳ್ಳುವಂತೆ, ಶೂೞನ್ದು சூழ்ந்து = ಆಲೋಚಿಸಿ (ವಿವರಿಸಿ).

ಮಹನೀಯನೇ, ಸೊಬಗಿನಿಂದ ಹುಟ್ಟಿ, ಅತಿಶ್ರೇಷ್ಠನಾಗಿ ಬೆಳೆಯದಂತೆ

Garani Srinivasan

ದೇವರಿಗೆ ತನ್ನಂತೆ ವಾಮನನಾಗಿ ಆಗದೆ ಇರುವುದರಿಂದ, ಎದೆಗಾರಿಯುವಂತೆ ಆಲೋಚಿಸಿಕೊಂಡು, ನೀನು ಬಂದು ಬದುಕಿದ್ದ, ಭೂಮಿಯಾಗಿ ನೀರನ್ನು ಎರೆದುಕೊಳ್ಳು ವುದು ಆಶ್ಚರ್ಯವೇ? (ಅಸಾಧ್ಯವೇ?) ನೀನೇ ಹೇಳು ನಾವು ಆಲೋಚಿಸಿ (ನಿನ್ನನ್ನು) (16) ಅರಿತುಕೊಳ್ಳುವಂತೆ.

'ಭಗವಂತನ ಲೀಲೆಯ ಕಾರ್ಯಗಳನ್ನು ಕಣ್ಣ ಮುಂದೆ ನಡೆದಂತೆ ಭಾವಿಸಿಕೊಂಡು, ಯೋಚಿಸಿ, ಅರಿತುಕೊಳ್ಳಬೇಕು' ಎಂದು ಹಿಂದಿನ ಕಾಲದಲ್ಲಿ ಆಳ್ವಾರರು ತಮ್ಮ ಮನಸ್ಸಿಗೆ ಬೋಧನೆ ಮಾಡಿದರು.

ಭಗವಂತನ ಲೀಲೆ ಯಾವುದರಲ್ಲಿಲ್ಲ? ಯಾವುದನ್ನು ಅರಿತುಕೊಳ್ಳಬೇಕು? ಯಾವುದನ್ನು ಕುರಿತು ಯೋಚಿಸುವುದು? ಹೇಗೆ? ಅದನ್ನು ಅರಿತುಕೊಳ್ಳುವುದಾದರೂ ಹೇಗೆ? — ಆಳ್ವಾರರಿಗೆ ಅರ್ಥವಾಗದೆ, ಅದಕ್ಕೆ ತನ್ನ ಲೀಲೆಯಲ್ಲಿ, ಇಲ್ಲಿ, ನಿದರ್ಶನಗಳನ್ನು ನೀಡುತ್ತಾರೆ.

"ಕೆರಾಲ್ ಪಿರಾನ್ದು" — ಸೂರ್ಯವಂಶದಲ್ಲಿ, ದಶರಥ ಚಕ್ರವರ್ತಿಯ ಮಗನಾಗಿ, ಅತ್ಯಂತ ಮನೋಹರ ಸುಂದರನಾಗಿ ಭಗವಂತನು ಶ್ರೀರಾಮನಾಗಿ ಅವತರಿಸಿದ್ದ. ಕುಲಗುರುವಾದ ವಸಿಷ್ಠರು ಅವನ ನಾಮಕರಣ ಸಂದರ್ಭದಲ್ಲಿ 'ಅಭಿರಾಮ'ನಾದ್ದರಿಂದ ಅವನನ್ನು 'ರಾಮ' ಎನ್ನೋಣ ಎಂದರು.

"ಕುಡಪ್ಪಾಲ್ ಮಕ್ಕಳಾದು" — ಯದುವಂಶದ ರಾಜನ ಮೊಮ್ಮಗನಾಗಿ, ಅರಮನೆಯಲ್ಲಿ ಹುಟ್ಟಿ ಅದ್ದೂರಿಯಿಂದ ಬೆಳೆಯುವುದಕ್ಕೆ ಬದಲಾಗಿ, ಭಗವಂತನು (ದೇವಕಿ-ವಸುದೇವರ ಮಗನಾಗಿ) ಶ್ರೀಕೃಷ್ಣನಾಗಿ ಸೆರೆಮನೆಯಲ್ಲಿ ಹುಟ್ಟಿದನು. ತಂದೆ ತಾಯಿಗಳ ಲಾಲನೆ ಪಾಲನೆಗೆ ಸಿಕ್ಕದೆ, ಗೋಪಾಲರ ಮಗನಂತೆ ನಂದಗೋಕುಲದಲ್ಲಿ ಬೆಳೆದನು.

"ಪಿರ್ ವಾಮನ್ ಆದಲ್" — ದೇವರಿಗೆ ತನ್ನ ಹಾಗೆ ಕುಳ್ಳನಾಗಿ ಅವತರಿಸದೆ ಇರುವುದುಂಟೇ? ವಾಮನನಾದವನು ಮತ್ತೆ ತ್ರಿವಿಕ್ರಮನೂ ಆಗಿ ಬೆಳೆಯಲಾರನೇ? ಸಂದರ್ಭಕ್ಕೆ ತಕ್ಕಂತೆ ಭಗವಂತನು ಏನೇನಾಗಲಾರ? ಹೇಗೆ ತನ್ನ ಲೀಲೆಯನ್ನು ಪ್ರಕಟಿಸಲಾರ?

"ಮಾರ್ಬಾರ ಪುಲ್ಲ ನಿಲಯುಂದು ಮಿಲಿರ್ನ್ದ ಪ್ರಾಯ ನಿರ್ ವಿಳಾವು ಅಂದೇ" — ಭೂಮಿಯನ್ನು ಸೃಷ್ಟಿಸಿದವನು ಭಗವಂತ. ಅದನ್ನು ರಕ್ಷಿಸುವವನೂ ಅವನೇ. ಹಿಂದೆ, ಹಿರಣ್ಯಾಕ್ಷನು ಭೂಮಿಯನ್ನು ಎತ್ತಿಕೊಂಡು ಹೋಗಿ, ತಳದಲ್ಲಿ ಎಲ್ಲಿಯೋ ಅಡಗಿಸಿಕೊಂಡಾಗ, ಭಗವಂತನು ಮಹಾವರಾಹರೂಪಿಯಾಗಿ ಅದನ್ನು ಉದ್ಧರಿಸಲಿಲ್ಲವೇ? ಪ್ರಳಯಕಾಲ ಬಂದಾಗ ಅದನ್ನುಂಡು, ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಕಾಪಾಡಿದವನೂ ಅವನೇ. ಭೂದೇವಿಯನ್ನು ತನ್ನ ಪತ್ನಿಯನ್ನಾಗಿ ಮಾಡಿಕೊಂಡವನೂ ಅವನೇ. ಹೀಗೆ, ಭೂಮಿಯೊಡನೆ ತನಗೆ ಕೇವಲವಾದ ಸಂಬಂಧವಿರುವಾಗ, ಅವನು ವಾಮನನಾಗಿ ಬಂದು,

"ಮೂರು ಹೆಜ್ಜೆಯಷ್ಟು ನೆಲ"ಕ್ಕಾಗಿ ಬಲಿ ಚಕ್ರವರ್ತಿಯಲ್ಲಿ ಯಾಚಿಸಿ, ಅವನಿಂದ ಧಾರೆ ಎರೆಸಿಕೊಳ್ಳುವುದು ಅದ್ಭುತವೇ? ಆಶ್ಚರ್ಯವೇ?

ಆಳ್ವಾರರು ಹೇಳುತ್ತಾರೆ: ಮಹಾಮಹಿಮನೇ, ನಿನ್ನ ಅವತಾರದ ಮಹಿಮೆಯನ್ನು ನಮ್ಮಂಥವರು ತಿಳಿದುಕೊಳ್ಳುವುದಾದರೂ ಹೇಗೆ? ನೀನು ನಡೆಸಿರುವುದೆಲ್ಲವೂ ಊಹಿಸಲಶಕ್ಯದಂಥ ಆಶ್ಚರ್ಯಕರವಾದವೇ! ಚಕ್ರವರ್ತಿಯ ಮಗನಾಗಿ, [illegible] ಹುಟ್ಟಿ, ರಾಜ್ಯಭಾರ ನಡೆದದ್ದೇ ವನವಾಸ ಮಾಡುತ್ತ, ರಾಕ್ಷಸ ವಂಶವನ್ನೆಲ್ಲಾ ನಿನ್ನ ಕೋದಂಡದಿಂದಲೇ ನಿರ್ಮೂಲಿಸಿದೆ. ರಾಜನ ಮಗನಾಗಿ ಹುಟ್ಟಿ ಅರಮನೆಯಲ್ಲಿ ಆನಂದಿಸುವುದಕ್ಕೆ ಬದಲಾಗಿ, ಸೆರೆಮನೆಯಲ್ಲಿ ದೇವಕಿಯ ಮಗನಾಗಿ ಹುಟ್ಟಿ, ಬೇರೊಬ್ಬ ತಾಯಿಯ ಮಗನಾಗಿ ಬೆಳೆದೆ. ಆ ಚಿಕ್ಕಂದಿನಿಂದಲೂ ನಾನಾ ಅದ್ಭುತಗಳನ್ನು ನಡೆಸಿದೆ. ಅತ್ಯಂತ ಕುಳ್ಳ ವಾಮನನಾಗಿ ಹುಟ್ಟಿ, ನಿನ್ನ ಸ್ವತ್ತೇ ಆದ ಭೂಮಿಯನ್ನು ಮೂರಡಿ ನೆಲಕ್ಕಾಗಿ ಬಲಿಚಕ್ರವರ್ತಿಯಲ್ಲಿ ಯಾಚಿಸಿ, ಅವನಿಂದ ಧಾರೆ ಎರೆಸಿಕೊಂಡೆ. ಮತ್ತು ತ್ರಿವಿಕ್ರಮನಾಗಿ ಬೆಳೆದು, ~~ಅದನ್ನು~~ ನಿನ್ನ ಒಂದೇ ಹೆಜ್ಜೆಯನ್ನು ಎಲ್ಲೆಲ್ಲೂ ಹರಡಿ ಭೂಮಂಡಲವನ್ನೆಲ್ಲಾ ಅಳೆದುಕೊಂಡೆ. ಇವುಗಳನ್ನು ನಾವು ಯೋಚಿಸುವುದಾದರೂ ಹೇಗೆ? ಹೇಗೆ ಆಲೋಚಿಸಿ, ನಿನ್ನ ಮಹಿಮೆಯನ್ನು ಅರಿತುಕೊಳ್ಳುವುದು? ಈ ಗುಟ್ಟನ್ನು ನೀನೇ ನಮಗೆ ತಿಳಿಯ ಹೇಳು.

17. சூழ்ந்தடியார் வேண்டினக்கால் தோன்றாது விட்டாலும்
வாழ்ந்திடுவர் பின்னும் தம் வாய்திறவார், — சூழ்ந்தெங்கும்
வாள்வரைகள் போலரக்கன் வன்தலைகள் தாமிடிய,
தாள்வரை வில்லேந்தினார் தாம்.

ಶೂಳ್ನ್ದಡಿಯಾರ್ ವೇಣ್ಡಿನಕ್ಕಾಲ್ ತೋನ್ರಾದು ವಿಟ್ಟಾಲುಮ್
ವಾಳ್ನ್ದಿಡುವರ್ ಪಿನ್ನುಮ್ ತಮ್ ವಾಯ್ ತಿರವಾರ್, — ಶೂಳ್ನ್ದೆಙ್ಗುಮ್
ವಾಳ್ವರೈಗಳ್ ಪೋಲರಕ್ಕನ್ ವನ್ತಲೈಗಳ್ ತಾಮಿಡಿಯ,
ತಾಳ್ವರೈ ವಿಲ್ಲೇನ್ದಿನಾರ್ ತಾಮ್.

ಶೂಳ್ನ್ದು சூழ்ந்து = ಸುತ್ತಿಕೊಂಡು, ಅಡಿಯಾರ್ அடியார் = ಪಾದಸೇವಕರು (ಭಕ್ತರು), ವೇಣ್ಡಿನ್ ಅಕ್ಕಾಲ್ வேண்டின் அக்கால் = ಬೇಡಿದ ಸಮಯದಲ್ಲಿ, ತೋನ್ರಾದು தோன்றாது = ತೋರಿಸಿಕೊಳ್ಳದೆ, ವಿಟ್ಟಾಲುಮ್ விட்டாலும் = ಬಿಟ್ಟರೂ (ಇದ್ದರೂ), ವಾಳ್ನ್ದಿಡುವರ್ வாழ்ந்திடுவர் = ಆಶೀರ್ವದಿಸುವರು, ಪಿನ್ನುಮ್ பின்னும் = ಮತ್ತು, ವಾಯ್ ತಿರವಾರ್ வாய் திறவார் = ಬಾಯಿಬಿಟ್ಟು ಮಾತನಾಡುವುದಿಲ್ಲ (ಹೇಳುವುದಿಲ್ಲ), ಶೂಳ್ನ್ದು ಎಙ್ಗುಮ್ சூழ்ந்து எங்கும் = ಎಲ್ಲೆಲ್ಲಿಯೂ ಸುತ್ತಿಕೊಂಡಿರುವ, ವಾಳ್

வாள் = ಹೊಳೆಯುವ, ವರ್ರುಪಲ್ ಪೋಲ್ வரைகள் போல = ಬೆಟ್ಟಗಳಂತೆ, ಅರಕ್ಕನ್ அரக்கன் = ರಾಕ್ಷಸನ, ಪಲ್ ಕಲ್ಪುಪಲ್ ಕಾಮೂ ಮುಡಿ தோள்கள் தாம் = ಬಲಿಷ್ಠವಾದ (ಕೊಬ್ಬಿದ) ತಲೆಗಳನ್ನು, ಇಡಿಯ இடிய = ನುಚ್ಚುನೂರುಮಾಡಲು. ತೋಳ್ தாள் = ದಂಡವನ್ನುಳ್ಳ (ಭುಜಗಳನ್ನುಳ್ಳ), ವರ್ರ ಮಾರಾ = ಬೆಟ್ಟದಂತೆ(ದೃಢವಾದ), ವಿಲ್ ವಳಿಂ = ಬಿಲ್ಲನ್ನು, ಪನ್ನಿನಾರ್ ಕಾಮೂ ஏந்தினார் தாம் = ಧರಿಸಿದವರಾದ ಕಾವು (ಭಗವಂತನು).

ಭಕ್ತರು ಸುತ್ತಿಕೊಂಡು ಬೇಡಿದ ಸಮಯದಲ್ಲಿ ಕಾಣಿಸಿಕೊಳ್ಳದೆ ಇದ್ದರೂ, (ಅವರನ್ನು) ಆಶೀರ್ವದಿಸುವರು ಮತ್ತು ಬಾಯಿಬಿಟ್ಟು ಏನನ್ನೂ ಹೇಳುವುದಿಲ್ಲ. ಎಲ್ಲೋ ~~ಸುತ್ತ~~ ~~ಹೊಳೆಯುವ~~ ಸುತ್ತಿಕೊಂಡಿರುವ ಹೊಳೆಯುವ ಬೆಟ್ಟಗಳಂತೆ ರಾಕ್ಷಸನ ಕೊಬ್ಬಿದ ತಲೆಗಳನ್ನು ನುಚ್ಚುನೂರುಮಾಡಲು ದಂಡವನ್ನು ಭುಜಗಳನ್ನುಳ್ಳ (17) ದೃಢವಾದ ಬಿಲ್ಲನ್ನು ಧರಿಸಿದವರಾದ ಅವರು (ಭಗವಂತನು).

ಇಲ್ಲಿ ಭಗವಂತನ ಶ್ರೀರಾಮಾವತಾರದ ಹಿರಿಮೆಯನ್ನು ಹೇಳಲಾಗುತ್ತದೆ.

ಶ್ರೀರಾಮನು ಮಾನವರೂಪದಲ್ಲಿ ಜನಿಸಿ, ಎಲ್ಲ ಬಗೆಯಲ್ಲೂ ಆದರ್ಶಮಾನವನಾಗಿ ಬಾಳಿ ನಡೆದುಕೊಂಡನಷ್ಟೆ. ಮಹಾಪರಾಕ್ರಮಿಯೂ ಅಜೇಯನೆನಿಸಿಕೊಂಡವನೂ ಆದ ರಾವಣಾಸುರನ ಕೊಬ್ಬಿದ ಹತ್ತು ತಲೆಗಳನ್ನು ತುಂಡರಿಸಲು ಸಾಮಾನ್ಯವಾದ ಕೋದಂಡವೊಂದನ್ನೆ ಬಳಸಿದನು. ಅದೇ ಅವನಿಗೆ ಸಾಕೆನಿಸಿತು. ಶ್ರೀರಾಮನ ಹಿರಿಮೆಯನ್ನು ಜ್ಞಾನಿಗಳಾಗಿ, ಭಕ್ತರಾಗಿ ಅರಿತುಕೊಂಡವರು ಅನೇಕಮಂದಿ. ಅವರು ಅವನನ್ನು ಎಷ್ಟೇ ಹೊಗಳಲಿ, ಎಷ್ಟೇ ಬೇಡಲಿ, ಅವನು ಮಾತ್ರ ತನ್ನ ಪ್ರತಿಷ್ಠೆಯನ್ನು ಯಾವ ರೀತಿಯಲ್ಲೂ ತೋರಿಕೊಳ್ಳಲಿಲ್ಲ. ಆ ಬಗೆಗೆ ಬಾಯಿಬಿಡಲೂ ಇಲ್ಲ. ಆದರೆ, ಅವರನ್ನೆಲ್ಲ ತನ್ನ ಅಂತರಂಗದಲ್ಲಿಯೇ ಆಶೀರ್ವದಿಸಿ, ಅವರವರ ಅಭೀಷ್ಟಗಳನ್ನು ಸಲ್ಲಿಸಿದನು.

ಆಳ್ವಾರರು ಹೇಳುತ್ತಾರೆ: ಭಗವಂತನು ಸುಲಭಸಾಧ್ಯನು. ಭಕ್ತನ ಬೇಡಿಕೆಗಳನ್ನು ತಪ್ಪದೆ ಪೂರೈಸುತ್ತಾನೆ. ಅವರ ಕಣ್ಣಿಗೆ ಅವನು ಕಾಣಿಸಿಕೊಳ್ಳಬೇಕಾದ್ದಿಲ್ಲ. ಅವರಿಗೆ ಬಾಯಿಬಿಟ್ಟು ಏನನ್ನು ಹೇಳಬೇಕಾದ್ದಿಲ್ಲ, ಅವನನ್ನು ನಂಬಿದರೆ ಸಾಕು. ಅದು ತಪ್ಪದೆ ಸಿದ್ಧಿಸುತ್ತದೆ.

18. தாம்பாலாப்புண்டாலு மத்தழும்பு தானிளக,
பாம்பாலாப்புண்டு பாடுற்றாலும், — சோம்பாதிப்
பல்லுருவை யெல்லாம் படர்வித்த வித்தா!, உன்
தொல்லுருவை யாரறிவார்? சொல்லு.

ತಾಂಬಾಲಾಪ್ಪುಣ್ಡಾಲು ಮತ್ತಳುಮ್ಬು ತಾನಿಳಕ,
ಪಾಮ್ಬಾಲಾಪ್ಪುಣ್ಡು ಪಾಡುಟ್ರಾಲುಮ್, — ಶೋಮ್ಬಾದು ಇ
ಪ್ಪಲ್ಲುರುವೈ ಯೆಲ್ಲಾಮ್ ಪಡರ್ ವಿತ್ತ ವಿತ್ತಾ!, ಉನ್
ತೊಲ್ಲುರುವೈ ಯಾರಱಿವಾರ್? ಶೊಲ್ಲು,

ತಾಮ್ಬಾಲ್ ತಾಂಬಾಲ್ = ಹಗ್ಗದಿಂದ, ಆಪ್ಪು ಉಣ್ಣಾಲುಮ್ ಆಪ್ಪು ಉಣ್ಡಾ
ಲುಮ್ = ಕಟ್ಟಲ್ಪಟ್ಟರೂ, ತಿತ್ತಿಲುಮ್ ಅತ್ತಿ(ಗ)ಮ್ಪು = ಅದರಿಂದಾದ ಗುರುತು, ತಾನ್
ಇಳಕು ತಾಣ್ ತಿಣಾಕ = ಮಾಗಲು, ಪಾಮ್ಬಾಲ್ ಪಾಂಬಾಲ್ = ಹಾವಿನಿಂದ, ಆಪ್ಪುಣ್ಡು
ಆಪ್ಪುಣ್ಡು = ಕಟ್ಟಿಸಿಕೊಂಡು, ಪಾಡು ಪಾಟು = ಕಷ್ಟವನ್ನು, ಉಣ್ಣಾಲುಮ್ ಉಣ್ಡು
ಲುಮ್ = ಅನುಭವಿಸಿದರೂ, ಶೊಲ್ಲಾದು ಚೊಂಪಾತು = ಬೇಸರಗೊಳ್ಳದೆ,
ಇಪ್ಪಲ್ ಉರುವ್ವ ಎಲ್ಲಾಮ್ ಇಪ್ಪಲ್ ಉರುಕ್ಕಾಯ ನಾಲ್ಪಾಮ್ = ಈ ಹಲವಾರು
ರೂಪ(~~ಗಳನ್ನು~~)ಗಳನ್ನೆಲ್ಲಾ, ಪಡರ್ ವಿತ್ತ ಪಡರ್ ವಿತ್ತ್ = ವಿಸ್ತರಿಸಿದ,
ವಿತ್ತಾ ವಿತ್ತಾ = ಆದಿಕಾರಣನೇ, ಉನ್ ಉನ್ = ನಿನ್ನ, ತೊಲ್ ಉರುವ್ವೈ ತಾನ್
ಉಣ್ಣಾಯ = ಪ್ರಾಚೀನ (ಅನಾದಿಯಾದ) ರೂಪವನ್ನು, ಯಾರ್ ಅಱಿವಾರ್ ಯಾರ್
ಅಱಿವಾರ್ = ಯಾರು ಅರಿಯಬಲ್ಲರು, ಶೊಲ್ಲು ಚೊಲ್ಲು = ಹೇಳು.

ಹಗ್ಗದಿಂದ ಕಟ್ಟಿಸಿಕೊಂಡರೂ, ಅದರಿಂದಾದ ಗುರುತು ಮಾಗಲು, ಹಾವಿನಿಂದ ಕಟ್ಟಿಸಿಕೊಂಡು ಕಷ್ಟವನ್ನನುಭವಿಸಿದರೂ. ಬೇಸರಗೊಳ್ಳದೆ, ಈ ಹಲವಾರು ರೂಪಗಳನ್ನೆಲ್ಲಾ ವಿಸ್ತರಿಸಿದ ಆದಿಕಾರಣನೇ, ನಿನ್ನ ಅನಾದಿಯಾದ (ಪ್ರಾಚೀನವಾದ) ರೂಪವನ್ನು ಯಾರು ಅರಿಯಬಲ್ಲರು, ಹೇಳು. (18)

ಹಿಂದಿನ ಪಾಶುರದ ವಿಷಯವನ್ನೇ ಇಲ್ಲಿಯೂ ಮುಂದುವರಿಸಲಾಗಿದೆ. ಭಗವಂತನನ್ನು ಕಣ್ಣಾರ ಕಾಣಬೇಕೆನ್ನುವವರು, ಅವನ ಅನಾದಿಯಾದ ದಿವ್ಯಸ್ವರೂಪವನ್ನು ಕಾಣುವುದು ಅಸಾಧ್ಯವಾಗಬಹುದು. ಅವರೆಷ್ಟು ಅಂಗಲಾಚಿದರೂ ಅದು ಅವರಿಗೆ ಕಾಣಿಸದಿರಬಹುದು. ಅದಕ್ಕೆ ಬದಲಾಗಿ, ಜಗತ್ತಿನಲ್ಲಿ ನಮ್ಮ ಕಣ್ಣೆದುರಲ್ಲಿ ಕಾಣುವ ನಾನಾ ಬಗೆಯ ಸ್ಥಾವರ, ಜಂಗಮ ವಸ್ತುಗಳಿವೆಯಲ್ಲ. ಅವೆಲ್ಲವೂ ಆ ಸ್ವಾಮಿಯ ಬೇರೆ ಬೇರೆ ರೂಪಗಳೇ ಎಂದು ಅರಿತುಕೊಂಡು, ಆ ಮೂಲಕ ಅವನನ್ನು ಕಂಡು ಆನಂದಿಸುವುದು ಒಂದು ಅಪೂರ್ವವಾದ ಅನುಭವ ಎಂದು ಈ ಪಾಶುರ ನಿರೂಪಿಸುತ್ತದೆ.

"ತಾಮ್ಬಾಲ್ ಆಪ್ಪುಣ್ಡು ....." – ಭಗವಂತನು ಶ್ರೀಕೃಷ್ಣನಾಗಿ ಅವತರಿಸಿ, ನಂದಗೋಕುಲದಲ್ಲಿ ಬೆಳೆಯುತ್ತಾ ನಾನಾ ಆಶ್ಚರ್ಯಕರ ಕಾರ್ಯಗಳನ್ನು ನಡೆಸಿದನಷ್ಟೆ. ಅವುಗಳಲ್ಲಿ ಒಂದು ನಿದರ್ಶನ ಇಲ್ಲಿದೆ: ಮಗುವಾಗಿ ಶ್ರೀಕೃಷ್ಣನು ಮಾಡಿದ ಚೇಷ್ಟೆಗಳನ್ನು, ನೆರೆಹೊರೆಯವರಿಂದ ಅವನ ಮೇಲಣ ದೂರುಗಳನ್ನು ಕೇಳಿ ಕೋಪಗೊಂಡ ಯಶೋದೆ, ಕಡೆಗೊಮ್ಮೆ ಹಗ್ಗದಿಂದಲೇ ಅವನನ್ನು ಒಂದು ಒರಳುಕಲ್ಲಿಗೆ ಕಟ್ಟಿಹಾಕಿದಳು. ಬಿಗಿದ ಹಗ್ಗದಿಂದ ಆದ ಗುರುತು ಮಾಗುವುದಕ್ಕೆ ಕೆಲವು ದಿನಗಳೇ ಆದವು.

"ಪಾಮ್ಬಾಲ್ ಆಪ್ಪುಣ್ಡು ...." – ಇದೂ ಕೃಷ್ಣಾವತಾರದ ಮತ್ತೊಂದು ಪ್ರಸಂಗ. ಶ್ರೀಕೃಷ್ಣನು ಸ್ವಲ್ಪ ದೊಡ್ಡವನಾದ ಬಳಿಕ, ಅವನೂ ಗೊಲ್ಲಬಾಲಕರ ಜೊತೆ

Garani Srinivasan

ದನಕರುಗಳೊಡನೆ ಕಾಡಿಗೆ ಹೋಗುತ್ತಿದ್ದನು. ಯಮುನಾನದಿಯಲ್ಲಿ ಒಂದು ಮಡು—ಕಾಳಿಂದೀ ಮಡು. ಅಲ್ಲಿ ಕಾಳೀಯ ಎಂಬ ವಿಷಸರ್ಪ ವಾಸವಾಗಿತ್ತು. ಅದರ ವಿಷದಿಂದ ನೀರು ಮನುಷ್ಯರಾಗಲಿ ಪ್ರಾಣಿಗಳಾಗಲಿ ಕುಡಿಯಲು ಯೋಗ್ಯವಲ್ಲವಾಗಿತ್ತು. ಇದನ್ನರಿತ ಶ್ರೀಕೃಷ್ಣನು, ಒಂದುದಿನ, ಆ ಮಡುವಿನ ದಡದಲ್ಲಿ ಬೆಳೆದಿದ್ದ ಕದಂಬದ ಮರವನ್ನೇರಿ, ಅದರ ತುದಿಯಿಂದ ಮಡುವಿನೊಳಕ್ಕೆ ಧುಮುಕಿದನು. ಗೋವಳರೆಲ್ಲರೂ ಭೀತಿಗೊಂಡರು. ನಡನಡುಗಿದರು. ಅತ್ತರು. ಕೃಷ್ಣನು ಕಾಣಿಸಲಿಲ್ಲವಲ್ಲ, ಮೇಲಕ್ಕೆ ಬರಲಿಲ್ಲವಲ್ಲ ಎಂದು ಕೊರಗಿಕೊಂಡರು. ಅಷ್ಟರಲ್ಲಿ ಬಾಲಕೃಷ್ಣನೇ ನೀರಿನ ಮೇಲೆ ಕಾಣಿಸಿಕೊಂಡನು. ಕಾಳೀಯನೊಡನೆ ಅವನು ಸೆಣಸುತ್ತ. ಅದು ಅವನ ಮೈಯನ್ನೆಲ್ಲಾ ಸುತ್ತಿಕೊಂಡಿತ್ತು. ಅವನು ಅದರ ಹೆಡೆಯನ್ನೇರಿ, ಅಲ್ಲಿ ಕುಣಿದಾಡುತ್ತ ಆನಂದಿಸುತ್ತಿದ್ದನು. ಕಡೆಗೆ ಅದು ಶಕ್ತಿಗುಂದಿ ಕೃಷ್ಣನಿಗೆ ಶರಣಾಗಿ, ಜೀವದಾನ ಬೇಡಲು, ಅದನ್ನು ಮನ್ನಿಸಿ, ಸಮುದ್ರಕ್ಕೆ ಕಳುಹಿಕೊಟ್ಟನು. ಭಗವಂತನು ಶರಣಾಗತವತ್ಸಲನಲ್ಲವೇ!

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಆದಿಕಾರಣನೇ, ನಾಶವಿಲ್ಲದ ನಿನ್ನ ಅನಾದಿಸ್ವರೂಪವನ್ನು ನೋಡುವುದಕ್ಕೆ ವಿವರಿಸಿ ಹೇಳುವುದಾಗಲಿ ಯಾರಿಂದ ಸಾಧ್ಯವಾದೀತು? ಸಂಸಾರಿಗಳ ನಡುವೆ ನೀನು ಸಿಕ್ಕಿಕೊಂಡು, ನಾನಾ ಬಗೆಯ ಕಷ್ಟಗಳನ್ನು ಅವರಿಂದ ಅನುಭವಿಸಿದರಾದರೂ, ನೀನು ಬೇಸರಗೊಳ್ಳದಂತೆ, ನಿನ್ನ ಸೃಷ್ಟಿಕಾರ್ಯದಲ್ಲಿಯೇ ತೊಡಗಿರುವೆ. ಅವರುಗಳನ್ನು ರಕ್ಷಿಸುವೆ. ಇದೇ ನಿನ್ನ ವೈಶಿಷ್ಟ್ಯ.

19. சொல்லில் குறையில்லை சூதறியா நெஞ்சமே!,
எல்லிப் பகலென்னா தெப்போதும், — தொல்லைக்கண்
மாத்தானைக் கெல்லா மொருவனையே மாறுக,
காத்தானைக் காண்டு நீ காண்.

ಸೊಲ್ಲಿಲ್ ಕುಱೈಯಿಲ್ಲೈ ಸೂದಱಿಯಾ ನೆಂಜಮೇ!,
ಎಲ್ಲಿಪ್ಪಗಲೆನ್ನಾದೆಪ್ಪೋದುಮ್, — ತೊಲ್ಲೈಕ್ಕಣ್
ಮಾತ್ತಾನ್ಕ್ಕೆಲ್ಲಾ ಮೊಱೈವರೈಯೇ ಮಾಱಾಗ,
ಕಾತ್ತಾನೈ ಕ್ಕಣ್ಡು ನೀ ಕಾಣ್.

ಸೊಲ್ಲಿಲ್ சொல்லில் = ಹೇಳುವುದಕ್ಕೆ, ಕುಱೈ குறை = ಕೊರತೆ, ಇಲ್ಲೈ இல்லை = ಇಲ್ಲ, ಸೂದು சூது = ಚಮತ್ಕಾರವನ್ನು (ಉಪಾಯವನ್ನು), ಅಱಿಯಾ அறிய = ತಿಳಿಯದ, ನೆಂಜಮೇ நெஞ்சமே = ಮನಸ್ಸೇ, ಎಲ್ಲಿ எல்லி = ಸಂಜೆ (ರಾತ್ರಿ), ಪಗಲ್ பகல் = ಹಗಲು, ಎನ್ನಾದೆ என்னாதே = ಎನ್ನದಂತೆ, ಎಪ್ಪೋದುಮ್ எப்போதும் = ಎಲ್ಲಕಾಲದಲ್ಲೂ, ತೊಲ್ಲೈಕ್ಕಣ್ தொல்

ಓರ್ ಕಣ್ = ಹಿಂದಿನ ಕಾಲದಲ್ಲಿ, ಮಾ ಕಾಸ್ತ್ರೃ ಎಲ್ಲಾಮ್ ಮಾ ಞಾಲಕ್ಕ ನಾಟು ಞಾಲಮ್ = ಬಲು ದೊಡ್ಡ ಸೈನ್ಯಗಳೆಲ್ಲಾ, ಓರ್ ಇರವಿಲ್ಲೇ ನಾಳ್ ಜಾವಳಾರಯೇ = ನಾಟಿಯಿಲ್ಲದ ಇವರನ್ನೇ, ಮಾಯಿ ಆದ ಮಾಱು ಆಕ = ನಿರಾಯುಧನಾಗಿ, ಕಾತ್ತಾಸ್ಥೆ ಕಾಕ್ಕ್ ಞಾಲಿ = ರಕ್ಷಿಸಿದವನನ್ನು, ಕಲ್ಡು ನೀ ಕಣ್ಡ್ರನ್ = ನೀನು ಅರಿತುಕೊಂಡು, ಕಾಣ್ ಕಾಣಾ = (ಅವನನ್ನು) ಕಾಣು.

ಶತ್ರುಗಳನ್ನ ಅಯ್ಯದ ಮನಸ್ಸೇ, ಹೇಳುವುದಕ್ಕೆ ಕೊರತೆಯೇ ಇಲ್ಲ. ಹಿಂದಿನ ಕಾಲದಲ್ಲಿ, ಬಲು ದೊಡ್ಡ ಸೈನ್ಯದಲ್ಲೆಲ್ಲಾ ನಾಟಿಯಿಲ್ಲದ ಇವರನ್ನೇ ರಾತ್ರಿ ಹಗಲು ಎನ್ನದಂತೆ ಎಲ್ಲಕಾಲದಲ್ಲೂ ನಿರಾಯುಧನಾಗಿ ರಕ್ಷಿಸಿದವನನ್ನು ನೀನು ಅರಿತುಕೊಂಡು (19) ಕಾಣು.

ಹಿಂದಿನ ಪಾಶುರಗಳಲ್ಲಿ ಭಗವಂತನ ಹಿರಿಮೆಯನ್ನು, ಮಹಿಮೆಯನ್ನು, ಇತರ ಕಲ್ಯಾಣಗುಣಗಳನ್ನು ಕುರಿತು ಆಳ್ವಾರರು ಹೇಳಿದರು: ಈಗ ಅವರು ಮತ್ತೆ ತಮ್ಮ ಮುಗ್ಧ ಮನಸ್ಸಿಗೆ ಹಿತವಚನವನ್ನು ನುಡಿಯುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಶತ್ರುಗಳನ್ನು ಚಮತ್ಕಾರಗಳನ್ನು ಅರಿಯದ ಶುದ್ಧವಾದ ಮನಸ್ಸೇ, ಭಗವದ್ವಿಷಯವಾಗಿ ಹೇಳಬೇಕೆಂದರೆ, ಅದಕ್ಕೆ ಕೊನೆಯೇ ಇಲ್ಲ. ಒಂದು ನಿದರ್ಶನವನ್ನು ನಿನಗೆ ಹೇಳುತ್ತೇನೆ, ಕೇಳು. ಹಿಂದಿನ ಕಾಲದಲ್ಲಿ, ಎಂದರೆ, ದ್ವಾಪರಯುಗದಲ್ಲಿ, ದಾಯಾದಿಗಳಾದ ಕೌರವರು ಪಾಂಡವರು ಯುದ್ಧದಲ್ಲಿ ತೊಡಗಿದಾಗ, ಅವರ ಬಲು ದೊಡ್ಡ ಸೈನ್ಯಗಳು ಪರಸ್ಪರ ಎದುರಾಗಿ ನಿಂತವು. ಆ ಮಹಾಭಾರತ ಯುದ್ಧದಲ್ಲಿ, ಭಗವಂತನು ದಿಗ್ಗಾವಂತರಾ ಧರ್ಮಿಷ್ಠರಾದ ಆ ಪಾಂಡವರಿಗೆ ಶ್ರೀಕೃಷ್ಣನಾಗಿಯಾಗಿ ಬೆಂಬಲ ಕೊಟ್ಟನು. ಹಗಲು ರಾತ್ರಿ ಎನ್ನದೆ, ಎಲ್ಲಕಾಲದಲ್ಲೂ ಅವರಿಗೆ ನಿರಾಯುಧನಾಗಿ ನಿಂತು, ಅವರನ್ನು ಕಾಪಾಡಿದನು. ಧರ್ಮಕ್ಕೆ ಜಯಗಳಿಸಿಕೊಟ್ಟನು. ಸನ್ಮಾರ್ಗದಲ್ಲಿ ನಡೆಯುತ್ತಾ ಭಗವಂತನನ್ನು ನಂಬಿರುವವರನ್ನು ಭಗವಂತನು ಎಂದಿಗೂ ಕೈಬಿಡನು. ಅವರನ್ನು ಎಲ್ಲಕಾಲದಲ್ಲೂ ರಕ್ಷಿಸುವನು. ಈ ವಿಷಯವನ್ನು ಪಾಂಡವರ ಕಥೆಯಿಂದ ಮನದಟ್ಟು ಮಾಡಿಕೊಂಡು, ನೀನೂ ಆ ಭಗವಂತನನ್ನು ಕಂಡುಕೊಳ್ಳಬಹುದು.

ಭಗವಂತನು ನಡೆಸಿದ ಒಂದೊಂದು ಕಾರ್ಯವೂ ಅವನನ್ನು ಅರಿತು ಕೊಳ್ಳಲು ಸಾಧನವಾಗುತ್ತದೆ.

20. காணப் புகிலறிவு கைக்கொண்ட நன்னெஞ்சம்,
நாணப் படுமன்றே! நாம் பேசில், – மாணி
யுருவாகிக் கொண்டுலகம் நீரேற்ற சீரான்,
திருவாகம் தீண்டிற்றுச் சென்று.

ಕಾಣಪ್ಪುಗಿಲಱಿವು ಕೈಕ್ಕೊಂಡ ನನ್ನೆಂಜಮ್,
ನಾಣಪ್ಪಡುಮ್ ಅನ್ಱೇ! ನಾಮ್ ಪೇಶಿಲ್ — ಮಾಣಿ
ಯುರುವಾಕ್ಕೊಂಡುಲಗಮ್ ನೀರೇಱ್ಱ ಶೀರಾನ್,
ತಿರುವಾಗಮ್ ತೀಂಡಿಱ್ಱು ಚ್ಚೆನ್ಱು.

ಕಾಣಪ್ಪುಗಿಲ್ காணப்புகில் = ನೋಡಲು ಪ್ರಯತ್ನಿಸುವುದಕ್ಕೆ, ಅಱಿವು ಕೈಕ್ಕೊಂಡ அறிவு கைக்கொண்ட = ತಿಳುವಳಿಕೆಯನ್ನು ಪಡೆದಿರುವ, ನಲ್ನೆಂಜಮ್ நல்நெஞ்சம் = ಒಳ್ಳೆಯ ಮನಸ್ಸು, ನಾಣಪ್ಪಡುಮ್ ಅನ್ಱೇ நாணப்படும் அன்றே = ನಾಚಿಕೆ ಪಡುವುದು ಅಲ್ಲವೇ? ನಾಮ್ ಪೇಶಿಲ್ நாம் பேசில் = ನಾವು ಹೇಳಹೊರಟರೆ, ಮಾಣಿ ಉರುವಾಗ மாணி உருவாகி = ಬ್ರಹ್ಮಚಾರಿಯ ರೂಪವಾಗಿ, ಕೊಂಡು கொண்டு = ಸ್ವೀಕರಿಸಿ (ಬಂದು, ಉಲಗಮ್ உலகம் = ಲೋಕಗಳನ್ನು, ನೀರ್ ಏಱ್ಱ நீர்ஏற்ற = ನೀರನ್ನು ಧಾರೆ ಎರೆಸಿಕೊಂಡ, ಶೀರಾನ್ சீரான் = ಮಹಿಮೆಯುಳ್ಳವನ, ತಿರುವಾಗಮ್ திரு ஆகம் = ಪವಿತ್ರವಾದ ದೇಹದಿಂದ, ತೀಂಡಿಱ್ಱು தீண்டிற்று = ಅಪವಿತ್ರಗೊಳಿಸಿದ್ದು, ಶೆನ್ಱು சென்று = ಹೋಗಿ.

ನಾವು ಹೇಳಹೊರಟರೆ, ಬ್ರಹ್ಮಚಾರಿಯ ರೂಪವನ್ನು ಸ್ವೀಕರಿಸಿ ಬಂದು, ಲೋಕಗಳನ್ನೆಲ್ಲಾ ಧಾರೆ ಎರೆಸಿಕೊಂಡ ಮಹಿಮೆಯುಳ್ಳವನು ಪವಿತ್ರವಾದ ದೇಹದಿಂದ ಅಪವಿತ್ರಗೊಳಿಸಿದ್ದನ್ನು ಹೋಗಿ ನೋಡಲು ಪ್ರಯತ್ನಿಸುವುದಕ್ಕೆ ತಿಳುವಳಿಕೆಯನ್ನು ಪಡೆದಿರುವ (ನಮ್ಮ) ಒಳ್ಳೆಯ ಮನಸ್ಸು ನಾಚಿಕೆ ಪಡುವುದು, (20)
ಅಲ್ಲವೇ?

ಹಿಂದಿನ ಪಾಶುರದಲ್ಲಿ, ಭಗವಂತನು ಧರ್ಮಕ್ಕೆ ಜಯ ತರುವವನೆಂದೂ, ಅಧರ್ಮಕ್ಕೆ ಸೋಲುಂಟು ಮಾಡುವವನೆಂದೂ, ಮಹಾಭಾರತ ಯುದ್ಧವನ್ನು ನಿದರ್ಶನವಾಗಿ ಹೇಳಲಾಯಿತು. ಈಗ ಸ್ವಾಮಿಯ ವಾಮನ-ತ್ರಿವಿಕ್ರಮಾವತಾರಗಳ ಮಹಿಮೆಯನ್ನು ಚಮತ್ಕಾರಪೂರ್ಣವಾಗಿ, ವ್ಯಂಗ್ಯವಾಗಿ ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ನಮ್ಮ ಮನಸ್ಸಿಗೆ ತಿಳುವಳಿಕೆ ಇದೆ. ಯಾರ, ಯಾರ ಕೆಲಸವನ್ನಾದರೂ ಅದು ಒರೆಹಚ್ಚಿ ನೋಡಬಲ್ಲದು. ಭಗವಂತನು ಅತಿಕುಳ್ಳ ಬ್ರಹ್ಮಚಾರಿಯಾಗಿ ರೂಪಗೊಂಡು ~~...~~ ಮಹಾದಾನಿ ಎನಿಸಿದ ಬಲಿಚಕ್ರವರ್ತಿಯ ಯಾಗಶಾಲೆಗೆ ಬಂದನು. ತನ್ನ ಹೆಜ್ಜೆಯಲ್ಲಿ ಮೂರು ಹೆಜ್ಜೆಗಳ ನೆಲವನ್ನು ದಾನವಾಗಿ ಯಾಚಿಸಿದನು. ಅವನಿಂದ ಪಡೆ ಕೊಂಡ ಕೂಡಲೇ ಸ್ವಾಮಿಯು ತ್ರಿವಿಕ್ರಮನಾಗಿ ಬೆಳೆದನು. ಈ ಭೂಮಂಡಲವೆಲ್ಲ ಅವನ ಒಂದು ಹೆಜ್ಜೆಗೆ ಸಾಕಾಯಿತು. ಮತ್ತೊಂದು ಹೆಜ್ಜೆಗೆ ಮೇಲಣ ಎಲ್ಲಾ ಲೋಕಗಳೂ ಬೇಕಾಯಿತು. ಇನ್ನು ಮೂರನೆಯ ಹೆಜ್ಜೆಯನ್ನೆಲ್ಲಿಡುವುದು? ಅದನ್ನು ಬಲಿಚಕ್ರವರ್ತಿಯ ತಲೆಯ ಮೇಲೆಯೇ ಇರಿಸಿದನು. ಹೀಗೆ ಎಲ್ಲವನ್ನೂ ಅವನು 'ಅಪವಿತ್ರ'ಗೊಳಿಸಿದನಲ್ಲವೇ? ಅಂಥ

Garani Srinivasan

ಅದ್ಭುತರಾಯಾದ ವಂಚಕನನ್ನು ನೋಡಬಯಸುವುದೇ? ಎಷ್ಟೇ ಅರಿವುಳ್ಳ ಜ್ಞಾನಿಯಾದ
ಜ್ಞಾನರೂ ಅದಕ್ಕೆ ಆ ಅದ್ಭುತನಿಗೆ ನಿಲುಕಲಿಕ್ಕಿದ್ದೇ? ಬಲ್ಲೆಯ ಮನಸ್ಸನ್ನು ನಾವು ಹೇಗೆ
ನಾಚಿಸಬಲ್ಲೆವೇ?

ಯಾವುದು ದೇಹವು – ಭಗವಂತನ ಶರೀರವಲ್ಲವೇ, ನಮ್ಮ ಶಿಲ್ಪಗಳೇನಾ? ಈ ವಿಷ-
ಯವನ್ನು ಈ ನಿದರ್ಶನದಿಂದ ತಿಳಿಯದೇ ಇರಲಾಗದು. ನಮ್ಮ ಶಿಲ್ಪಗಳಿಗೆ ಅಲ್ಲ. ಎಲ್ಲಾ ಬಗೆ-
ಯಲ್ಲೂ ಇದು ಅನ್ವಯಿಸಿಕೊಳ್ಳಬಹುದು. ಅದು ಅಷ್ಟು ಸಂಕುಚಿತ. ನಮ್ಮ ಅಲ್ಪಜ್ಞಾನದಿಂದ
ಭಗವಂತನ ಅವ್ಯಾಹತ ಕಾರ್ಯಗಳನ್ನೂ, ಅವುಗಳ ಹಿನ್ನೆಲೆಯನ್ನೂ, ವಿಶಾಲವಾದವನ್ನೂ
ಅರಿತುಕೊಳ್ಳುತ್ತೇವೆಂಬುದು ಸಾಧ್ಯವೇನು. ಅವನು ಯಾವ ಸಮಯದಲ್ಲಿ ಏನು
ಬೇಕೆಂದರೆ ಅದು ಆಗಬಲ್ಲನೆಂಬುದನ್ನೂ, ಹೇಗೆ ಬೇಕೆಂದರೆ ಹಾಗೆ ಮಾಡಬಲ್ಲನೆಂಬು-
ದನ್ನೂ ವಾಮನ - ತ್ರಿವಿಕ್ರಮ ಅವತಾರಗಳಿಂದ ನಾವು ತಿಳಿದರೆ ಸಾಲದೇ? ಅದ್ಭುತರಾಯಾದ
ಸ್ವಾಮಿಯನ್ನು ನೋಡುವುದೆಂದರೆ ಅಲ್ಪರಾದ ನಮ್ಮಿಂದ ಸಾಧ್ಯವೇ?

21. சென்றங்கு வெந்நரகில் சேராமல் [redacted] காப்பதற்கு, — அன்றங்குப்
இன்றிங்கென் நெஞ்சாலிடுக்குண்ட, — பாருருவும் பார்வளைத்த நீருருவும் கண்புதைய,
பாருருவும் பார்வளைத்த நீருருவும் கண்புதைய,
காருருவன் [redacted] தான் நிமிர்த்த கால்.

ಶೆನ್ರಂಗು ವೆನ್ನರಗಿಲ್ ಶೇರಾಮಲ್ ಕಾಪ್ಪದರ್ಕು,
ಇನ್ರಿಂಗೆನ್ ನೆಂಜಾಲಿಡುಕ್ಕುಣ್ಡ, — ಅನ್ರಂಗು
ಪಾರುರುವುಮ್ ಪಾರ್ವಳೈತ್ತ ನೀರುರುವುಮ್ ಕಣ್ಪುದೈಯ,
ಕಾರುರುವನ್ ತಾನ್ ನಿಮಿರ್ತ್ತ ಕಾಲ್.

ಶೆನ್ರು சென்று = (ನಾವು) ಹೋಗಿ, ಅಂಗು அங்கு = ಅಲ್ಲಿನ, ವೆಮ್ ನರಗಿಲ್ வெம் நரகில் = ಕ್ರೂರವಾದ ನರಕದಲ್ಲಿ, ಶೇರಾಮಲ್ சேராமல் = ಸೇರದಂತೆ, ಕಾಪ್ಪದರ್ಕು காப்பதற்கு = (ನಮ್ಮನ್ನು) ಕಾಪಾಡುವುದಕ್ಕೆ, ಇನ್ರು இன்று = ಈಗ, (ಇಂದು), ಇಂಗು இங்கு = ಇಲ್ಲಿ, ಎನ್ ನೆಂಜಾಲ್ என் நெஞ்சால் = ನನ್ನ ಮನಸ್ಸಿನಿಂದ, ಇಡುಕ್ಕುಣ್ಡ இடுக்குண்ட = ಅಡಗಿಸಿ ಇಟ್ಟುಕೊಳ್ಳಲಾಗಿದೆ, ಅನ್ರು அன்று = ಅಂದು (ಹಿಂದೆ ಒಂದು ಸಲ), ಅಂಗು அங்கு = ಅಲ್ಲಿ, ಪಾರ್ ಉರುವುಮ್ பார் உருவும் = ಭೂಮಿಯೆಂಬ ವಸ್ತುವನ್ನೂ, ಪಾರ್ ವಳೈತ್ತ பார் வளைத்த = ಭೂಮಿಯನ್ನು ಸುತ್ತಿಕೊಂಡಿರುವ, ನೀರ್ ಉರುವುಮ್ நீர் உருவும் = ನೀರೆಂಬ ವಸ್ತುವನ್ನೂ, ಕಣ್ಪುದೈಯ கண்புதைய = ಮುಚ್ಚುವಂತೆ, ಕಾರ್ ಉರುವನ್ கார் உருவன் = ಕಾರ್ಮುಗಿಲ ಬಣ್ಣದವನು, ತಾನ್ ನಿಮಿರ್ತ್ತ தான் நிமிர்த்த = ತಾನು ಚಾಚಿದ, ಕಾಲ್ கால் = ಪಾದಗಳು.

ಅಂದು (ಹಿಂದೆ ಒಂದು ಸಲ), ಅಲ್ಲಿ, ಭೂಮಿಯೆಂಬ ವಸ್ತುವನ್ನೂ, ಅದನ್ನು ಸುತ್ತಿಕೊಂ-

Garani Srinivasan

ಬೀಸುವ ಗಾಳಿ ಎಂಬ ವಸ್ತುವನ್ನು ಮುಖ್ಯವಂತೆ, ರಾಮನ ಗುಣಗಳ ಸ್ವಭಾವವನ್ನು ಹೊಂದಿದ ವಾದಗಳನ್ನು, ನಾವು ಹೋಗಿ ಅಲ್ಲಿನ ಕ್ರೂರ ನರಕದಲ್ಲಿ ಬೀಳದ ಹಾಗೆ ನಮ್ಮನ್ನು ಕಾಪಾಡುವುದಕ್ಕಾಗಿ, ಈಗ, ಇಲ್ಲಿ, ನನ್ನ ಮನಸ್ಸಿನಲ್ಲಿ ಅಡಗಿಸಿಟ್ಟುಕೊಳ್ಳಲಾಗಿದೆ. (21)

ಹಿಂದಿನ ಪಾಶುರದ ಮಹತ್ವವನ್ನು ಇಲ್ಲಿ ಮುಂದುವರಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ಹಿಂದೆ, ಬಲಿ ಚಕ್ರವರ್ತಿಯಲ್ಲಿ ಭಗವಂತನು ಮೂರು ಹೆಜ್ಜೆಗಳ ನೆಲವನ್ನು ದಾನವಾಗಿ ಪಡೆದುಕೊಂಡಾಗ, ಅವನ ಒಂದು ಹೆಜ್ಜೆಯು ಈ ಭೂಮಿಯನ್ನು ಅದನ್ನು ಸುತ್ತುವರಿದಿರುವ ನೀಲಿಯ ಆವರಣವನ್ನು ಮುಚ್ಚುವಷ್ಟು ವಿಸ್ತಾರಗೊಂಡಿತು. ಆ ತಿರುವಡಿಯನ್ನು ಆಶ್ರಯಿಸುವುದರಿಂದ, ~~ನಾವು~~ ನಮಗೆ ಬರಲಿರುವ ನರಕಾನುಭವವನ್ನು ನಾವು ತಪ್ಪಿಸಿಕೊಳ್ಳಬಹುದು. ಆ ತಿರುವಡಿಗಳ ಆಶ್ರಯ ನಮ್ಮನ್ನು ಕ್ರೂರ ನರಕದಿಂದ ತಪ್ಪಿಸಿ ರಕ್ಷಿಸುತ್ತದೆ. ಆ ಬಲದಾತ್ತ ತಿರುವಡಿಯನ್ನು ನಮ್ಮ ಮನದಲ್ಲಿ ಭದ್ರವಾಗಿ ಅಡಗಿಸಿ ನೆಲೆಗೊಳಿಸಿಕೊಳ್ಳೋಣ.

ಭಗವಂತನನ್ನು ನೋಡುವುದು, ಅವನ ಲೀಲಾ ವಿನೋದಗಳನ್ನು ತಿಳಿಯುವುದು ಅಲ್ಪರಾದ ನಮಗೆ ಸಾಧ್ಯವಿಲ್ಲದೆ ಹೋಗಬಹುದು. ಅವುಗಳಿಗೆ ಬದಲಾಗಿ ಅವನ ತಿರುವಡಿಗಳನ್ನು ಆಶ್ರಯಿಸುವುದು ಸುಲಭ. ಅದು ನಮ್ಮನ್ನು ನರಕಾನುಭವದಿಂದ ರಕ್ಷಿಸುತ್ತದೆ.

22. காலே பொழுதிரிந்து கத்துவராம் இனநாள்,
மாலார் குடிபுகுந்தாரென் மனத்தே,- மேலால்
தருக்குமிடம்பாட்டினொடும் வல்வினையார் தாம், வீற்
றிருக்குமிடம் காணாதிளைத்து.

ಕಾಲೇ ಪೊಳುದಿರಿನ್ದು ಕತ್ತುವರಾಮ ಇನನಾಳ್,
ಮಾಲಾರ್ ಕುಡಿಪುಹುನ್ದಾರೆನ್ ಮನತ್ತೇ,- ಮೇಲಾಲ್
ತರುಕ್ಕುಮಿಡಮ ಪಾಟ್ಟಿನೊಡುಮ ವಲ್ವಿನೈಯಾರ್ ತಾಮ, ವೀ
ಟ್ರಿರುಕ್ಕುಮಿಡಮ ಕಾಣಾದಿಳೈತ್ತು.

ಕಾಲೇ காலே = ಬೆಳಗಾಗನಿಂದಲೂ, ಪೊಳುದ பொழு = ಚೆನ್ನಾಗಿ, ತಿರಿನ್ದು திரிந்து = ಅಲೆದಾಡಿ, ಕತ್ತುವರಾಮ கத்துவராம் = ಗೋಳಾಡುವಂಥ, ಇನನಾಳ್ இனநாள் = ಈಗ, ಮಾಲಾರ್ மாலார் = (ನನ್ನ) ವ್ಯಾಮೋಹಕಾರಿಯು, ಕುಡಿಪುಹುನ್ದಾರ್ குடிபுகுந்தார் = ನೆಲೆಗೊಂಡರು, ಎನ್ ಮನತ್ತೇ என் மனத்தே = ನನ್ನ ಮನದಲ್ಲಿ, ಮೇಲಾಲ್ மேலால் = ಮುಂಚೆ ನಿಂದಲೂ, ತರುಕ್ಕುಮ தருக்கும் = (ನನ್ನನ್ನು) ದುಃಖಗೊಳಿಸುವ, ಇಡಮ இடம் =

ಕಾರಣಾದಿಂದಲೂ, ಪೊಟ್ಟಿನೆಂದುಮ ಪಾಟ್ಟಿ ರುನ್ದುಮ್ = ಹರ್ಷದಿಂದ ಕೂಡಿ, ವಲ್ವಿನೈ
ಯಾರ್ ತಾಮುಮ್ ವಲ್ வினையார் தாம் = ಕ್ರೂರ (ಬಲಿಷ್ಠ) ಪಾಪಕರ್ಮಗಳು, ವೀಱ್ಱಿರು
ಕ್ಕುಮ್ வீற்றிருக்கும் = ನೆಲಸುವುದಕ್ಕೆ, ಇಡಮುಮ್ இடம் = (ತಕ್ಕ) ಸ್ಥಳವನ್ನು, ಕಾ
ಣಾದು காணாது = ಕಾಣದೆ, ಇಳೈತ್ತು இளைத்து = ~~[illegible]~~ (ದುಃಖಿಸುತ್ತಾ)
ಕೃಶವಾಗಿ (ಹೋದವು)

ಹುಟ್ಟಿನಿಂದಲೂ ಚೆನ್ನಾಗಿ ಅಲೆದಾಡಿ ಗೋಳಾಡಿಸುವಂಥ ನನ್ನ ಮನದಲ್ಲಿ ಈಗ (ನನ್ನ) ವ್ಯಾಮೋಹದ ಕಾರಣ ನೆಲೆಗೊಂಡಿದ್ದಾನೆ. ಮುಂಚಿನಿಂದಲೂ (ನನ್ನನ್ನು) ದುಃಖಗೊ (ತಮಗೆ) ಳಿಸುವ ಕಾರಣದಿಂದ ಹರ್ಷದಿಂದ ಕೂಡಿ ಬಲಿಷ್ಠವಾದ ಕ್ರೂರ ಪಾಪಕರ್ಮಗಳು ನೆಲಸು
ವುದಕ್ಕೆ ತಕ್ಕ ಸ್ಥಳವನ್ನು ಕಾಣದೆ ಕೃಶವಾಗಿ ಹೋದವು. (22)

ಹಿಂದಿನ ಪಾಶುರದಲ್ಲಿ ಆಳ್ವಾರರು ತಮ್ಮ ನೆಚ್ಚಿನ ಮನಸ್ಸಿಗೆ ಭಗವಂತನ ತಿರುವಡಿಗಳನ್ನು ತಾನು ಭದ್ರವಾಗಿ ನೆಲೆಗೊಳಿಸಿಕೊಳ್ಳಬೇಕೆಂದು ಹಿತವಚನ ನುಡಿದರು. ಇಲ್ಲಿ, ಭಗವಂತನೇ ಸ್ವತಃ ಬಂದು ತಮ್ಮ ಮನದಲ್ಲಿ ನೆಲೆಗೊಂಡಿರುವುದರಿಂದ, ತಮಗೆ ಯಾವ ಫಲ ದೊರೆತಿದೆಯೆಂದು ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ನನ್ನ ಹುಟ್ಟಿನಿಂದಲೂ ನನ್ನ ಮನಸ್ಸು ಅಲೆದಾಟದ ಚಪಲಸ್ವಭಾವವನ್ನು ಪಡೆದಿತ್ತು. ಈ ತನ್ನ ಅಲೆದಾಟದಿಂದ ನನ್ನನ್ನು ತುಂಬ ಕಷ್ಟ ಸಂಕಟಗಳಿಗೆ ಎಡೆಮಾಡಿಕೊಟ್ಟಿತ್ತು. ಅಲ್ಲದೆ, ಅದರ ಪರಿಣಾಮವಾದ ಪಾಪಕರ್ಮಗಳು, (ಹರ್ಷದಿಂದ) ಅಟ್ಟಿಸಿಕೊಂಡು, ನನ್ನನ್ನು ಕ್ರೂರವಾಗಿ ಬಾಧಿಸತೊಡಗಿದ್ದುವು. ನನ್ನನ್ನ ಸಂಕಟಕ್ಕೆ ಗುರಿಮಾಡುವುದೆಂದರೆ ಅವಕ್ಕೆ ತುಂಬ ಇಷ್ಟ. ಈಗ, ನನ್ನ ಮನದಲ್ಲಿ ಭಗವಂತನೇ ಬಂದು ನೆಲಸಿದ್ದಾನೆ. ಆದ್ದರಿಂದ, ನನ್ನ ಮನಸ್ಸು ನಿಶ್ಚಲಗೊಂಡಿದೆ. ಅದರ ಅಲೆದಾಟ ನಿಂತುಹೋಯಿತು. ಪಾಪಕರ್ಮಗಳಿಗಾದರೋ ನೆಲೆಯು ಅಲ್ಲಿ ಅವಕಾಶವೇ ಇಲ್ಲದಂತಾಗಿರುವುದರಿಂದ, ಅವು ಕೃಶಗೊಂಡಿವೆ.

ಇಂದ್ರಿಯಗಳಿಗೆ ವಶವಾದ ಮನಸ್ಸು ವಿಷಯಸುಖವನ್ನು ಅರಸುತ್ತಾ ಅಲೆದಾಡುವುದು ಅದರ ಸ್ವಭಾವವಾಗುತ್ತದೆ. ತತ್ಪರಿಣಾಮವಾಗಿ ಪಾಪ ಮಾಡುತ್ತಾ ಹೋಗುತ್ತದೆ. ಭಗವದಾಶ್ರಯವು ಭಗವಚ್ಚಿಂತನೆಯು ಮನಸ್ಸಿನ ಕಾರ್ಯವಾಗಿ ಪರಿಣಮಿಸಿದಾಗ, ಅದರ ಕೀಳ ಮಟ್ಟದ ಅಲೆದಾಟ ನಿಂತುಹೋಗುತ್ತದೆ. ಆಗ ಅದಕ್ಕೆ ಪಾಪದ ವಾಸನೆಯೂ ತಗಲುವುದಿಲ್ಲ. ಎಲ್ಲಕ್ಕೂ ಭಗವಂತನ ತಿರುವಡಿಗಳ ಆಶ್ರಯವೇ ಮೂಲ.

23. இளைப்பா யிளையாப்பாய் நெஞ்சமே! சொன்னேன்,
இளைக்க நமன்தமர்கள் பற்றி – இளைப்பெய்த,
நாய்தந்து மோதாமல் நல்குவான் நல்காப்பான்,
தாய்தந்தை எவ்வுயிர்க்கும் தான்.

ಇಳೈಪ್ಪಾ ಯುಳೈಯಾಪ್ಪಾಯ್ ನೆಂಜಮೇ! ಕೊಣ್ಡೇನ್,
ಇಳೈಕ್ಕ ನಮನ್ ತಮರ್‌ಗಳ್ ಪತ್ತಿ – ಇಳೈಪ್ಪೆಯ್ದ,
ನಾಯ್‌ತನ್ದ ಮೋಂದಾಮಲ್ ನಲ್ಕುವಾನ್ ನಲ್‌ಕಾಪ್ಪಾನ್,
ಕಾಯ್‌ತನ್ದವೆ ಎವ್ವುಯಿರ್‌ಕ್ಕುಮಾ ಕಾನ್.

ಇಳೈಪ್ಪಾಯ್ இளைப்பாய் = ವೃದ್ಧಿಪಡುವೆಯೋ, ಇಳೈಯಾಪ್ಪಾಯ್ இளையாப்பா ய் = ವೃದ್ಧಿಪಡದಿರುವೆಯೋ, ನೆಂಜಮೇ நெஞ்சமே = ಮನಸ್ಸೇ, ಕೊಣ್ಡೇನ್ கொண்டேன் = ಹೇಳುತ್ತೇನೆ, ಇಳೈಕ್ಕ இளைக்க = ಕಷ್ಟಪಡಿಸುವುದಕ್ಕೆ, ನಮನ್ ತಮರ್ ಗಳ್ நமன் தமர்கள் = ಯಮಭಟರು, ಪತ್ತಿ பற்றி = ಹಿಡಿದುಕೊಂಡು, ಇಳೈಪ್ಪೆಯ್ದ இளைப்பு எய்த = ವೃದ್ಧಿಯನ್ನುಂಟುಮಾಡಲು, (ಗೋಳುಹುಯ್ದುಕೊಳ್ಳಲು) ನಾಯ್ ತನ್ದ நாய் தந்து = ನಾಯಿಗಳನ್ನು ಛೂ ಬಿಟ್ಟು, ಮೋಂದಾಮಲ್ மோதா மல் = ನಲುಗದಂತೆ, ನಲ್ಕುವಾನ್ நல்குவான் = ಕೃಪೆದೋರುವನು, ನಲ್ ಕಾಪ್ಪಾನ್ நல் காப்பான் = ಕೃಪೆದೋರದೆ ಉಪೇಕ್ಷಿಸದಾ, ಕಾಯ್ ತನ್ದವೆ காய் தந்தை = ಕಾಯುವಯಾ ತಂದೆಯೂ ಆಗ, ಎವ್ವುಯಿರ್‌ಕ್ಕುಮಾ எவ்வுயிர்க்கு ம் = ಎಲ್ಲಾ ಜೀವಿಗಳಿಗಾ, ಕಾನ್ கான் = ಅವನು.

ಮನಸ್ಸೇ, ವೃದ್ಧಿಪಡುವೆಯೋ, ವೃದ್ಧಿಪಡದಿರುವೆಯೋ, ಹೇಳುತ್ತೇನೆ. (ನಿನ್ನನ್ನು) ಗೋಳು ಕಷ್ಟಕೊಡುವುದಕ್ಕೆ ಯಮಭಟರು ಹಿಡಿದುಕೊಂಡು. (ನಿನ್ನನ್ನು) ನಲುಗದಂತೆ (ಅವನು) ಹುಯ್ದುಕೊಳ್ಳಲು ನಾಯಿಗಳನ್ನು ಛೂ ಬಿಟ್ಟು (ನಿನ್ನನ್ನು) ಕೃಪೆದೋರದಾ, ಕೃಪೆದೋರದೆ ಉಪೇಕ್ಷಿಸದಾ, ಅವನು ಎಲ್ಲಾ ಜೀವಿಗಳಿಗಾ ಕಾಯುವಯಾ ತಂದೆಯೂ ಆಗಿದ್ದಾನೆ. (23)

ಹಿಂದಿನ ಪಾಶುರದ ವಿಷಯವನ್ನು ಇಲ್ಲಿ ಮುಂದುವರಿಸಲಾಗಿದೆ.

ಇಂದ್ರಿಯಗಳು ದೊರಕಿಸಿಕೊಡುವ ವಿಷಯಗಳಲ್ಲಿ ಆಸಕ್ತಿ ವಹಿಸಿ, ಸಂತೋಷಿಸಾ ಕೆಲಕಾಲ ಬದುಕಿಯು ವೃದ್ಧಿಗೆ ಅವಕಾಶವಿಲ್ಲದೆ ಹೋದರೆ, ಅದು ಮನಸ್ಸಿಗೆ ವೃದ್ಧಿ. ಆ ಬಳಿಯು ಕಾಲಕಳೆಯುವುದಕ್ಕೆ ಅವಕಾಶವಿಲ್ಲದೆ ಹೋದರೆ, ಅದು ಮನಸ್ಸಿಗೆ ವೃದ್ಧಿ. ಭಗವತ್ಸಂಕಲ್ಪದ ಕಡೆಗೆ ತಿರುಗಿಸಿ, ಅಲ್ಲಿಯೂ ವಿಷಯಾಸಕ್ತಿಗೆ ಎಡೆಕೊಡದಂತೆ. ಅದನ್ನು ಭಗವತ್ಸಂಕಲ್ಪದ ಕಡೆಗೆ ತಿರುಗಿಸಿ, ಅಲ್ಲಿಯೂ ಎಡೆಬಿಡದೆ ಆನಂದಪಡುವುದು. ಮನ ಅದನ್ನು ನೆಲೆಗೊಳಿಸುವುದು, ಅದರಲ್ಲಿಯೂ ಎಡೆಬಿಡದೆ ಆನಂದಪಡುವುದು, ಮನಸ್ಸನ್ನು ವೃದ್ಧಿಪಡದಿರುವ ಕೆಲಸ. ವಿಷಯಾಸಕ್ತಿಯಲ್ಲಿಯೂ ಆಶೆಯುಂಟ ಮನಸ್ಸನ್ನು ಹೀಗೆ ಕೆಡಿಸಿದರೆ, ಕಡೆಗೆ ಯಮಭಟರ ಮತ್ತು ಅವರ ಕ್ರೂರವಾದ ನಾಯಿಗಳ ವಶವಾಗಲೇಬೇಕು ಹೊಂದಿಸಿದರೆ, ಕಡೆಗೆ ಯಮಭಟರ ಮತ್ತು ಅವರ ಕ್ರೂರವಾದ ನಾಯಿಗಳ ಬಾಧೆಯನ್ನು ಅನುಭವಿಸಲೇಬೇಕು. ಅವರು ಕೊಡುವ ಕಷ್ಟವನ್ನು, ಅವುಗಳ ಬಾಧೆಯನ್ನು ಅನುಭವಿಸಲೇಬೇಕು. ಇಂತಹ ದುಃಸ್ಥಿತಿಯಿಂದ ತಪ್ಪಿಸಿಕೊಳ್ಳಬೇಕೆಂದರೆ ಭಗವದಾಶ್ರಯಾವೊಂದೇ ಮದ್ದು.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನಾನು ಕೊಡುವ ಉಪದೇಶದಿಂದ ನಿನಗೆ ವೃದ್ಧಿಯಾಗುವುದೋ, ಇಲ್ಲ ಒಳಗಾಗುವುದೋ, ನೀನೇ ಯೋಚಿಸಿ ನೋಡು. ನಾನಂತೂ ಎಲ್ಲವನ್ನೂ ಬಿಡಿಸಿ ಹೇಳುತ್ತೇನೆ, ಕೇಳು. ಯಮಭಟರು ಬಂದು, ತಮ್ಮ

ನಾಯಕರನ್ನು ಕೂಡ ಬಿಟ್ಟು, ನಿನ್ನನ್ನು ಹಿಡಿದು ಕೊಂಡು ಹೋಗಲು ಸಹಾಯ ಮಾಡುವುದನ್ನು ತಪ್ಪಿಸುವುದಕ್ಕೆ ಭಗವಂತನನ್ನು ಒಮ್ಮನದಿಂದ ಆಶ್ರಯಿಸುವುದೇ ತಕ್ಕ ಮಾರ್ಗ. ಅವನು ನಿನ್ನ ಮೇಲೆ ಕೃಪೆ ತೋರುವನೋ, ಅಥವಾ ನಿನ್ನನ್ನು ಉಪೇಕ್ಷಿಸುವನೋ ಎಂದು ಶಂಕೆಗೆ ಅವಕಾಶ ಕೊಡಬೇಡ. ಹಿಂದು ಮುಂದು ನೋಡಬೇಡ. ಅವನೇ ಎಲ್ಲಾ ಜೀವಿಗಳಿಗೂ ತಾಯಿಯೂ, ತಂದೆಯೂ ಆಗಿರುವವನು. ವಾತ್ಸಲ್ಯದಿಂದ ನಿನ್ನನ್ನು ತನ್ನ ಬಳಿಗೆ ಬರಮಾಡಿಕೊಂಡರಾಗಲಿ. ನೀನು ಮಾಡಿದ ತಪ್ಪಿಗೆ ನೀನು ಶಿಕ್ಷೆ ಅನುಭವಿಸುವಂತಾಗಲಿ, ಅದರಿಂದ ನಿನಗೆ ಬುದ್ಧಿ ಬರಲಿ, ಎಂದು ಬಗೆದು ನಿನ್ನನ್ನು ಉಪೇಕ್ಷಿಸಿದರೂ ಸರಿ. ನೀನು ಮಗುವಿಗೆ, ಮಕ್ಕಳು ತಂದೆ ತಾಯಿಯರನ್ನು, ಅವರೇನೇ ಮಾಡಲಿ, ಬಿಡದೆ ಅಂಟಿಕೊಂಡಿರುವ ಹಾಗೆ, ಅವನನ್ನು ದೃಢವಾಗಿ ಅಂಟಿ, ಅವನನ್ನು ಎಡೆಬಿಡದಂತೆ ಸೇವಿಸು.

24. தானே தனித்தோன்றல் தன்னளப்பொன்றில்லாதான்,
தானே பிறர்கட்கும் தற்றோன்றல், — தானே
இளக்கில் பார்கீழ்மேலா மீண்டமைப்பானானால்,
அளக்கிற்பார் பாரின்மேலார்?

ತಾನೇ ತನಿತ್ತೋನ್ರಲ್ ತನ್ನಳಪ್ಪೊನ್ರಿಲ್ಲಾದಾನ್,
ತಾನೇ ಪಿರರ್ಗಟ್ಕುಮ್ ತರ್ರೋನ್ರಲ್, — ತಾನೇ
ಇಳಕ್ಕಿಲ್ ಪಾರ್ ಕೀೞ್ ಮೇಲಾ ಮೀಣ್ಡಮೈಪ್ಪಾನಾನಾಲ್,
ಅಳಕ್ಕಿರ್ಪಾರ್ ಪಾರಿನ್ ಮೇಲಾರ್?

ತಾನೇ தானே = ಅವನೇ (ಆ ಸರ್ವೇಶ್ವರನೇ), ತನಿ தனி = ಸರ್ವಶ್ರೇಷ್ಠನಾದ, ತೋನ್ರಲ್ தோன்றல் = ಸ್ವಾಮಿ, ತನ್ தன் = ತನ್ನ, ಅಳಪ್ಪು அளப்பு = ಅಳತೆಗೆ, ಒನ್ರು ஒன்று = ಬೇರೊಂದು, ಇಲ್ಲಾದಾನ್ இல்லாதான் = ಇಲ್ಲದವನು, ತಾನೇ தானே = ಅವನೇ, ಪಿರರ್ಗಟ್ಕುಮ್ பிறர்கட்கும் = ಎಲ್ಲ ವಸ್ತುಗಳಿಗೂ, ತನ್ ತೋನ್ರಲ್ தன் தோன்றல் = ತನ್ನ ರೂಪವನ್ನು ಕೊಟ್ಟಿರುವವನು, ತಾನೇ தானே = ತಾನೇ, ಇಳಕ್ಕಿಲ್ இளக்கில் = ಅಲುಗಿಸಿದರೆ, ಪಾರ್ பார் = ಲೋಕಗಳು, ಕೀೞ್ ಮೇಲ್ಆಮ್ கீழ் மேல் ஆம் = ಕೆಳಗು ಮೇಲಾಗುತ್ತವೆ, ಮೀಣ್ಡು மீண்டு = ಮತ್ತೆ, ಅಮೈಪ್ಪಾನ್ ಆನಾಲ್ அமைப்பான் ஆனால் = ಸ್ಥಿತಿಗೆ ತರಬೇಕಾದರೆ (ನಿಯಮ ವ್ಯವಸ್ಥೆ ಮಾಡಬೇಕಾದರೆ), ಅಳಕ್ಕಿರ್ಪಾರ್ அளக்கிற்பார் = ವ್ಯವಸ್ಥೆ ಮಾಡುವವರು, ಪಾರಿನ್ ಮೇಲ್ பாரின் மேல் = ಲೋಕದಲ್ಲಿ, ಆರ್ ஆர் = ಯಾರಿದ್ದಾರೆ?

ಆ ಸರ್ವೇಶ್ವರನೇ ಸರ್ವಶ್ರೇಷ್ಠನಾದ ಸ್ವಾಮಿ. ಅವನಿಗೆ ಬೇರೆ ಯಾರೂ

ಗಾಟಿಯಿಲ್ಲದವನು. ಅವನೇ ಎಲ್ಲಾ ವಸ್ತುಗಳಿಗಾ ತನ್ನ ರೂಪವನ್ನು ಕೊಟ್ಟಿರುವವನು, ಅಂಥ ಅವನೇ ಅಲಕ್ಷಿಸಿದರೆ ಲೋಕಗಳು (ಭೂಮಿಯು) ಕಲಕಲೆಗಾಗುವುವು. ಮತ್ತೆ ಅದನ್ನು ನಿಲಯಾದ ರೀತಿಯಲ್ಲಿಯ ವ್ಯವಸ್ಥೆ ಮಾಡುವವರು ಯಾರಿದ್ದಾರೆ? (24)

ಹಿಂದಿನ ಪಾಶುರದಲ್ಲಿ, 'ಭಗವಂತನೇ ಎಲ್ಲ ವಸ್ತುಗಳಿಗಾ ತಂದೆ, ತಾಯಿ. ಅವನು ತಪ್ಪದೆ ರಕ್ಷಿಸುತ್ತಾನೆ. ಅವನು ರಕ್ಷಿಸುವವನೋ ಅಲಕ್ಷಿಸುವವನೋ ಎಂದು ನೀನು ಶಂಕಿಸುವ ಗೋಜಿಗೆ ಹೋಗಬೇಡ,' ಎಂದು ಹೇಳಲಾಗಿತ್ತು. ಈ ಪಾಶುರದಲ್ಲಿ ಆ ವಿಷಯವನ್ನೇ ದೃಢಪಡಿಸುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಭಗವಂತನೊಬ್ಬನೇ ಸರ್ವಶ್ರೇಷ್ಠ, ಸರ್ವೇಶ್ವರ. ಬೇರೆ ಯಾರೂ ಯಾವ ವಿಷಯದಲ್ಲೂ ಅವನಿಗೆ ಸರಿಸಾಟಿಯಿಲ್ಲ. ಅವನೇ ಎಲ್ಲಾ ವಸ್ತುಗಳಲ್ಲೂ ವ್ಯಾಪಿಸಿ, ಅವಕ್ಕೆ ರೂಪವನ್ನು ಕೊಟ್ಟಿರುವವನು. ಅಂಥ ಮಹಿಮೆಯವನು, ತಾನು ಸೃಷ್ಟಿಸಿದ್ದನ್ನೇ ಅಲಕ್ಷಿಸಿದರೆ, ಆಗ ಲೋಕಗಳ ಗತಿಯೇನು? ಎಲ್ಲವೂ ಅಸ್ತವ್ಯಸ್ತವಾಗುತ್ತವೆ. ಆಗ, ಅವುಗಳನ್ನು ಮತ್ತೆ ವ್ಯವಸ್ಥಿತವಾಗಿ ಮಾಡುವುದಕ್ಕೆ ಬೇರೆ ಯಾರೂ ಇಲ್ಲ, ಎಂದರೆ!

ಆದ್ದರಿಂದ, ತಾನು ಸೃಷ್ಟಿಸಿದ ತನ್ನ ಮಕ್ಕಳ ಬಗ್ಗೆ ಭಗವಂತನಿಗೆ ವಾತ್ಸಲ್ಯ ಇರದೇ? ಅವುಗಳನ್ನು ಎಂದಾದರೂ ಅಲಕ್ಷಿಸಿಯಾನೇ?

25: ஆரானு மாதானும் செய்ய, அகலிடத்தை
ஆராய்ந்து திருத்தலாவதே? — சீரார்
மனத்தலை வன் துன்பத்தை மாற்றினேன், வானோ
ரினத்தலைவன் கண்ணனால் யான்

ಆರಾನು ಮಾದಾನುಮ ಶೆಯ್ಯ, ಅಹಲಿಡತ್ತೈ
ಆರಾಯ್ನ್ದದು ತಿರುತ್ತಲಾವದೇ? — ಶೀರಾರ್
ಮನತ್ತಲೈ ವನ್ ತುನ್ಬತ್ತೈ ಮಾಟ್ರಿನೇನ್, ವಾನೋ
ರಿನತ್ತಲೈವನ್ ಕಣ್ಣನಾಲ್ ಯಾನ್.

ಆರಾನುಮ್ ஆரானும் = ಯಾರಾದರೂ, ಆದಾನುಮ್ ஆதானும் = ಏನನ್ನಾದರೂ, ಶೆಯ್ಯ செய்ய = ಮಾಡಲು, ಅಹಲ್ அகல் = ವಿಸ್ತಾರವಾದ, ಇಡತ್ತೈ இடத்தை = ಭೂಮಿಯನ್ನು (ಲೋಕವನ್ನು, ಜೀವಿಗಳನ್ನು), ಆರಾಯ್ನ್ದು ஆராய்ந்து = ಯೋಚಿಸಿಕೊಂಡು, ತಿರುತ್ತಲ್ திருத்தல் = ತಿದ್ದುವುದು, ಆವದೇ ஆவதே = ಆಗುವುದೇ, ಶೀರ್ ಆರ್ சீர் ஆர் = ಸಮೃದ್ಧಿ ತುಂಬಿರುವ, ಮನತ್ತಲೈ மனத்தலை = ಮನಸ್ಸಿನ, ವನ್ ತುನ್ಬತ್ತೈ வன் துன்பத்தை =

ಬಲಿಷ್ಠವಾದ ಸಂಕಟಗಳನ್ನು (ದುಃಖಗಳನ್ನು), ಮಾತ್ರಿನ್ ಮಾಱ್ಱಿನಾಣ್ =
ನೀಗಿಸಿಕೊಂಡೆನು, ವಾನೋರ್ ಬಾಗೋರ್ = ನಿತ್ಯಸೂರಿಗಳ, ಇನಮ್ ...
= ಸಮೂಹಕ್ಕೆ, ಕಲ್ಪವನ ಕ್ಕೋಯಿಲ್ = ಒಡೆಯನಾದ, ಕಣ್ಣನಾಲ್ ಕಣ್
ಣಾರುಳ್ = ಅನುಗ್ರಹದಿಂದ (ಅವನಕೃಪೆಯಿಂದ), ಯಾನ್ ಯಾಣ್ = ನಾನು.

ಯಾರೂ ಪಿಸಾರಿಲ್ಲ ಮಾತಲ್ಲ. ಬಲಿಷ್ಠವಾದ ಈ ಭೂಮಂಡಲವನ್ನು
ಯೋಚಿಸಿ (ಕೊಂಡಿಸಿ, ಪಾಲಿಸಿ) ಕಿದ್ದವ್ಯನಿಗೆ ಆಸುವುದೇ? ನಾನು ನನ್ನ
ಸಮಸ್ತವನ್ನೂ ಕೊಂಡುಬರುವ ಮನಸ್ಸಿನಿಂದ, ನಿತ್ಯಸೂರಿಗಳ ಒಡೆಯನಾದ ಆತನ
ಅನುಗ್ರಹದಿಂದ, ನನ್ನ ಬಲಿಷ್ಠವಾದ ಸಂಕಟಗಳನ್ನು (ದುಃಖಗಳನ್ನು) (25)
ನೀಗಿಕೊಂಡೆನು.

ಭಗವಂತನ ವಿಷಯದಲ್ಲಿ ದೃಢವಾದ ನಂಬಿಕೆಯನ್ನಿಡಬೇಕು. ಅವನ
ಕಡೆ ಕಾಯವಾಗಿ ನಮ್ಮನ್ನು ಕಷ್ಟದಿಂದ ಪಾರುಮಾಡುವ ವಿಶ್ವಾಸವನ್ನು ಮನ
ದಲ್ಲಿ ತುಂಬಿಕೊಳ್ಳಬೇಕು. ಅವನಿಗೆ ಶರಣಾಗಿ ಸತತ ಮನಸ್ಸಿನ
ಆರಾಧನೆ ಮಾಡಬೇಕು. ಹೀಗೆ ನಡೆದುಕೊಂಡರೆ ನಮ್ಮೆಲ್ಲ ದುಃಖಗಳು
ಸಂಕಟಗಳು ಕಳೆದುಹೋಗುತ್ತವೆ.

ಆಳ್ವಾರರು ಹೇಳುತ್ತಾರೆ: ಇತರರು ನಡೆದಂತೆ ನಾವು ನಡೆಯ
ಬೇಕೆಂಬ ಮಾತೇನೂ ಇಲ್ಲ. ಇತರರನ್ನು ಆದರ್ಶವಾಗಿ ಇಟ್ಟು
ಕೊಳ್ಳಬೇಕು? ಭಗವಂತನು ಸೃಷ್ಟಿಸಿದ ಈ ಭೂಮಂಡಲ ಬಲು ವಿಶಾ
ಲವಾದದ್ದು. ಅದನ್ನೆಲ್ಲ ಹುಡುಕಿ, ಶೋಧಿಸಿ, ಪಾಲಿಸಿ, ಯಾರಾದರು ಉತ್ತಮ
ರಾದವರು. ಅವರ ಮಾರ್ಗವನ್ನು ಹುಡುಕಿಕೊಳ್ಳುವುದು ಸಾಧ್ಯವಾದೀತೇ? ಆದ್ದರಿಂದ,
ನಾನು ಇತರರ ಹಿಂದೆ ಹೋಗುವುದಿಲ್ಲ. ಯಾರು ಯಾವ ಮಾರ್ಗವನ್ನು
ಹಿಡಿದರೂ ಆಗಲಿ. ನಾನು ಮಾತ್ರ ನಿತ್ಯಸೂರಿಗಳ ಒಡೆಯನ
ಅನುಗ್ರಹದ ಆ ದಿವ್ಯಕೃಪೆಯನ್ನು ಆಶ್ರಯಿಸಿದ್ದೇನೆ. ನನ್ನೆಲ್ಲ
ದುಃಖಗಳು ಸಂಕಟಗಳು ಕಳೆದುಹೋದವು. ನನಗೆ ಸುಖ ಸಿಕ್ಕಿತು.

26. யானுமென்னெஞ்சுமிசைந்தொழிந்தோம், வல்வினையைக்
கானும் மலையும் புகக் கடிவான் தானோர்
இருளன்ன மாமேனி யெம்மிறையார் தந்த,
அருளென்னும் தண்டாலடித்து.

ಶಬ್ದಾರ್ಥ: ಯಾನುಮ್ = ನಾನು, ಎನ್ ನಾಣ್ = ನನ್ನ, ನೆಂಜುಮ್ ...
... = ಮನಸ್ಸೂ, ಇಶೈಂದು = ಒಪ್ಪಿಕೊಂಡು, (ಒಮ್ಮತದಿಂದ),

ಒಲಿತ್ತೋಮ ತಿರುಕ್ಕೋಲಂ = ನಾಟಕದವೇಷವು, ವಲವನ್ನುವು ವಲ್ಲಾಳಿ ಕಾಯ = ಶ್ರೇಷ್ಠವಾದ ಪಾಪಕರ್ಮಗಳನ್ನು, ಕೆನುವ ಕಾರ್ಲಿಲಂ = ಕಾರ್ಯ ಮಲ್ಲಯುಮ ಮಲೆಯುಂ = ಬೆಟ್ಟಗಳು, ಪುಹ್ಹ = ಹೊಗುವಂತೆ, ಕಟಾನ್ ಕಡು ಕಾಣ್ = ಓಡಿಸುವುದಕ್ಕಾಗಿ, ತಾನ್ ಒರ್ ಇರುಳ್ ಅನ್ನ ತಾಣ್ ತಾರ್ ತಿರುಂ ಅನ್ನ = ತಾನೇ ಬಂದು ಕತ್ತಲೆಯಾಗಿ ಎಂಬಂತೆ, ಮಾ ಪೆಟ್ಟ ಪಾರಮೇಣಿ = ಮಹತ್ತಾದ ದೇಹ(ಕಾಯ)ವನ್ನುಳ್ಳ, ಎಮ್ ನಾಮ = ನಮ್ಮ, ಇಲ್ಲೈಯಾರ್ ತಿರೈಯಾರ್ = ಒಡೆಯನು (ಸ್ವಾಮಿಯು), ಕನ್ನ ತಿರುಕ್ಕ = ಕೇಳ್ದ, ಅರುಳ್ ಎನ್ನುಮ ಅರುಳ್ ಗಣ್ಣಾಲಂ = ಕೃಪೆಯೆಂಬ ಕಂಡಾಲ್ ತಣ್ಣ ಟಾಲ್ = ದಂಡದಿಂದ, ಅಡಿತ್ತು ಅಡಿತ್ತು = ಹೊಡೆದು.

~~ನಾನೂ ನನ್ನ ಮನಸ್ಸು ಬಳಲಿ ಬಿದ್ದವು. ಶ್ರೇಷ್ಠವಾದ ಕರ್ಮಗಳನ್ನು ಕಾಡುಗಳನ್ನು ಬೆಟ್ಟಗಳನ್ನು ನುಗ್ಗುವಂತೆ ಓಡಿಸುವುದಕ್ಕಾಗಿ~~

ತಾನೇ ಬಂದು ಕತ್ತಲೆಯಾಗಿ ಎಂಬಂತೆ ಮಹತ್ತಾದ ಕಾಯವನ್ನುಳ್ಳ ನನ್ನ ಸ್ವಾಮಿಯು ಕಂಡು ಕೇಳ್ದ ಕೃಪೆಯೆಂಬ ದಂಡದಿಂದ ಶ್ರೇಷ್ಠವಾದ ಕರ್ಮಗಳನ್ನು ಕಾಡುಗಳನ್ನು ಬೆಟ್ಟಗಳನ್ನು ನುಗ್ಗುವಂತೆ ಹೊಡೆದು ಓಡಿಸುವುದಕ್ಕಾಗಿ, ನಾನೂ ನನ್ನ ಮನಸ್ಸು ಬಳಲಿ ಬಿದ್ದವು.

"ನಾನೂ ನನ್ನ ಮನಸ್ಸು ಭಗವಂತನನ್ನು ಆಶ್ರಯಿಸದಿರುವ ನಮ್ಮೆಲ್ಲ ದುಃಖಗಳು ದಂಡನೆಗಳು ಕೇಳಲಾಗದವು" ಎಂದು ಹಿಂದಿನ ಪಾಶುರದಲ್ಲಿ ಒಟ್ಟಾರೆ ಹೇಳಿದರು. ಅವು ಕೇಳಲಾಗದವಾಗಿ ನಾಶವಾದುವು, ಅವು ಎಲ್ಲಿ ಹೋದವು ಎಂಬುದನ್ನು ಇಲ್ಲಿ ವಿವರಿಸುತ್ತಾರೆ

ಆಳ್ವಾರರು ಹೇಳುತ್ತಾರೆ! ನನ್ನ ಸ್ವಾಮಿಯಾದ ಕತ್ತಲೆಯಂತೆ ಭಗವಂತನು ಮಹತ್ತ್ವವನ್ನು ನೀಡಿ ಬಂದನು. ಕನ್ನ ಕೃಪೆ ಎಂಬ ದಂಡ ದಂಡವನ್ನು ನಮಗೆ ಅನುಗ್ರಹಿಸಿದನು. ನಾನೂ ನನ್ನ ಮನಸ್ಸು ಬಳಲಿದವು. ಆ ದಂಡದಿಂದ, ನಮ್ಮೆಲ್ಲ ಶ್ರೇಷ್ಠ ಕರ್ಮಗಳನ್ನು ಹೊಡೆದು, ಅವು ಕಾಡು ಮೇಡುಗಳನ್ನು ಹುಡುಕಿ, ಅಲ್ಲಿಯೇ ನಾಶವಾದವು ಅಡಗಿಬಿಟ್ಟವು.

ನಮ್ಮೆಲ್ಲ ಶ್ರೇಷ್ಠರಾದವರ ಪಾಶುರ ಭಕ್ತಿ ಶ್ರದ್ಧೆಯಿಂದಲೇ ಸಾಧನ. ಆ ಸಾಧನವನ್ನು ಹೋಗಿಸಿಕೊಳ್ಳುವುದಕ್ಕೆ ಭಗವದಾಶ್ರಯವು ದಶ ಪ್ರಯತ್ನವು ನಡೆಯುತ್ತದೆ.

Garani Srinivasan

27. அடியால் படிகடந்த முத்தோ?, அதன்றேல்
முடியால் விசும்பளந்த முத்தோ? - நெடியாய்!
செறிகழல் கொள் தாள் நிமிர்த்துச் சென்றுலகம் எல்லாம்
அறிகிலமால் நீயளந்த அன்று.

ಅಡಿಯಾಲ್ ಪಡಿಕಡನ್ದ ಮುತ್ತೋ?, ಅದನ್ಱೇಲ್
ಮುಡಿಯಾಲ್ ವಿಸುಮ್ಬಳನ್ದ ಮುತ್ತೋ? - ನೆಡಿಯಾಯ್!
ಸೆಱಿಕೞಲ್ ಕೊಳ್ ತಾಳ್ ನಿಮಿರ್ತ್ತು ಚ್ಚೆನ್ಱುಲಹಮೆಲ್ಲಾಮ್,
ಅಱಿಗಿಲಮಾಲ್ ನೀಯಳನ್ದ ಅನ್ಱು.

ಅಡಿಯಾಲ್ அடியால் = ತಿರುವಡಿಯಿಂದ, ಪಡಿಕಡನ್ದ படிகடந்த = ಭೂಮಿಯನ್ನು ಅಳೆದುಕೊಂಡ, ಮುತ್ತೋ முத்தோ = (ಗಾಂಭೀರ್ಯವೋ) ಶೋಭಿಸುವಿಕೆಯೋ, ಅದು ಅನ್ಱೇಲ್ அதன்றேல் = ಅದಲ್ಲದೆ, ಮುಡಿಯಾಲ್ முடியால் = ಕಿರೀಟದಿಂದಲೇ (ಶಿರದಿಂದಲೇ), ವಿಸುಮ್ಬು விசும்பு = ಮೇಲಣ ಲೋಕಗಳನ್ನು, ಅಳನ್ದ அளந்த = ಅಳೆದುಕೊಂಡ, ಮುತ್ತೋ முத்தோ = ಶೋಭಿಸುವಿಕೆಯೋ, ನೆಡಿಯಾಯ್ நெடியாய் = ಸರ್ವೇಶ್ವರನೇ, ಸೆಱಿ செறி = ಒತ್ತಾದ, ಕೞಲ್ ಕೊಳ್ கழல் கொள் = ವೀರಕಡಗವನ್ನು ಧರಿಸಿರುವ, ತಾಳ್ தாள் = ಕಾಲನ್ನು, ನಿಮಿರ್ತ್ತು நிமிர்த்து = ಬೆಳೆಸಿ, ಸೆನ್ಱು சென்று = ವಿಸ್ತರಿಸಿ, ಉಲಹಮ್ ಎಲ್ಲಾಮ್ உலகம் எல்லாம் = ಲೋಕಗಳೆಲ್ಲವನ್ನೂ, ನೀ = ನೀನು, ಅಳನ್ದ அளந்த = ಅಳೆದುಕೊಂಡ, ಅನ್ಱು அன்று = ಅಂದು, ಅಱಿಗಿಲಮಾಲ್ அறிகிலமால் = ಅರಿಯಲಾರೆವಲ್ಲಾ!

ಸರ್ವೇಶ್ವರನೇ, ~~ಅಂದು~~ ನೀನು ಎಲ್ಲಾ ಲೋಕಗಳನ್ನೂ ಒತ್ತಾದ ವೀರಕಡಗವನ್ನು ಧರಿಸಿರುವ ಕಾಲನ್ನು ಬೆಳೆಸಿ, ವಿಸ್ತರಿಸಿ, ಅಳೆದುಕೊಂಡಂದು, ನಿನ್ನ ತಿರುವಡಿಯಿಂದ ಭೂಮಿಯನ್ನೆಲ್ಲಾ ಅಳೆದುಕೊಂಡದ್ದೋ ಬನನ್ನೂ ನಿನ್ನ ಕಿರೀಟದಿಂದಲೇ ಮೇಲಣ ಲೋಕಗಳೆಲ್ಲವನ್ನೂ ಅಳೆದುಕೊಂಡ ಶೋಭನನ್ನು (ಇದು) ಅರಿಯಲಾರೆವಲ್ಲಾ! (27)

ಈ ಪಾಶುರದಲ್ಲಿ ಸರ್ವೇಶ್ವರನ (ಬಂದನ) ತ್ರಿವಿಕ್ರಮಾವತಾರವನ್ನು, ಈತನ ಹೃದಯಾಂತರ್ಯಾಮಿತ್ವವನ್ನೂ ಹೇಳಿ ಕೊಂಡಾಡಲು ಬಲ್ಲದೆಂದು ಹೇಳುತ್ತಾರೆ.
ಆಳ್ವಾರರು ಹೇಳುತ್ತಾರೆ: ಸ್ವಾಮಿ ಸರ್ವೇಶ್ವರನೇ, ಅಂದು ನೀನು

GaraniSrinivasan

ತ್ರಿವಿಕ್ರಮಾವತಾರವನ್ನು ಕಳೆದು, ನಿನ್ನ ಕರುಮಾಡಿಕೊಳ್ಳನ್ನು ತಾಳಿ, ಮಿಸ್ತ್ರರ,
ಭೂಲೋಕವನ್ನು, ಮೇಲಣ ವಿಶ್ವಲೋಕಗಳನ್ನು ಅಳೆದು ಕೊಂಡ
ಸೌಭಾಗ್ಯವನ್ನು, ನಾವೀಗ ನಮ್ಮ ಅಂತರಂಗ ಮೂರ್ತಿಯಾಗಿರುವ ನಿನ್ನ ಅನು
ಸ್ವರೂಪದೊಂದಿಗೆ ಬೆರೆತ ಸೌಭಾಗ್ಯ ಆನಂದದಿಂದ ಅರಿತು ಕೊಳ್ಳುವರು?

ಭಗವಂತನು ಮನುಷ್ಯನಲ್ಲಿ ಅಂತರ್ಯಾಮಿಯಾಗಿರುವನು. ಅನುಭವದಲ್ಲಿ ಅಂತ
ರ್ಯಾಮಿಯ ಅನುಭವವನು ಎಂದು ಹೇಳುವ ವಿವರಣೆ ಇಲ್ಲಿ ಬರುತ್ತದೆ

28. அன்றே நம் கண் காணும் ஆழியான் காருருவம்,
இன்றே நாம் காணாது இருப்பதுவும், — என்றேனும்
கட்கண்ணால் காணாத அவ்வுருவை, — நெஞ்சென்னும்
உட்கண்ணால் காணும் உணர்ந்து.

ಅನ್ಱೇ ನಮ ಕಣ್ ಕಾಣುಮ ಆೞಿಯಾನ್ ಕಾರುರುವಮ,
ಇನ್ಱೇ ನಾಮ ಕಾಣಾ ದಿರುಪ್ಪದುವುಮ, — ಎನ್ಱೇನುಮ
ಕಟ್ಕಣ್ಣಾಲ್ ಕಾಣಾದ ಅವ್ವುರುವೈ, — ನೆಂಜೆನ್ನುಮ
ಉಟ್ಕಣ್ಣಾಲ್ ಕಾಣುಮುಣರ್ನ್ದು.

ಅನ್ಱೇ அன்றே = ಅಂದೇ, (ಅಂದೇ), ನಮ ಕಣ್ நம் கண் = ನಮ್ಮ
ಕಣ್ಣಿಗೆ, ಕಾಣುಮ காணும் = ಕಾಣುವ, ಆೞಿಯಾನ್ ஆழியான் =
ಚಕ್ರಾಯುಧಧಾರಿಯ, ಕಾರ್ ಉರುವಮ கார் உருவம் = ಕಾರ್ಮುಗಿಲ
ಸ್ವರೂಪವು, ಇನ್ಱೇ இன்றே = ಇಂದೇ, ನಾಮ நாம் = ನಾವು, ಕಾಣಾ
ದು காணாது = ಕಾಣದೆ, ಇರುಪ್ಪದುವುಮ இருப்பதுவும் = ಇರುವು
ದೂ ನಿಜ, ಎನ್ಱೇನುಮ என்றேனும் = ಎಲ್ಲಾ ಕಾಲದಲ್ಲೂ, ಕಟ್ಕಣ್ಣಾ
ಲ್ (ಕಣ್+ಕಣ್ಣಾಲ್) கட்கண்ணால் = ಹೊರಕಣ್ಣುಗಳಿಂದ, ಕಾಣಾದ
காணாத = ಕಾಣದ, ಅವ್ವುರುವೈ அவ்வுருவை = ಆ(ದಿವ್ಯ)ರೂಪ
ವನ್ನು, ನೆಂಜು நெஞ்சு = ಮನಸ್ಸು, ಎನ್ನುಮ என்னும் = ಎಂಬ
ನಾಮ, ಉಟ್ಕಣ್ (ಉಳ್ + ಕಣ್) உட்கண் = ಒಳಗಣ್ಣಿನಿಂದ,
ಉಣರ್ನ್ದು உணர்ந்து = ಅರಿತುಕೊಂಡು (ಅನುಭವಿಸಿ, ಧ್ಯಾನಿಸಿ),
ಕಾಣುಮ್ ಇಲ್ காணும் ஏல் = ಕಾಣುವುದಾದರೆ.

ಅಂದರೆ, ನಮ್ಮ ಹೊರಕಣ್ಣಿಗೆ ಕಾಣಿಸುತ್ತಿದ್ದ ಚಕ್ರಾಯುಧಧಾರಿಯ
ಕಾರ್ಮುಗಿಲ ಸ್ವರೂಪವು, ~~ನಿಜ~~ ಇಂದು ನಾವು ಕಾಣದೆ ಇರುವುದೂ, (ನಿಜ
ವೇ). ಎಲ್ಲ ಕಾಲದಲ್ಲೂ ಹೊರಕಣ್ಣುಗಳಿಗೆ ಕಾಣದ ಆ ದಿವ್ಯರೂಪವನ್ನು ಯಾ
ರು ಮನಸ್ಸು ಅರಿತುಕೊಂಡು ಒಳಗಣ್ಣಿನಿಂದ ಕಾಣುವುದಾದರೆ (ನಿಜವೇ).

ತ್ರಿವಿಕ್ರಮಾವತಾರದಲ್ಲಿ, ಭೂಮಿಯನ್ನು ಮೇಲಿನ ಲೋಕಗಳನ್ನು ತನ್ನೆರಡು ಹೆಜ್ಜೆಗಳಿಂದಲೇ ಅಳೆದುಕೊಂಡ ಭಗವಂತನ ಅದ್ಭುತ ಸ್ವರೂಪವನ್ನು ನಮ್ಮ ಮನಸ್ಸು ಯಾವಾಗಲೂ ಯೋಚಿಸುತ್ತಾ (ಚಿಂತಿಸುತ್ತಾ) ಅವನ ಅಂತರಂಗ ಸ್ವರೂಪವನ್ನು ಕಂಡುಕೊಳ್ಳುವುದಾದರೂ ಹೇಗೆ? – ಎಂಬುದು ಇಂದಿನ ಪಾಶುರದ ವಿಷಯ.

ಅದನ್ನು ಇಲ್ಲಿ ಇನ್ನಷ್ಟು ಸ್ಪಷ್ಟವಾಗಿ ಹೇಳಲಾಗುತ್ತದೆ. ಹಿಂದಿನ ಕಾಲದಲ್ಲಿ ಭಗವಂತನು ಅವತಾರಸ್ವರೂಪಿಯಾಗಿ ಭೂಲೋಕದವರ ನಡುವೆಯೇ ಇದ್ದ ಕಾಲದಲ್ಲಿ ಅವನ ದಿವ್ಯಸ್ವರೂಪವನ್ನು ಎಲ್ಲರೂ ಕಣ್ಣಾರ ಕಂಡಿರಬೇಕು ಬಲ್ಲರಷ್ಟೆ. (ಆದರೆ, ಅವರು ಅವನನ್ನು ಪರಮೇಶ್ವರನೆಂದು ನಮ್ಮಂತೆ ತಿಳಿದರೋ ಇಲ್ಲವೋ!). ಈಗ, ಅವನು ನಮ್ಮ ಕಣ್ಣಿಗೆ ಕಾಣನು, ದಿಟ. ಆದರೆ ನಮ್ಮ ಅಂತರಂಗ ಮನಸ್ಸಿನ ಅಭ್ಯಾಸದ ಮೂಲಕ ಅವನ ದಿವ್ಯಸ್ವರೂಪವನ್ನು ನಮ್ಮ ಅಂತರಂಗದಲ್ಲಿಯೇ ಕಂಡುಕೊಳ್ಳಬಹುದು.

ಆಳ್ವಾರರು ಹೇಳುತ್ತಾರೆ:- ಇಂದು, ಎಲ್ಲರ ಕಣ್ಣಿಗೆ ಕಾಣದ ಶ್ರೀಭಗವಂತನ ದಿವ್ಯರೂಪ, ಈಗ ನಮಗೆ ಕಾಣದಿದ್ದರೆ ಇರುವುದು ದಿಟವೇ. ನಮ್ಮ ಮನಸ್ಸು ಅದನ್ನು ಅರಿತುಕೊಂಡು, ಅವನನ್ನು ಎಡೆಬಿಡದಂತೆ ತನ್ನ ಬಳಿಯಲ್ಲಿ ನಿಂದಲೇ ಕಾಣುತ್ತ ಇರಬಹುದು.

29. உணர வொருவர்க் கெளியனே? செவ்வே,
இணரும் துழாயலங்க லெந்தை, – உணரத்
தனக்கெளிய ரெவ்வளவ ரவ்வளவ னல்லால்
எனக்கெளிய னெம்பெருமா னிங்கு.

ಉಣರವೊರುವರ್ ಕೆಳಿಯನೇ? ಶೆವ್ವೇ,
ಇಣರುಮ್ ತುಳಾಯಲಙ್ಗಲೆನ್ದೈ, – ಉಣರ
ತ್ತನಕ್ಕೆಳಿಯರೆವ್ವಳವರವ್ವಳವನಲ್ಲಾಲ್
ಎನಕ್ಕೆಳಿಯನೆಮ್ಪೆರುಮಾನಿಙ್ಗು.

ಉಣರ உணர = (ಚಿಂತನೆಯಿಂದ) ಅರಿತುಕೊಳ್ಳಲು, ಒರುವರ್ಕು ஒருவர்கு = ಒಬ್ಬರಿಗೆ, ಎಳಿಯನೇ எளியனே = ಸುಲಭನೇ?, ಶೆವ್ವೇ செவ்வே = ಕಣ್ಣೆದುರಿಗೇ?, ಇಣರುಮ್ இணரும் = (ಹೂ) ಅರಳುತ್ತಿರುವ, ತುಳಾಯ್ துழாய் = ತುಳಸಿಯ, ಅಲಙ್ಗಲ್ அலங்கல் = ಹಾರವನ್ನು ಧರಿಸಿರುವ, ಎನ್ದೈ எந்தை = ನನ್ನೊಡೆಯನು, ಉಣರ, ತನಕ್ಕು உணர, தனக்கு =

ಹಾಗೆಯೇ ಹೇಳಿದರೆ, ಸ್ವಾಮಿಗೆ (ತನಗೆ), ಎಳಿಯರ್ ಆಣಿಯರ್ = ಸುಲಭ ರಾದವರು, ಎವ್ವಳವರ್ ಆಯಿನಾರ್ = ಯಾವ ಮಟ್ಟದವರು, ಅವ್ವಳವನ್ ಆಯಿನಾನ್ = ಅಷ್ಟು ಮಟ್ಟದವನು, ಆನಾಲ್ [illegible] = ಆದರೆ, ಎನಕ್ಕು ಆಣಕ್ಕು = ನನಗೆ, ಎಳಿಯನ್ ಆಣಿಯನ್ = ಸುಲಭಸಾಧ್ಯನು, ಎವ್ವರುಮಾನ್ ಎಂಪೆರುಮಾನ್ = ನನ್ನ ಸ್ವಾಮಿಯು, ಇಲ್ಲೈ இங்கு = ಇಲ್ಲಿಯೇ.

ಈ ಅರಳುತ್ತಿರುವ ತುಲಸಿಯ ಹಾರವನ್ನು ಧರಿಸಿರುವ ಸರ್ವೇಶ್ವರನು ಚಿಂತನೆಯಿಂದ ಅನುಸರಿಸಲ್ಪಡುವುದಕ್ಕೆ ಯಾರಾದರೂ ಸುಲಭನೇ? ಪ್ರತ್ಯಕ್ಷವಾಗುವನೇ? ಹಾಗೆ ಹೇಳಿದರೆ, ಯಾರು ಯಾವ ಮಟ್ಟದವರಾಗ ತನ್ನನ್ನು ನಿಲುಕಲಿಕ್ಕೆ ಸುಲಭರೋ ಅವರಿಗೆ ಸ್ವಾಮಿಯು ಅಷ್ಟೇ ಮಟ್ಟದವನಾದರೆ, ನನಗೆ ನನ್ನ ಸ್ವಾಮಿಯು ಇಲ್ಲಿಯೇ ಸುಲಭಸಾಧ್ಯನಾಗುತ್ತಾನೆ. (29)

ಇಲ್ಲಿ ಜ್ಞಾನ ಮಾರ್ಗದಲ್ಲಿ ಭಕ್ತಿ (ಪ್ರಪತ್ತಿ) ಮಾರ್ಗದಲ್ಲಿ ತಾರತಮ್ಯವನ್ನೂ, ಅವುಗಳ ಮೂಲಕ ಪಡೆಯಬಹುದಾದ ಫಲವನ್ನೂ ಸೂಚಿಸಲಾಗುತ್ತದೆ.

ಜ್ಞಾನ ಮಾರ್ಗ ಸುಲಭಸಾಧ್ಯವಲ್ಲದ್ದು. ಅದರಲ್ಲಿ ಎಡೆಬಿಡದ ಸಾಧನೆ ಅವಶ್ಯಕ. ಆ ಮೂಲಕ ಭಗವಂತನನ್ನು ಅನುಸರಿಸಲ್ಪಡುವುದಕ್ಕೆ ಸಾಧ್ಯವೆನ್ನಬಹುದು. ಆದರೆ, ಆ ಸಾಧನೆ ಎಷ್ಟು ಕಾಲ ನಡೆಯುವುದೋ? ಯಾವ ಮಟ್ಟವನ್ನು ನಿಲುಕಿದಾಗ ಭಗವಂತನ ಸ್ವರೂಪಸ್ವಭಾವಗಳ ಸಾಕ್ಷಾತ್ ಅನುಭವವಾಗುವುದು? ಹಾಗೆಯೇ ಭಗವಂತನನ್ನು ಪ್ರತ್ಯಕ್ಷ ಕಾಣಲ್ಪಡುವುದೇ? ಇವೆಲ್ಲ ಮುಖ್ಯವಾದ ಪ್ರಶ್ನೆಗಳು.

ಆಳ್ವಾರರು ಹೇಳುತ್ತಾರೆ: ಯಾರು ಯಾರು ಯಾವ ಯಾವ ಮಟ್ಟದಲ್ಲಿ, ಚಿಂತನೆಯ ಮೂಲಕ ಸ್ವಾಮಿಯನ್ನು ಅನುಸರಿಸಲು ಯತ್ನಿಸುವರೋ, ಅವರವರಿಗೆ ಅಷ್ಟಷ್ಟೇ ಮಟ್ಟದಲ್ಲಿ ಭಗವಂತನ ಅನುಭವವಾಗುತ್ತದೆ. ಆದರೆ, ಸ್ವಾಮಿಯನ್ನು ಎಡೆಬಿಡದಂತೆ ಆಶ್ರಯಿಸಿರುವ ನನಗೆ, ಅವನು ಇಲ್ಲಿಯೇ ಸುಲಭಸಾಧ್ಯನಾಗಿದ್ದಾನೆ.

30. இங்கில்லை பண்டுபோல் வீற்றிருத்தல், என்னுடைய
செங்கண்மால் சீர்க்கும் சிறிதுள்ளம், — அங்கே
மடியடக்கி நிற்பதனில் வல்வினையார் தாம், மீண்டு
அடியெடுப்பது அன்றோ அழகு?

Garani Srinivasan

ಇಙ್ಗಿಲ್ಲೈ ಪಣ್ಡುಪೋಲ್ ವೀಱ್ಱಿರುತ್ತಲ್, ಎನ್ನುಡೈಯ
ಶೆಙ್ಗಣ್ ಮಾಲ್ ಶೀರ್ಕ್ಕುಮ್ ಶಿಱಿದುಳ್ಳಮ್, - ಅಙ್ಗೇ
ಮಡಿಯಡಕ್ಕಿ ನಿಱ್ಪದನಿಲ್ ವಲ್ವಿನೈಯಾರ್ ತಾಮ್, ಮೀಣ್ಡು
ಅಡಿಯೆಡುಪ್ಪದನ್ಱೋ ಅೞಗು?

ಇಙ್ಗು இங்கு = ಇಲ್ಲಿ (ನನ್ನ ಮನಸ್ಸಿನಲ್ಲಿ), ಇಲ್ಲೈ இல்லை = ಇಲ್ಲ, ಪಣ್ಡು ಪೋಲ್ பண்டு போல் = ಹಿಂದೆ ಇದ್ದಹಾಗೆ (ಹಿಂದಿನಂತೆ), ವೀಱ್ಱಿರುತ್ತಲ್ வீற்றிருத்தல் = ವಾಸಮಾಡಿಕೊಳ್ಳುವಿಕೆ, ಎನ್ನುಡೈಯ என்னுடைய = ನನ್ನ, ಶೆಙ್ಗಣ್ ಮಾಲ್ செம் கண் மால் = ಕೆಂದಾವರೆಯಂತೆ ಕಣ್ಣುಗಳುಳ್ಳ ಸರ್ವೇಶ್ವರನ, ಶೀರ್ಕ್ಕುಮ್ சீர்க்கும் = ಹಿರಿಮೆಗೂ (ಕಲ್ಯಾಣಗುಣಗಳಿಗೂ), ಶಿಱಿದು சிறிது = ಚಿಕ್ಕದು, ಉಳ್ಳಮ್ உள்ளம் = ಮನಸ್ಸು, ಅಙ್ಗೇ அங்கே = ಅಲ್ಲಿಯೇ (ನನ್ನ ಮನದಲ್ಲಿಯೇ), ಮಡಿ ಅಡಕ್ಕಿ மடி அடக்கி = ದೇಹವನ್ನು ಕುಗ್ಗಿಸಿಕೊಂಡು (ಮುದುರಿಕೊಂಡು), ನಿಱ್ಪದನಿಲ್ நிற்பதனில் = ನಿಂತಿರುವುದಕ್ಕಿಂತಲೂ, ವಲ್ವಿನೈಯಾರ್ ತಾಮ್ வல் வினையார் தாம் = ಕ್ರೂರ ಪಾಪಗಳಾದ ತಾವು (ಅವು), ಮೀಣ್ಡು மீண்டு = ಹಿನ್ನಡೆಯಿಂದ, (ಹಿಂದಕ್ಕೆ), ಅಡಿ ಎಡುಪ್ಪದು அடி எடுப்பது = ಕಾಲನ್ನು ತೆಗೆಯುವುದು, ಅನ್ಱೋ ಅೞಗು அன்றோ அழகு = ಸೊಗಸಲ್ಲವೇ? (ಚೆನ್ನಾಗಿರುವುದಲ್ಲವೇ?)

ನನ್ನ ಕ್ರೂರವಾದ ಪಾಪಕರ್ಮಗಳಿಗೆ, ಹಿಂದೆ ಇದ್ದಹಾಗೆ ನನ್ನ ಮನದಲ್ಲಿ ಮನೆಮಾಡಿಕೊಂಡಿರುವುದಕ್ಕೆ ಅವಕಾಶವಿಲ್ಲ. ~~ನನ್ನ~~ ಕೆಂದಾವರೆಯಂತೆ ಕಣ್ಣುಳ್ಳ ನನ್ನ ಸ್ವಾಮಿಯ ಕಲ್ಯಾಣಗುಣಗಳಿಗೆ ನನ್ನ ಮನಸ್ಸು ಚಿಕ್ಕದು. (ಆದ್ದರಿಂದ) ಅಲ್ಲಿಯೇ ಅಡಗಿಕೊಂಡು ಇರುವುದಕ್ಕೆ ಬದಲಾಗಿ, ಆ ಪಾಪಕರ್ಮಗಳು (30)
ಹಿನ್ನಡೆಯಿಂದ ಹಿಂದೆಗೆಯುವುದೇ ಒಳ್ಳೆಯದು, ಅಲ್ಲವೇ?

ಹಿಂದಿನ ಪಾಶುರದಲ್ಲಿ, ಭಗವಂತನು ಆಶ್ರಿತರಿಗೆ ಸುಲಭನಾದವನೆಂದೂ, ತಮ್ಮ ಮನದಲ್ಲೇ ಅವನು ಬಂದು ನೆಲಸಿರುವನೆಂದೂ ಆಳ್ವಾರರು ಹೇಳಿಕೊಂಡರಷ್ಟೆ! ಅದರಿಂದ ತಮಗೆ ಉಂಟಾದ ಲಾಭವೇನೆಂದು ಇಲ್ಲಿ ಅವರು ಹೇಳುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ನನ್ನ ಮನಸ್ಸು, ಹಿಂದೆ, ಕ್ರೂರವಾದ ಪಾಪಕರ್ಮಗಳಿಗೆ ಎಡೆಕೊಟ್ಟಿತ್ತು. ಅವೆಲ್ಲ ಅಲ್ಲಿಯೇ ಮನೆಮಾಡಿಕೊಂಡಿದ್ದವು. ನನ್ನ ದಿವ್ಯಸುಂದರನಾದ ಸ್ವಾಮಿಯು ನನ್ನ ಮನಸ್ಸನ್ನು ಸೇರಿದ ಬಳಿಕ, ಅವನ ಹಿರಿಮೆಯೂ, ಅವನ ಕಲ್ಯಾಣಗುಣಗಳೂ ನನ್ನ ಮನಸ್ಸಿನಲ್ಲಿ

ಸ್ಥಳ ಸಾಲದೆ ಹೋಯ್ತಿದೆ. ಹೀಗಿರುವಲ್ಲಿ, ನನ್ನ ಪಾಪಕರ್ಮಗಳು ಅಲ್ಲಿಂದೇ ಬಂದು ಮೂಲೆಯಲ್ಲಿ ಅಡಗಿಕೊಂಡಿರುವುದಕ್ಕೆ ಸಾಧ್ಯವಿದೆಯೇ? ಅಲ್ಲಿಂದ ತಪ್ಪಿಸಿಕೊಳ್ಳುವುದಕ್ಕೆ ಅವು ಅಲ್ಲಿಂದ ಕಾಲ್ತೆಗೆಯುವುದಲ್ಲದೇ ಬೇರೆ ಗತಿ (ಬೇರೆ ಯಾವುದು)?

ಭಗವಂತನ ದಿವ್ಯ ಕಲ್ಯಾಣಗುಣಗಳನ್ನು ಮನದಲ್ಲಿ ತುಂಬುತ್ತಾ ಬರುವುದರಿಂದ, ಆ ಪರಿಣಾಮವಾಗಿ ಪಾಪಕರ್ಮಗಳು ತಾವಾಗಿ ಅಲ್ಲಿಂದ ಓಡಿಹೋಗುವುವು. ಅವಕ್ಕೆ ಅಲ್ಲಿರಲು ಅವಕಾಶವಾದರೂ ಉಂಟೇ?

31. அழுக்கு மறிவோமாய் வல்வினையைத் தீர்ப்பான்,
நிழலு மடிதாறுமானோம், — சுழலக்
குடங்கள் தலைமீதெடுத்துக் கொண்டாடி, அன்றக்
குடங்கடலை மேயார் தமக்கு.

ಅಟುಕ್ಕು ಮಱಿವೋಮಾಯ್ ವಲ್ವಿನೈಯೈತ್ ತೀರ್ಪ್ಪಾನ್,
ನಿಟುಲು ಮಡಿದಾಱುಮಾನೋಮ್, — ಶುಟುಲ
ಕ್ಕುಡಙ್ಗಳ್ ತಲೈಮೀದೆಡುತ್ತುಕ್ಕೊಂಡಾಡಿ, ಅನ್ಱು
ಕ್ಕುಡಙ್ಗಡಲೈ ಮೇಯಾರ್ ತಮಕ್ಕು.

ಅಟುಕ್ಕುಮ್ அழுக்கும் = ಉಪಾಯವನ್ನು, ಅಱಿವೋಮ್ ಆಯ್ அறிவோம் ஆய் = ತಿಳಿದವರಾಗಿ, ವಲ್ವಿನೈಯೈ வல்வினையை = ಕ್ರೂರ ಕರ್ಮಗಳನ್ನು, ತೀರ್ಪ್ಪಾನ್ தீர்ப்பான் = ಕಳೆದುಕೊಳ್ಳುವುದಕ್ಕಾಗಿ, ನಿಟುಲುಮ್ நிழலும் = ನೆರಳಾಗಿಯೂ, ಅಡಿದಾಱುಮ್ அடிதாறும் = ಪಾದರೇಖೆಯೂ, ಆನೋಮ್ ஆனோம் = ಆದೆವು (ಆಗಿದ್ದೇವೆ), ಶುಟುಲ சுழல = ಸುಳಿಗಳು ಬರುವಂತೆ, ಕುಡಙ್ಗಳ್ குடங்கள் = ಕೊಡಗಳನ್ನು, ತಲೈಮೀದು தலைமீது = ತಲೆಯ ಮೇಲೆ, ಎಡುತ್ತುಕ್ಕೊಂಡು எடுத்துக்கொண்டு = ಎತ್ತಿಕೊಂಡು (ಎತ್ತಿಟ್ಟುಕೊಂಡು), ಆಡಿ ஆடி = ಕುಣಿದಾಡಿ, ಅನ್ಱು அன்று = ಅಂದು (ಹಿಂದೆ ಒಂದು ಕಾಲದಲ್ಲಿ), ಕುಡಙ್ಗಡಲೈ குடங்கடலை = ವಿಸ್ತಾರವಾದ ಕಡಲಲ್ಲಿ, ಮೇಯಾರ್ ತಮಕ್ಕು மேயார் தமக்கு = ವಾಸಮಾಡುವವನಿಗೆ, (ಭಗವಂತನಿಗೆ).

ಉಪಾಯವನ್ನು ತಿಳಿದುಕೊಂಡವರಾಗಿ, ಕ್ರೂರವಾದ ಪಾಪಗಳನ್ನು ಕಳೆದುಕೊಳ್ಳುವುದಕ್ಕಾಗಿ, ಅಂದು ಕೊಡಗಳನ್ನು ತಲೆಯ ಮೇಲೆ ಎತ್ತಿಟ್ಟುಕೊಂಡು, ಸುಳಿಗಳು ಬರುವಂತೆ ಕುಣಿದಾಡಿದ ಬಳಿಕ ವಾಲ್ಗಡಲಲ್ಲಿ ವಾಸಿಸುವ ಭಗವಂತನ ನೆರಳಾಗಿಯೂ, ಅವನ ಪಾದರೇಖೆಗಳಾಗಿಯೂ ಆದೆವು. (31)

ಹಿಂದಿನ ಪಾಶುರದ ವಿಷಯವನ್ನು ಇಲ್ಲಿ ಮುಂದುವರಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ನಮ್ಮನ್ನು ಹಿಂಬಾಲಿಸುವ ಕ್ರೂರವಾದ ಪಾಪರಾಶಿಯನ್ನು ತೊಲಗಿಸಿಕೊಳ್ಳುವ ಉಪಾಯವನ್ನು ನಾವು ತಿಳಿದುಕೊಂಡ ಬಳಿಕ, ಹಿಂದೆ, ಶ್ರೀಕೃಷ್ಣನಾಗಿ ಅವತರಿಸಿದಾಗ, ಕೊಡದ ಕುಣಿತಗಳನ್ನು

ಚಿತ್ರವಿಚಿತ್ರವಾಗಿ, ಎಲ್ಲರನ್ನೂ ಬೆರಗು ಮಾಡುವಂತೆ, ಕುಣಿದಾಡುವ ಮತ್ತು ಪಾಲ್ಗ ದಲಲ್ಲಿ ಪವಡಿಸಿರುವ ಭಗವಂತನ ಎಡೆಬಿಡದ ನೆರಳೇ ಆಗಿವೆ. ಅಲ್ಲದೆ, ಅವನ ಪಾದರೇಖೆಗಳೇ ಆಗಿವೆ.

ವಸ್ತುವನ್ನು ಬಿಟ್ಟು ಅದರ ನೆರಳು ಬೇರೆ ಇರುತ್ತಿರುವುದಿಲ್ಲ. ಅದು ವಸ್ತುವಿನ ಒಂದು ಸುರೂಪವಾಗಿಯೇ ಇರುತ್ತದೆ. ಅದಕ್ಕೆ ವಸ್ತುವಿನಿಂದ ಅಗಲ್ಕೆ ಎಂಬುದಾದರೂ ಎಲ್ಲಿ ಬಂತು? ಹಾಗೆಯೇ, ನಾವು (ಭಗವಂತನನ್ನು ಆಶ್ರಯಿಸಿದವರು) ಭಗವಂತನ ನೆರಳಾಗಿ, ಮೆಲ್ಲ ಮೆಲ್ಲನೆ, ಅವನ ಕಿರುವಡಿಗಳ ಒಂದು ರೇಖೆಯಾಗಿಯೇ ಅವನೊಡನೆ (ಅವನನ್ನಗಲದೆ) ಇರುತ್ತೇವೆ.

32. தமக்கடிமை வேண்டுவார் தாமோதரனார்
தமக்கு, அடிமை செய்யென்றால் செய்யாது,- எமக்கென்று
தாம் செய்யும் தீவினைக்கே தாழ்வுறுவர் நெஞ்சினார்,
யாம் செய்வதிவ்விடத்திங்கி யாது?

ತಮಕ್ಕಡಿಮೈ ವೇಣ್ಡುವಾರ್ ತಾಮೋದರನಾರ್
ತಮಕ್ಕು, ಅಡಿಮೈ ಶೆಯ್ಯೆನ್ಱಾಲ್ ಶೆಯ್ಯಾದು,- ಎಮಕ್ಕೆನ್ಱು
ತಾಮ್ ಶೆಯ್ಯುಮ್ ತೀವಿನೈಕ್ಕೇ ತಾೞ್ವುಱುವರ್ ನೆಂಜಿನಾರ್,
ಯಾಮ್ ಶೆಯ್ವದಿವ್ವಿಡತ್ತಿಙ್ಗಿ ಯಾದು?

ತಮಕ್ಕು தமக்கு = ತಮಗೆ, ಅಡಿಮೈ அடிமை = ದಾಸ್ಯವನ್ನು, ವೇಣ್ಡುವಾರ್ வேண்டுவார் = ಬಯಸುವವರು, ತಾಮೋದರನಾರ್ ತಮಕ್ಕು தாமோதரனார் தமக்கு = ದಾಮೋದರನಿಗೆ, ಅಡಿಮೈ ಶೆಯ್ அடிமைசெய் = ದಾಸ್ಯವನ್ನು ಮಾಡು, ಎನ್ಱಾಲ್ என்றால் = ಎಂದರೆ, ಶೆಯ್ಯಾದು செய்யாது = ಮಾಡದಂತೆ, ಎಮಕ್ಕೆನ್ಱು எமக்கென்று = ನಮಗೇನೆಂದು (ಸ್ವಶಕ್ತಿಯಿಂದ), ತಾಮ್ ಶೆಯ್ಯುಮ್ தாம் செய்யும் = ತಾವು ಮಾಡುವ, ತೀವಿನೈಕ್ಕೇ தீவினைக்கே = ಪಾಪಕರ್ಮಗಳಲ್ಲೇ, ತಾೞ್ವುಱುವರ್ தாழ்வுறுவர் = ಸಿಲುಕಿಕೊಂಡಿದ್ದಾರೆ, ನೆಂಜಿನಾರ್ நெஞ்சினார் = ಮನಸ್ಸು, ಯಾಮ್ யாம் = ನಾವು, ಶೆಯ್ವದು செய்வது = ಮಾಡುವುದು, ಇವ್ವಿಡತ್ತು இவ்விடத்து = ಈ ಸ್ಥಿತಿಯಲ್ಲಿ, ಇಙ್ಗು இங்கு = ಇಲ್ಲಿ, ಯಾದು? யாது = ಯಾವುದು?

ದಾಮೋದರನಿಗೆ ದಾಸ್ಯವನ್ನು ನಡೆಸಲು ಆಶಿಸುವ ನಾನು ನನ್ನ ಮನಸ್ಸಿಗೆ ಹಾಗೆ ಮಾಡೆಂದು ಹೇಳಿದರೆ, ಅದು ಕೇಳದೆ, ಸ್ವಶಕ್ತಿಯಿಂದ ತಾನು ಮಾಡುತ್ತಿದ್ದ ಪಾಪಕರ್ಮಗಳಲ್ಲೇ ನಿರತವಾಗಿದೆ. ಇನ್ನಿಲ್ಲಿ ನಾನು ಮಾಡ

Garani Srinivasan

ತಪ್ಪಿದ್ದೇನಿದೆ?

ಭಗವಂತನನ್ನು ಎಡೆಬಿಡದಂತೆ ಆಶ್ರಯಿಸಿ, ಅವನ ಸೌಶೀಲ್ಯತೆಯ ~~...~~ ಅವನ ಪಾದರೇಖೆಯಂತೆಯೇ ಇದ್ದ, ತಮ್ಮ ಪಾಪರಾಶಿಯನ್ನು ನಿವಾರಿಸಿಕೊಳ್ಳಬೇಕೆಂದು ಆಳ್ವಾರರು ಹಿಂದಿನ ಪಾಶುರದಲ್ಲಿ ಆಶಿಸಿದರು. ಅದಕ್ಕೆ ಬರುತ್ತಿರುವ ಅಡ್ಡಿಯೇನೆಂದು ಇಲ್ಲಿ ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ದಾಮೋದರನಾದ ಭಗವಂತನಿಗೆ ಎಡೆಬಿಡದಂತೆ ದಾಸ್ಯವನ್ನು ನಡೆಸಬೇಕೆಂದು ನನಗೆ ತುಂಬ ಆಸೆಯಿದೆ. ಆದರೆ, ನನ್ನ ಮನಸ್ಸು ಅದಕ್ಕೆ ಒಪ್ಪುತ್ತಿಲ್ಲವಲ್ಲ! ಅದು ನನ್ನ ಆಸೆಯಂತೆ ನಡೆಯುತ್ತಿಲ್ಲ. ತಾನೇ ಸ್ವತಂತ್ರಿಸಿ, ತಾನು ಹೋದಲ್ಲೆಲ್ಲಾ ತಿರುಗಿದ್ದ ಪಾಪಕರ್ಮಗಳಲ್ಲೇ ನಿರತವಾಗುತ್ತಿದೆಯಲ್ಲ! ಹೀಗಿದ್ದಲ್ಲಿ ನಾನು ಇನ್ನು ಮಾಡತಕ್ಕದ್ದೇನಿದೆ?

ಮನಸ್ಸು ಹದಗೊಳ್ಳದಿದ್ದರೆ, ಮನುಷ್ಯನ ಆಸೆ ಎಷ್ಟೇ ಬಲವತ್ತರವಾಗಿದ್ದರೂ ಏನು ಪ್ರಯೋಜನ! ಭಗವಂತನನ್ನು ಸೇರುವ ಉಪಾಯವನ್ನು ಅರಿತಿದ್ದರೂ, ಅದನ್ನು ಸಾಧಿಸಿಕೊಳ್ಳಬೇಕೆಂಬ ಮನೋದಾರ್ಢ್ಯವಿದ್ದರೂ ಸಹ, ತನಗೆ ಬೇಕಾದಂತಾಗಿ ಹಾರಿ ಓಡುವ ಮನಸ್ಸನ್ನು ಹದಮಾಡಿಕೊಳ್ಳದಿದ್ದರೆ, ಕೊಳ್ಳದಿದ್ದರೆ, ಇಹಲೋಕದ ಜೀವನವೆಲ್ಲ ವ್ಯಾನಿಷ್ಫಲವೇ! ಈ ಜೀವನವನ್ನು ಪಡೆದುಕೊಂಡದ್ದಕ್ಕೆ, ಭಗವಂತನನ್ನು ಸೇರುವ ತನ್ನ ಆಸೆಯನ್ನು ಪೂರ್ಣಗೊಳಿಸಿಕೊಳ್ಳಲೇ ಬೇಕಲ್ಲವೇ?

[redacted] "ದಾಮೋದರ" — ಭಗವಂತನು ಶ್ರೀಕೃಷ್ಣನಾಗಿ ಅವತರಿಸಿ, ನಂದಗೋಕುಲದಲ್ಲಿ ಬೆಳೆಯುತ್ತಿರುವಾಗ, ಅವನು ನಡೆಸುತ್ತಿದ್ದ ತುಂಟತನಕ್ಕೆ ಬೇಸತ್ತು ತಾಯಿ ಯಶೋದೆಯು ಅವನನ್ನು ಮೊಸರು ಕಡೆಯುವ ತುಂಡು ಹಗ್ಗದಿಂದಲೇ ಒಂದು ಒರಳುಕಲ್ಲಿಗೆ ಕಟ್ಟಿಹಾಕಿದ್ದಳು. ಆ ಕಾರಣದಿಂದ, ಭಗವಂತನಿಗೆ 'ದಾಮೋದರ' ಎಂದರೆ "ಹೊಟ್ಟೆಗೆ ಹಗ್ಗದಿಂದ ಕಟ್ಟಲ್ಪಟ್ಟವನು" ಎಂದು ಹೆಸರಾಯಿತು.

33. யாதானு மொன்றறியில் தன்னுகக்கில் என் கொலோ?
யாதானும் நேர்ந்துணுகா வாறுதான், — யாதானும்
தேறுமா செய்யா வசுரர்களை, நேமியால்
பாறு பாறாக்கினான் பால்

ಯಾದಾನು ಮೊನ್ರರಿಯಿಲ್ ತನ್ನುಹಕ್ಕಿಲ್ ಎನ್ ಕೊಲೋ?,
ಯಾದಾನುಮ್ ನೇರ್ನ್ದುಣುಹಾ ವಾರುದಾನ್, — ಯಾದಾನುಮ್
ತೇರುಮಾ ಶೆಯ್ಯಾ ವಶುರರ್ಹಳೈ, ನೇಮಿಯಾಲ್
ಪಾರು ಪಾರಾಕ್ಕಿನಾನ್ ಪಾಲ್.

ಯಾದಾನುಮ್ யாதானும் = ಯಾವುದನ್ನಾದರೂ, ಒನ್ಱು ஒன்று = ಒಂದನ್ನು, ಅಱಿಯಿಲ್ அறியில் = ಅರಿಯಬೇಕಾದರೂ, ತನ್ தன் = ತಾನು, ಉಗಕ್ಕಿಲ್ உகக்கில் = ಆನಂದಿಸಬೇಕಾದರೂ, ಎನ್ ಕೊಲೋ என் கொலோ = ಏನು ಕಾರಣವೋ, ಯಾದಾನುಮ್ யாதானும் = ಯಾವುದನ್ನಾದರೂ, ನೇರ್ನ್ದು நேர்ந்து = ಸಮರ್ಪಿಸಿ, ಅಣುಗಾ அணுகா = ಹತ್ತಿರ ಸೇರದೆ, ಆಱು ತಾನ್ ஆறு தான் = ಇರುವುದು, ಯಾದಾನುಮ್ யாதானும் = ಏನನ್ನಾದರೂ, ತೇಱುಮಾ தேறுமா = ಸಂಬಂಧಕ್ಕೆ, ಸೆಯ್ಯಾ செய்யா = ಮಾಡದ, ಅಸುರರ್ಗಳೈ அசுரர்களை = ರಾಕ್ಷಸರನ್ನು, ನೇಮಿಯಾಲ್ நேமியால் = ಚಕ್ರಾಯುಧದಿಂದ, ಪಾಱು ಪಾಱು பாறு பாறு = ಚೂರು ಚೂರು, ಆಕ್ಕಿನಾನ್ ಪಾಲ್ ஆக்கினான் பால் = ಮಾಡಿದವನ ಸಮೀಪದಲ್ಲಿ.

ಯಾವುದನ್ನಾದರೂ ಅರಿಯಬೇಕಾದ್ದು ಆನಂದಿಸಬೇಕಾದ್ದು ಆದ, ನನ್ನ ಮನಸ್ಸು, ~~ಏನನ್ನಾದರೂ ಸಮರ್ಪಿಸಿ~~, ಯಾವುದನ್ನು ಸಂಬಂಧಕ್ಕೆ ಮಾಡದ ರಾಕ್ಷಸರನ್ನು ತನ್ನ ಚಕ್ರಾಯುಧದಿಂದ ಚೂರು ಚೂರು ಮಾಡಿದವನ ಬಳಿಯಲ್ಲಿ, ಏನನ್ನಾದರೂ ಸಮರ್ಪಿಸಿ ಹತ್ತಿರ ಸೇರದಿರುವುದು ಏನು ಕಾರಣವೋ? (33)

ಈ ಪಾಶುರದಲ್ಲಿ ಆಳ್ವಾರರು ತಮ್ಮ ಮನಸ್ಸು ಭಗವದ್ವಿಷಯದಲ್ಲಿ ತಕ್ಕ ಗಮನ ಕೊಡದಿರುವುದಕ್ಕೆ ವ್ಯಥೆಪಡುತ್ತಾರೆ.

ಆಳ್ವಾರರು ಹೇಳುತ್ತಾರೆ: ಯಾವುದನ್ನೂ ಸಂಬಂಧಕ್ಕೆ, ಆಶ್ರಯಿಸದಂತೆ ಮಾಡಿದ ರಾಕ್ಷಸರನ್ನು ತನ್ನ ಚಕ್ರಾಯುಧದಿಂದಲೇ ಚೂರು ಚೂರು ಮಾಡಿದ ಪರಮಸಮರ್ಥನಾದ ಭಗವಂತನ ರಕ್ಷಣೆಗಾಗಿ ನನ್ನ ಮನಸ್ಸು ಅವನ ಬಳಿಸಾರಬಾರದೇ? ಅದಕ್ಕೆ ಎಲ್ಲ ಅರ್ಹತೆ ಇದೆ. ಆನಂದಮಯವಾದದ್ದು ಆಗಿದೆ. ಆದರೆ, ಅದೇನು ಕಾರಣವೋ ನನ್ನ ಮನಸ್ಸು ಹಾಗೆ ಮಾಡಲು ಹಿಂಜರಿಯುತ್ತದೆಯಲ್ಲ! ಸರ್ವಜ್ಞನೂ, ಆನಂದಮಯನೂ, ಸರ್ವಸಮರ್ಥನೂ ಆದ ಸ್ವಾಮಿಗೆ ಏನನ್ನಾದರೂ ಸಮರ್ಪಿಸಿ, ಅವನನ್ನು ಸೇರಬಾರದೇ?

ಭಗವಂತನ ಕಡೆಗೆ ಮನಸ್ಸು ವಾಲಲು ಅದಕ್ಕೆ ತಕ್ಕದಾದ ಆಧಾರವನ್ನೂ ಅದಕ್ಕೆ ಅಭ್ಯಾಸ ಮಾಡಿಸಬೇಕು. ಇಲ್ಲವಾದರೆ, ಅದು ಇಂದ್ರಿಯಗಳ ಕಡೆಗೆ ಹರಿದು, ಸಂಸಾರದಲ್ಲಿಯೇ ಹೋಗುತ್ತಾ ಪಾಪಗಳನ್ನೇ ಮಾಡುತ್ತಾ ಇರಬಯಸುತ್ತದೆ.

34. பாலாழி நீ கிடக்கும் பண்பை, யாம் கேட்டேயும்
காலாழும் நெஞ்சழியும் கண் சுழலும், — நீலாழிச்
சோதியாய்! ஆதியாய்! தொல்வினை யெம்பால் கடியும்,
நீதியாய்! நிற்சார்ந்து நின்று.

ಪಾಲಾೞಿ ನೀ ಕಿಡಕ್ಕುಮ್ ಪಣ್ಬೈ, ಯಾಮ್ ಕೇಟ್ಟೇಯುಮ್
ಕಾಲಾೞುಮ್ ನೆಂಜೞಿಯುಮ್ ಕಣ್ ಸುೞಲುಮ್, — ನೀಲಾೞಿ
ಜ್ಯೋತಿಯಾಯ್! ಆದಿಯಾಯ್! ತೊಲ್ ವಿನೈಯೆಮ್ಪಾಲ್ ಕಡಿಯುಮ್,
ನೀದಿಯಾಯ್! ನಿಱ್ ಸಾರ್ನ್ದು ನಿನ್ಱು.

ಪಾಲ್ ಆಳಿ பால் ஆழி = ಹಾಲ್ಗಡಲಲ್ಲಿ, ನೀ நீ = ನೀನು, ಕಿಡಕ್ಕುಮ್
கிடக்கும் = ಮಲಗಿರುವ, ಪಣ್ಬೈ பண்பை = ರೀತಿಯನ್ನು, ಯಾಮ್
யாம் = ನಾವು, ಕೇಟ್ಟೇಯುಮ್ கேட்டேயும் = ಕೇಳಿದರೇಯೇ,
ಕಾಲ್ ಆಳುಮ್ கால் ஆழும் = ಕಾಲು ಸೋಲುತ್ತದೆ, ನೆಂಜು ಅಳಿಯು
ಮ್ நெஞ்சு அழியும் = ಮನಸ್ಸು ಶಿಥಿಲವಾಗುತ್ತದೆ, ಕಣ್ ಶುಳಲು
ಮ್ கண் சுழலும் = ಕಣ್ಣು ಸುತ್ತು ಬರುತ್ತದೆ, ನೀಲಾಳಿ ಶೋದಿಯಾಯ್
நீலாழி சோதியாய் = ನೀಲಕಡಲಿನ ಹೊಳಪಿನವನೇ, ಆದಿಯಾಯ್
ஆதியாய் = ಆದಿಮೂಲನೇ, ತೊಲ್ ವಿನೈ தொல் வினை = ಪ್ರಾಚೀನ
ಪಾಪಕರ್ಮಗಳು, ಎಮ್ಬಾಲ್ எம் பால் = ನನ್ನಲ್ಲಿ, ಕಡಿಯುಮ್ கடி
ಯುಮ್ = ಹೋಗಲಾಡಿಸುವ, ನೀದಿಯಾಯ್ நீதியாய் = ಸ್ವಭಾವವುಳ್ಳವನೇ,
ನಿನ್ ಶಾರ್ನ್ದು நின் சார்ந்து = ನಿನ್ನನ್ನು ಸೇರಿ, ನಿನ್ರು நின்று
= ಇರುತ್ತಾ.

ನೀಲಕಡಲಿನ ಪ್ರಕಾಶವುಳ್ಳವನೇ, ಆದಿಕಾರಣನೇ, ನನ್ನ ಪ್ರಾಚೀನ ಪಾಪಕರ್ಮಗಳನ್ನು ಹೋಗಲಾಡಿಸುವ ಸ್ವಭಾವವುಳ್ಳವನೇ, ನಿನ್ನನ್ನು ಸೇರಿ ಇರುತ್ತಾ, ಹಾಲ್ಗಡಲಲ್ಲಿ ನೀನು ಮಲಗಿರುವ ರೀತಿಯನ್ನು ನಾವು ಕೇಳಿದರೇಯೇ ನಮ್ಮ ಕಾಲುಗಳು ಸೋಲುತ್ತವೆ, ಮನಸ್ಸು ಶಿಥಿಲವಾಗುತ್ತದೆ (ಅಳಿಯುತ್ತದೆ), ಮತ್ತು ಕಣ್ಣು ಸುತ್ತು ಬರುತ್ತದೆ. (34)

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಆದಿಕಾರಣನೇ, ನೀನು ಹಾಲ್ಗಡಲಲ್ಲಿ ಮಲಗಿರುವ ರೀತಿಯನ್ನು ನಾವು ಕೇಳಿದರೇಯೇ ಸಾಕು: ನಮ್ಮ ಅಂಗಾಂಗಗಳೆಲ್ಲವೂ ಉಡುಗಿ ಹೋಗುತ್ತವೆ. ಮನಸ್ಸು ಅಳಿದು ಹೋಗುತ್ತದೆ. ನಿನ್ನ ಬಳಿಸಾರಿ ಸೇವೆ ಮಾಡುವುದಾದರೂ ಹೇಗೆ ಎನಿಸುತ್ತದೆ. ನನ್ನೆಲ್ಲ ಪಾಪಗಳನ್ನು ನೀಗಿಸುವ ಸ್ವಭಾವವುಳ್ಳವನಾದ ನೀನು ನನಗೆ ನಿನ್ನ ಸೇವೆ ಮಾಡಲು ಒತ್ತಾಸೆ ಕೊಡಬೇಕು. ಇದು ನನ್ನ ಪ್ರಾರ್ಥನೆ.

ಭಗವಂತನನ್ನು ನಾವು ಸೇರಿದೆವೆಂದರೆ, ನಮ್ಮ ಮನಸ್ಸು ಇಂದ್ರಿಯಗಳು ಎಲ್ಲವೂ ನಾಶವಾಗುತ್ತವೆ. ಭಗವತ್ಸೇವೆಯಲ್ಲಿಯೇ ನಾವು ಸದಾ ಆನಂದದಿಂದ ತೊಡಗಿರಲು ಅವಕಾಶವಾಗುತ್ತದೆ.

35. நின்றும் இருந்தும் கிடந்தும் திரிந்தும்,
ஒன்றுமோ வாற்றானென் னெஞ்சகலான், – அன்றங்கை
வன்புடையால் பொன் பெயரோன் வாய்தகர்த்து மார்விடந்தான்,
அன்புடையா னன்றே அவன்.

ನಿನ್ರುಮಿರುನ್ದುಮ್ ಕಿಡನ್ದುಮ್ ತಿರಿನ್ದುಮ್,
ಒನ್ರುಮೋ ವಾಟ್ರಾನೆನ್ ನೆಂಜಗಲಾನ್, – ಅನ್ರಙ್ಗೈ
ವನ್ಬುಡೈಯಾಲ್ ಪೊನ್ ಪೆಯರೋನ್ ವಾಯ್ ತಗರ್ತ್ತು ಮಾರ್ವಿಡನ್ದಾನ್,
ಅನ್ಬುಡೈಯಾನನ್ರೇ ಅವನ್.

Garani Srinivasan

ನಿನ್ರುಯುಮಾ நின்றும் = ನಿಂತವರಾ, ಇರುನ್ದುಮಾ இருந்தும் = ಕುಳಿತವರಾ, ಕಿಡನ್ದುಮಾ கிடந்தும் = ಮಲಗಿಯೂದವರಾ, ತಿರಿನ್ದುಮಾ திரிந்தும் = ತಿರುಗಾಡಿಯೂದವರಾ, ಒನ್ರುಮಾ ஒன்றும் = ಸ್ವಲ್ಪವಾದರಾ, ಓವಾತ್ತಾನ್ ஓவாத்தான் = ಬೇಸರಗೊಳ್ಳುವುದಿಲ್ಲ (ಅತೃಪ್ತಿ ಪಡುವುದಿಲ್ಲ), ಎನ್ ನೆಂಜು நாண் ஒருஞ்சு = ನನ್ನ ಅಂತರಂಗವನ್ನು, (ಬಿಟ್ಟು), ಅಕಲಾನ್ அகலான் = ಅಗಲುವುದಿಲ್ಲ, ಅನ್ಱು அன்று = ಅಂದು, ಅವಳ್ ಕೈ (ಅವಳ್ + ಕೈ = ಅಜ್ಗೈ) = ಸುಂದರವಾದ (ತನ್ನ) ಕೈಗಳಿಂದ, ವನ್ ಪೃತ್ತೈಯಾಲ್ வண்புடை யாப் = ಬಲವಾದ ಆಭರಣವುಳ್ಳ (ಘರ್ಜನೆಯಿಂದ), ಪೊನ್ ಪೆಯರೋನ್ பொன் பெயரோன் = ಹಿರಣ್ಯಕಶಿಪುವಿನ, ವಾಯ್ ವಾய = ಬಾಯನ್ನು, ಇದನ್ತಾನ್ ತದರ್ತ್ತು தகர்த்து = ಅದಗಿಸಿ, ಮಾರ್ವು மார்வு = ಎದೆಯನ್ನು, ಇದನ್ತಾನ್ அன்பு உடையான் ಇಡನ್ತಾನ್ இடந்தான் = ಸೀಳಿದವನು, ಅನ್ಬು ಉಡೈಯಾನ್ அன்பு உடையான் அவன் = ಅಲ್ಲಿಯೇ ಅವನು = ಪ್ರೇಮವುಳ್ಳವನು, ಅನ್ಱೇ ಅವನ್ அன்றே அவன் = ಅಲ್ಲವೇ ಅವನು.

ನಿಂತಾಗಲೂ, ಕುಳಿತಾಗಲೂ, ಮಲಗಿರುವಾಗಲೂ, ತಿರುಗಾಡುವಾಗಲೂ, (ಅವನು) ನನ್ನ ಅಂತರಂಗವನ್ನು ಸ್ವಲ್ಪವೂ ಬೇಸರಗೊಳ್ಳುವುದಿಲ್ಲ (ಅತೃಪ್ತಿ ಪಡುವುದಿಲ್ಲ), ನನ್ನ ಅಂತರಂಗವನ್ನು ಬಿಟ್ಟು ಅಗಲುವುದಿಲ್ಲ. ಅಂದು, ತನ್ನ ಸುಂದರವಾದ ಕೈಗಳಿಂದ, ಬಲವಾದ ಘರ್ಜನೆಯುಳ್ಳ ಹಿರಣ್ಯಕಶಿಪುವಿನ ಬಾಯನ್ನು ಅದಗಿಸಿ, ಅವನ ಎದೆಯನ್ನು ಸೀಳಿದವನೂ, ಪ್ರೇಮವುಳ್ಳವನೂ ಅವನೇ ಅಲ್ಲವೇ? (35)

ಭಗವಂತನು ಪ್ರೇಮಪೂರ್ಣನು, ದಯಾಮಯನು ಎಂಬುದಕ್ಕೆ ಹಿಂದು ಸದರ್ಶನ ಭಗವಂತನು ಪ್ರೇಮಪೂರ್ಣನು, ದಯಾಮಯನು ಎಂಬುದಕ್ಕೆ ಹಿಂದು ಸದರ್ಶನ ನವನ್ನು ಕೊಡುತ್ತ, ಆಳ್ವಾರರು ತಮ್ಮ ಮೇಲೆ ಭಗವಂತನಿಗೆ ಎಷ್ಟು ಪ್ರೀತಿ ಎನ್ನ ನವನ್ನು ಕೊಡುತ್ತ, ಆಳ್ವಾರರು ತಮ್ಮ ಮೇಲೆ ಭಗವಂತನಿಗೆ ಎಷ್ಟು ಪ್ರೀತಿ ಎನ್ನುವುದನ್ನು ತಿಳಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮಿಯು ತನ್ನನ್ನು ದೃಢವಾಗಿ ಸಂಬಂಧ ಪ್ರಹ್ಲಾದ ಬಾಲಕನನ್ನು ಕರುಣೆಯಿಂದ ರಕ್ಷಿಸುವುದಕ್ಕೆಂದು, ನರಸಿಂಹನಾಗಿ ಅವತರಿಸಿ, ಹಿರಣ್ಯಕಶಿಪುವಿನ ಘರ್ಜಿಸುವ ಬಾಯನ್ನು ಮುಚ್ಚಿಸಿ, ಅವನ ಎದೆಯನ್ನು ತನ್ನ ಸುಂದರವಾದ ಕೈಗಳಿಂದಲೇ ಸೀಳಿಹಾಕಿದನಲ್ಲವೇ! ಪ್ರೇಮಮಯಿಯಾದ ಅವನು ನನ್ನ ಅಂತರಂಗದಲ್ಲಿ ಸ್ವಲ್ಪವೂ ಬೇಸರಗೊಳ್ಳದಂತೆ, ನಿಂತೂ, ಕುಳಿತೂ, ಮಲಗಿಯೂ, ನೆಲಸಿದ್ದಾನೆ.

"ನಿಂತು ಕುಳಿತು, ಮಲಗಿ" — ಎಂಬ ಪದಗಳು, ಭಗವಂತನು ಭಕ್ತರ ಅಂತರಂಗದಲ್ಲಿ ಅಚಾರ್ವತಾರಿಯಾಗಿ, ಬೇರೆ ಬೇರೆ ಕ್ಷೇತ್ರಗಳಲ್ಲಿ ನೆಲಸಿರುವುದನ್ನು ತಿಳಿಸುತ್ತದೆ ಎನ್ನುತ್ತಾರೆ.

36. அவரே இவரே முவ்வுலகும், மற்றும்ப
ரவரே மவனைன் றிராதே, — அவரும்
அவனே யெனக்கொன் றிருந்து கண்ணாலுக்கே நேர்ந்
தான்,
அவனே யெவனலு மாம்.

ಅವನಾ ಮುವನಾ ಮುವನಾಮಾ, ಮಱ್ಱುಮಾಪ
ರವನಾ ಮವನೆನ ಱಾದೇ, — ಅವನಾಮಾ
ಅವನೇ ಯೆನಕ್ಕೊಳ್ಳು ಕಣ್ಣನುಕ್ಕೇ ನೇರ್ನ್ದಾಲ್,
ಅವನೇ ಯೆವನೆಲು ಮಾಮ್.

ಅವನಾಮ ಅವನ್ಱಾಮ್ = ಅಂಥವನಂತೆ, ಇವನಾಮ ಇವನ್ಱಾಮ್ = ಇಂಥವನಂತೆ, ಉವನಾಮ ಉವನ್ಱಾಮ್ = ಇನ್ನೊಂದು ಬಗೆಯವನಂತೆ, ಮಱ್ಱು ಮಱ್ಱುಮ್ = ಮತ್ತು, ಉಮ್ಬರವನ್ ಉಮ್ಬರಾವನ್ = ಅಮರರಿಗೆ ಶ್ರೇಷ್ಠನು, ಎನ್ಱು ಶಾಣ್ಱು = ಎಂದು, ಇರಾದೇ ತಿರಾತೇ = ಇರದಂತೆ, ಅವನ್ ಆಮ ಅವನೇ ಅವನ್ ಆಮ್ = ಅವನು ಅವನೇ (ಅವನೇ ಸರ್ವೇಶ್ವರನು), ಎನ ಶಾಣ = ಎಂದು, ಅವನೇ = ತಿಳಿದು ಕೊಂಡು, ತನ್ನನ್ನು ತೊಣ್ಡಾಕ್ಕಿ ತನ್ನನ್ನು ತಿರುತ್ತಿ = ತಿಳಿದು ಕೊಂಡು, ತನ್ನನ್ನು ತೊಣ್ಡಾಕ್ಕಿಕ್ಕೊಣ್ಡು = ದಾಸನಾದರೆ, ಅವನ = ಆಶ್ರಿತನಾದವನಿಗೆಯೂ, ತಿರುವಾಲ್ ತಿರುತ್ತಾಲ್ = ದಾಸನಾದರೆ, ಅವನೇ ಉವನ ಶಾವನೆಲ್ಲಾಮ್ = ಎಲ್ಲರನ್ನೂ ಅವನೇ = ಆಳುವವನು, ಎವನೇ ಉವನ ಶಾವನನ್ನಾಮ್ ಆಮ ಆಮ್ = ಆಗುತ್ತಾನೆ. ರಕ್ಷಿಸುವವನು (ಎಲ್ಲರನ್ನೂ ಆಳುವವನು), ಮತ್ತು,

ಅವನು ಅಂಥವನು, ಇಂಥವನು, ಇನ್ನೊಂದು ಬಗೆಯವನು, ಮತ್ತು, ಅವನು ಅವನೇ ಅಮರರಿಗೆ ಶ್ರೇಷ್ಠನು ಎಂದು (ಸರ್ವೇಶ್ವರನು) ಇರದಂತೆ, ಅವನು ಅವನೇ ಎಂದು ತಿಳಿದುಕೊಂಡು ಆಶ್ರಿತನಾದ ಅವನಿಗೆ ದಾಸನಾದರೆ, ಅವನೇ ಎಲ್ಲರನ್ನೂ (ಎಲ್ಲಾ ಕಾಲದಲ್ಲೂ) ರಕ್ಷಿಸುವವನು (ಆಳುವವನು) ಆಗುತ್ತಾನೆ. (36)

ಆಳ್ವಾರರು ಹೇಳುತ್ತಾರೆ: ಭಗವಂತನ ಸ್ವರೂಪವನ್ನು ಕುರಿತಾಗಲಿ, ಸ್ವಭಾವವನ್ನು ಕುರಿತಾಗಲಿ, ಅವತಾರಗಳನ್ನು ಕುರಿತಾಗಲಿ, ಇನ್ನಿತರ ವಿಷಯಗಳನ್ನು ಕುರಿತಾಗಲಿ, ಯಾರನ್ನಾ ಎದುರಿನಲ್ಲಾಗಲಿ - ಬಗೆಬಗೆಯಾಗಿ ಯೋಚಿಸಿ ಮನದಲ್ಲಿ ಸಂಶಯಗಳನ್ನು ಅನುಮಾನಗಳನ್ನು ತುಂಬಿಕೊಳ್ಳಬಾರದು. ಅವನು ಅವನೇ - ಸರ್ವೇಶ್ವರ, ಸರ್ವರಕ್ಷಕ - ಎಂದು ನಂಬಿ, ಅವನ ದಾಸನಾದರೆ, ಅವನು ನಮ್ಮನ್ನು ಎಲ್ಲಾ ಕಾಲಗಳಲ್ಲೂ ರಕ್ಷಿಸುತ್ತಾನೆ.

ಭಗವಂತನ ವಿಷಯದಲ್ಲಿ ಮನಸ್ಸು ಚಂಚಲಗೊಳ್ಳಬಾರದು. ಅವನ ಉಳಿದ ನಡತೆ ಕಷ್ಟದಲ್ಲಿ ಬಿಟ್ಟಿದ್ದು, ಅವನನ್ನೇ ದೃಢವಾಗಿ ನಂಬಿ, ಅವನ ಉಳಿಗೆ ನಡೆದರೆ, ಅವನೇ ನಮ್ಮನ್ನು ಎಲ್ಲಾ ಕಾಲದಲ್ಲೂ ರಕ್ಷಿಸುತ್ತಾನೆ.

37. ஆமா றறிவுடையா ராவ தரிதன்றே?
ஆமா றறிவுடையோம் நன்னெஞ்சே!, பூமேய
நாமே யதுவுடையோம் நன்னெஞ்சே!, பூமேய்
மதுகரமே தண்டுழாய் மாலாரை, வாழ்த்தாம்
அதுகரமே அன்பா லமை.

ಆಮಾ ಱಱಿವುಡೈಯಾ ರಾವ ದರಿದನ್ಱೇ?
ನಾಮೇ ಯದುವುಡೈಯೋಮ ನನ್ನೆಂಜೇ!, ಪೂಮೇಯ
ಮದುಕರಮೇ ತಣ್ತುೞಾಯ್ ಮಾಲಾರೈ, ವಾೞ್ತ್ತಾಮ
ಅದುಕರಮೇ ಅನ್ಬಾ ಲಮೈ

ಆಮ ಆಱು ಆಮ್ ஆறு = ತಕ್ಕದಾದ, ಅಱಿವು அறிவு = ತಿಳಿವಳಿಕೆಯನ್ನು, ಉಡೈಯಾರ್ உடையார் = ಉಳ್ಳವರು, ಆವದು ஆவது = ಆಗುವುದು, ಅರಿದು ಅನ್ಱೇ அரிது அன்றே = ಅಪರೂಪವಲ್ಲವೇ, ನಾಮೇ நாமே = ನಾವೇ, ಅದು அது = ಅದನ್ನು, ಉಡೈಯೋಮ

உடையோம் = ಉಳ್ಳವರಾಗಿದ್ದೇವೆ, ನಲ್ ನೆಂಜೇ நல் நெஞ்சே =
(ನನ್ನ) ಒಳ್ಳೆಯ ಮನಸ್ಸೇ, ಪೂ ಮೇಯ್ பூமேய் = ಹೂವಿನಲ್ಲಿ ಇರುವ,
ಮದುಕರಮ್ மதுகரம் = ದುಂಬಿಯು, ಮೇ மே = ಆಶಿಸುವ, ತಣ್
ತುಳಾಯ್ தண் துழாய் = ತಂಪಾದ ತುಳಸಿಯ ಹಾರವನ್ನು ಧರಿಸಿರುವ,
ಮಾಲಾರ್ಕ್ಕ மாலாரை = ವೆಂಕಟೇಶನನ್ನು, ವಾಳ್ತ್ತಾಂ வாழ்
த்தாம் = ಸ್ತುತಿಸುವುದಾದ (ಪೂಜಿಸುವುದಾದ), ಅದು ಕರಮೇ அதுகர
மே = ಕೈಗಳನ್ನೇ, ಅನ್‌ಬಾಲ್ அன்பால் = ಪ್ರೇಮದಿಂದ (ಭಕ್ತಿಯಿಂದ),
ಅಮ್ಮೈ அமை = ಸಿದ್ಧಪಡಿಸೋಣ.

ತಕ್ಕ ತಿಳುವಳಿಕೆಯನ್ನು ಉಳ್ಳವರಾಗುವುದು ಅಪರೂಪವೇ ಅಲ್ಲವೇ? (ನನ್ನ) ಒಳ್ಳೆಯ ಮನಸ್ಸೇ, ನಾವು ಅದನ್ನು ಪಡೆದಿದ್ದೇವೆ. ಹೂವಿನಲ್ಲಿ ಇರುವ ದುಂಬಿ ಆಶಿಸುವ ತಂಪಾದ ತುಳಸಿಯ ಹಾರವನ್ನು ಧರಿಸಿರುವ ವೆಂಕಟೇಶನನ್ನು ಪೂಜಿಸಲು (37) ನಮ್ಮ ಕೈಗಳನ್ನೇ ಭಕ್ತಿಯಿಂದ ಸಿದ್ಧಪಡಿಸೋಣ.

ಇಲ್ಲಿ, ಆಳ್ವಾರರು ತಮ್ಮ ಮನಸ್ಸಿಗೆ ಬಲು ಸುಂದರವಾದ ರೀತಿಯಲ್ಲಿ ಹಿತವಚನ ನುಡಿಯುತ್ತಿದ್ದಾರೆ.

ಇಂದ್ರಿಯಗಳು ಸೆಳೆದಂತೆ ಮನಸ್ಸನ್ನು ಬಿಟ್ಟು, ಅವು ತರುವ ಅಲ್ಪವಾದ ಕ್ಷಣಿಕ ಸುಖದಲ್ಲಿಯೇ ಕಾಲಕಳೆಯುವುದು ತಪ್ಪು ತಿಳುವಳಿಕೆ. ಭಗವಂತನನ್ನು ದೃಢವಾಗಿ ನಂಬಿ, ಅವನ ಆಶ್ರಯವನ್ನು ಹೊಂದಿ, ಭಕ್ತಿಯಿಂದ ಅವನನ್ನು ಸ್ತುತಿಸುತ್ತಾ ಪೂಜಿಸುತ್ತಾ ಕಾಲಕಳೆಯುವುದು ಉತ್ತಮವಾದ ತಿಳುವಳಿಕೆ. ಒಳ್ಳೆಯ ತಿಳುವಳಿಕೆ ಬರುವುದು ಬಲು ಅಪರೂಪ. ಅದನ್ನು ಪಡೆದುಕೊಂಡ(ು) ಅದನ್ನು ಸಾರ್ಥಕಗೊಳಿಸಿಕೊಳ್ಳಬೇಕು.

ಆಳ್ವಾರರು ಹೇಳುತ್ತಾರೆ: ನನ್ನ ಒಳ್ಳೆಯ ಮನಸ್ಸೇ, ಹೂವಿನಿಂದ ಹೂವಿಗೆ ಹಾರಾಡುತ್ತಾ, ಹೂವನ್ನೇ ಹುಡುಕುತ್ತಾ, ಅದರ ಮಕರಂದವನ್ನು ಕುಡಿಯುತ್ತಾ ಕಾಲಕಳೆಯುವ ದುಂಬಿಯೂ ಸಹ ಭಗವಂತನ ಕತ್ತಿನ [illegible] ತವಕಿಸುತ್ತದೆ. ಅವನು ಧರಿಸಿರುವ ತಂಪಾದ ತುಳಸಿಯ ಹಾರ[illegible] ಆಶಿಸುತ್ತದೆ, ಪ್ರಾಪಂಚಿಕವಾದ ಕ್ಷಣಿಕ ಸುಖವನ್ನು ಅರಸಿ ಅಲೆದಾಡುವುದು ಸರಿಯಲ್ಲವೆಂದು ನಮಗೆ ಅರಿವಾಗಿದೆ. ಅಪರೂಪವಾದ ಆ ಅರಿವಿನಿಂದ ನಾವೂ ಸಹ ವೆಂಕಟೇಶನಾದ ಭಗವಂತನನ್ನು ಭಕ್ತಿಯಿಂದ ಪೂಜಿಸಲು, ಅವನ ಸೇವೆ ಮಾಡಲು ನಮ್ಮ ಕೈಗಳನ್ನು (ನಮ್ಮ ಇಂದ್ರಿಯಗಳನ್ನು) ಸಿದ್ಧಪಡಿಸಿಕೊಳ್ಳೋಣ.

38. அமைக்கும் பொழுதுண்டே? ஆராயில் நெஞ்சே!
இமைக்கும் பொழுது இடைச்சி - குமைத்துத் திறங்கள்,
ஏசியே யாயினும் ஈன் துழாய் மாயனையே,
பேசியே போக்காய் பிழை.

Garani Srinivasan

(53)

ಅಷ್ಟುಕಷ್ಟವಾಗ ಹೋಯಿತುದುಂಟೇ? ಆರಾಯಿಲ್ ನೆಂಜೇ!
ಇಷ್ಟುಕಷ್ಟವಾಗ ಹೋಯಿತು ಮತ್ತೆ - ಕುಮ್ಮತ್ತ ಬುದ್ಧಿಗಳ್,
ಪಶಂಬೆ ಯಾಯಿನು ಮಾನ್ ಕುಖಾಯ್ ಮಾಯನ್ನೊಂಬೆ,
ಪೇಶಂಬೆ ಹೋಕ್ಕಾಯ್ ಪಿಣ್ಣೆ.

ಅಷ್ಟುಕಷ್ಟವಾ அளமக்கும் = ವ್ಯರ್ಥವಾಗಿ ಕಳೆಯಲು, ಹೋಯಿತು ಉಣ್ಟೇ பொழுது உண்டே = ಕಾಲವಿದೆಯೇ? ಆರಾಯಿಲ್ ஆராயில் = ಮನಸ್ಸೇ, ಇಷ್ಟು = ಗಮನಿಸಿ (ವಿಚಾರಿಸಿ) ನೋಡಿದರೆ, ನೆಂಜೇ நெஞ்சே = ಮನಸ್ಸೇ, ಇಷ್ಟು ಕಷ್ಟವಾ ಹೋಯಿತುದುವಾ இளைக்கும் பொழுதும் = ಕಷ್ಟಪಡುತ್ತಿರುವ ಕಾಲವನ್ನು ದಡ, ಇಷ್ಟು இடைச்சி = ಗೊಲ್ಲತಿಯು (ಯಶೋದೆ ಯು), ಕುಮ್ಮ ಕಿಬ್ಬಿಗಳ್ குடம் துறங்குகள் = ಅನುಭವಿಸಿದ ಆಕಿ ಗಳನ್ನು, ಪಶಂಬೆ ಆಯಿನುವಾ பேசியே ஆயினும் = ಹಂಬಾಲ್ಯದ ದಿಯಾದರೂ, ಕಾನ್ ಕಾಣ் = ಭೋಗನ್ಯವಾದ, ಕುಖಾಂಯ್ துழாய் = ಕುಂ ಆಶ್ಚರ್ಯಕಾರಿಯನ್ನೇ, ಪೇಶಯೇ ಸಿಯು, ಮಾಯನ್ನೊಂಬೆ மாயனோ = ಆಶ್ಚರ್ಯಕಾರಿಯನ್ನೇ, ಪೋಕ್ಕಾಯ್ போக்காய் = ಪೇಶಿಯೇ = (ವಿವರಿಸಿ) ಹೇಳುವುದು ಆದರೂ, ಹೋಕ್ಕಾಯ್ போக்காய் = ಕಳೆದುಕೊ, ಪಿಣ್ಣೆ பிழை = ಪಾಪಗಳನ್ನು,

ಮನಸ್ಸೇ, ಗಮನಿಸಿ ನೋಡಿದರೆ, ವ್ಯರ್ಥವಾಗಿ ಕಳೆಯಲು ಕಾಲವಿದೆಯೇ? ಕಷ್ಟಪಡುತ್ತಿರುವ ಆಕಿ ಕಾಲವನ್ನು ದಡ ಗೊಲ್ಲತಿಯಾದ ಯಶೋದೆಯು ಅನುಭವಿಸಿದ ಶುಲಸಿಯ ಮಾಲೆಯ ಗಳನ್ನು ಬಾಲ್ಯದ ಮಾತಿಯಾದರೂ ಭೋಗನ್ಯವಾದ ಕುಲಸಿಯ ಮಾಲೆಯ ಆಶ್ಚರ್ಯಕಾರಿಯನ್ನೇ (ವರ್ಣಿಸಿ) ಹೇಳಿಯಾದರೂ (ನಿನ್ನ) ಪಾಪಗಳ ನ್ನು ಧರಿಸಿದ ಆಶ್ಚರ್ಯಕಾರಿಯನ್ನೇ ನ್ನು ಕಳೆದುಕೋ. (38)

ಭಗವಂತನು ಶ್ರೀಕೃಷ್ಣಾವತಾರದಲ್ಲಿ, ನಡೆಸಿದ ಬಾಲಲೀಲೆಗಳನ್ನು, ತನ್ನ ತಾಯಿ ಯಶೋದೆಗೆ ಕೊಟ್ಟ ಕಷ್ಟಸಂಕಟಗಳನ್ನು ಯಾವ ವಿಧದಲ್ಲಾದರೂ ಸ್ಮರಿಸಿಕೊಳ್ಳುವುದರಿಂದ ಬರುವ ಫಲವೇನು ಎಂಬುದನ್ನು ಇಲ್ಲಿ ಹೇಳುತ್ತಾರೆ. ಆಳ್ವಾರರು ಹೇಳುತ್ತಾರೆ: ಮನಸ್ಸೇ, ವ್ಯರ್ಥವಾಗಿ ಕಳೆಯಲು ಸಮಯವೇ ಇಲ್ಲವೆಂಬುದನ್ನು ಗಮನಿಸು. ಗೊಲ್ಲತಿಯಾದ ಯಶೋದೆ ಅನುಭವಿ ಸಿದ ಆಕಿಗಳನ್ನು ಅಲ್ಪಕಾಲವಾದರೂ (ಸ್ವಲ್ಪಕಾಲವಾದರೂ) ಸ್ಮರಿಸಿಕೊಳ್ಳು. ~~[illegible]~~ ಬಂದುವೇಳೆ ಅವುಗಳನ್ನು ಬಾಲ್ಯದ ಮಾತಿಯಾದರೂ ಸರಿ. ಇದ ರಿಂದ ನಿನ್ನ ಪಾಪಗಳೆಲ್ಲವೂ ಕಳೆದು ಹೋಗುವುವು.

ಭಗವಂತನ ಗುಣಸ್ವಭಾವಗಳನ್ನು, ನಾನಾ ಲೀಲೆಗಳನ್ನು ಹೇಗಾದರೂ ಸ್ಮರಿಸಿಕೊಳ್ಳುವುದರಿಂದ ನಮ್ಮ ಪಾಪಗಳನ್ನು ಕಳೆದುಕೊಳ್ಳ ಬಹುದು.

39. பிழைக்க முயன்றோமோ? நெஞ்சமே! பேசாய்,
தழைக்குந் துழாய்மார்வன் தன்னை, - அழைத்து
ஓதாக்கால்

போயுபகாரம் பொலியக் கொள்ளாது, அவன்புகழே
வாயுபகாரங் கொண்ட வாய்ப்பு.

ಪಿಳ್ಳೆಕ್ಕ ಮುಯನ್ ಊಹೋ ಮೋ? ನೆಂಜಮೇ! ಪೇಶಾಯ್,
ಕಳ್ಳೆಕ್ಕನ್ನು ಉಪಾಯ್ ಮಾರವನ್ ಕನ್ನೆ, – ಅಬ್ಬೆಕ್ಕ ರುದಾಲ್
ಪೋಯುಪದಾರಮು ಪೊಲಿಯ ಕೊಳ್ಳಾದು, ಅವನ್ ಪುದಲ್ಯೇ
ವಾಯುಪದಾರಙ್ಕೊಣ್ಡ ವಾಯ್ಪು.

ಪಿಳ್ಳೆಕ್ಕ பிணைமுக்கக = ಪಾಪಗಳನ್ನು ಮಾಡುವುದರಲ್ಲೇ, ಮಯುಯನ್ ಊಹೋ ಮೋமுயன் ஒருமோ = ಮುನ್ನುಗ್ಗುವುದೇ, ನೆಂಜಮೇ ஒருக்கமே = ಮನಸ್ಸೇ, ಪೇಶಾಯ್ பேசாய் = ಹೇಳು, ಕಳ್ಳೆಕ್ಕ ಮಾ குழைக்கும் = ಹುಲದಾಗ ಬೆಳೆದಿರುವ, ಕಯಾಯ್ ಮಾರವನ್ ಕನ್ನೆ குழாய் மார்வன் தன்னை = ತುಳಸಿಯ ಮಾಲೆಯನ್ನು ಧರಿಸಿರುವವನನ್ನು, ಅಬ್ಬೆಕ್ಕ ~~[illegible]~~ அழைக்கு = ಕೂಗಿ ಕರೆದು, ಒರುಕಾಲ್ ஒருகால் = ಒಂದು ಸಮಯದಲ್ಲಿ, ಪೋಯು போய் = ಹೋಗಿ, ಉಪದಾರಮು உபகாரம் = ಉಪಚಾರವನ್ನು (ಸೇವೆಯನ್ನು), ಪೊಲಿಯ பொலிய = ಭವ್ಯವಾಗಿ (ಮನಸಾರ, ತೃಪ್ತಿಕರವಾಗಿ), ಕೊಳ್ಳಾದು கொள்ளாது = ಕೈಗೊಳ್ಳದಂತೆ, ಅವನ್ ಪುದಲ್ಯೇ அவன்புகழே = ಅವನ ಕೀರ್ತನೆಗಳನ್ನೇ, ವಾಯ್ ಉಪದಾರಮು வாய் உபகாரம் = ಬಾಯ ಉಪಚಾರವಾಗಿ, ಕೊಣ್ಡ கொண்ட = ಕೈಗೊಳ್ಳುವ, ವಾಯ್ಪು வாய்ப்பு = ಅನುಕೂಲಸ್ಥಿತಿ.

ಪಾಪಗಳನ್ನು ಮಾಡುವುದರಲ್ಲೇ ಮುನ್ನುಗ್ಗುವುದೇ? ಹುಲದಾಗ ಬೆಳೆದ ತುಳಸಿಯ ಹಾರವನ್ನು ಎದೆಯಲ್ಲಿ ಧರಿಸಿರುವವನನ್ನು, ಒಂದು ಸಮಯದಲ್ಲಿ ಕೂಗಿ ಕರೆದು, ಹೋಗಿ, ಭವ್ಯವಾಗಿ (ಮನಸಾರ, ತೃಪ್ತಿಕರವಾಗಿ) ಉಪಚಾರವನ್ನು (ಸೇವೆಯನ್ನು) ಕೈಗೊಳ್ಳದಂತೆ ಅವನ ಕೀರ್ತನೆಗಳನ್ನೇ ಬಾಯ ಉಪಚಾರವಾಗಿ ಕೈಗೊಳ್ಳುವ (39) ವೃತ್ತಿ, ~~[illegible]~~ ಮನಸ್ಸೇ, ಹೇಳು.

ಭಗವಂತನ ಮನಸ್ಸಿಗೆ ಆಳ್ವಾರರು ಕನ್ನಡಿಯಲ್ಲಿ ಸವಾಲು ಹಾಕಿದ್ದಾರೆ: ಭಗವಂತನಿಗೆ ಉಪಚಾರವನ್ನು ನಡೆಸಬೇಕು ಎಂಬುದು ಸರಿ. ಅದೇನು ಬಾಯ ಉಪಚಾರ? ಕರವಾಗಿರುವುದೇ, ಅಥವಾ, ಪರಮ ಪದದಲ್ಲಿ ನಿಂತ ಅವನಿಗೆ ತೃಪ್ತಿಕರವಾಗಿ ಉತ್ಸಾಹದಿಂದ ಉಪಚಾರ ಮಾಡುವುದೇ?

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನೀನೇ ಹೇಳು – ಪಾಪಗಳನ್ನು ಮಾಡುತ್ತಲೇ, ಭಗವಂತನನ್ನು ಬಾಯ ಉಪಚಾರ ಮಾಡುತ್ತಿರುವುದು ಒಳ್ಳೆಯದೇ? ಅಥವಾ, ಪರಮ ಪದವನ್ನು ಸೇರಿ, ಉತ್ಸಾಹದಿಂದ ಅವನಿಗೆ ತೃಪ್ತಿಕರವಾಗಿ ಉಪಚಾರ ಮಾಡುತ್ತಿರುವುದೋ?

40. வாய்ப்போ இதுவொப்ப மற்றில்லை வா நெஞ்சே!,
போய்ப்போய் ~~[illegible]~~ வெந்நரகில் பூவியேல், – தீப்பால
பேய்த்தா யுயிர்கலாய்ப் பாலுண்டு, அவனுயிரை
மாய்த்தானை வாழ்த்தே வலி.

Garani Srinivasan

(55)

ವಾಯ್ ಪ್ಪೋ ಇದುವೊಪ್ಪ ಮತ್ತಿಲ್ಲೈ ವಾ ನೆಂಜೇ!
ಪೋಯ್ ಪ್ಪೋಯ್ ವೆನ್ನರಗಿಲ್ ಪೂವಿಯಲ್, – ಶೀಪ್ಪಾಲ
ಪೇಯ್ ತ್ತಾಯುಯಿರ್ ಕಲಾಯ್ ಪ್ಪಾಲುಣ್ಡಾ, ಅವಳುಯಿರ್ತ್ತೈ
ಮಾಯ್ ತ್ತಾನ್ನೈ ವಾಲಿಲ್ ಕ್ಕೆ ವಲಿ.

ವಾಯ್ ಪ್ಪೋ வாய்ப்போ = ಅನುಕೂಲವಾದ ಸ್ಥಿತಿ ಎಂದರೆ, ಇದು ಒಪ್ಪ ಇದು ஒப்ப =(ಸಮನಾದ) ಇದು ಒಪ್ಪುವಂಥದ್ದು, ಮತ್ತು ಇಲ್ಲೈ ಮற்று ಇல்லை = ಬೇರೆ/ಇಲ್ಲ, ವಾ ನೆಂಜೇ ವா நெஞ்சே = ಬಾ (ನನ್ನ) ಮನಸ್ಸೇ, ಪೋಯ್ ಪ್ಪೋಯ್ போய் போய் = ಮತ್ತೆ ಮತ್ತೆ (ಹೋಗಿ ಹೋಗಿ), ವೆನ್ನರಗಿಲ್ ಪೂವಿಯಲ್ ವெம்நரகில் = ಕ್ರೂರವಾದ ನರಕದಲ್ಲಿ, ಪೂವಿಯಲ್ ಪೂವಿಯೇಲ = ಬೀಳುವೆಯೇಕೆ, ಶೀಪ್ಪಾಲ சீப்பால = ಕೆಟ್ಟ ಸ್ವಭಾವದವಳಾದ, ಪೇಯ್ ತಾಯ್ பேய்த்தாய் = ರಾಕ್ಷಸಿ (ವಂಚಕಿಯಾದ) ತಾಯಿಯ, ಉಯಿರ್ ಕಲಾಯ್ ಉಯಿರ್ ಕಲಾಯ் = ಪ್ರಾಣಗಳನ್ನು ಕಳೆದ, ಪಾಲ್ ಉಣ್ಡ ಪಾல் உண்ட = ಹಾಲನ್ನುಂಡು, ಅವಳ್ ಉಯಿರ್ತ್ತೈ அவள் உயிரை = ಅವಳ ಪ್ರಾಣಗಳನ್ನು, ಮಾಯ್ ತ್ತಾನ್ನೈ மாய்த்தானை = ಮುಗಿಸಿದವನ, ವಾಲಿಲ್ ಕ್ಕೆ ವಾழ்த்தே = ಸ್ತುತಿಯು, ವಲಿ வலி = (ನಮಗೆ) ಬಲ (ರಕ್ಷಣೆ).

ಇದು ನಮಗೆ ಅತ್ಯುತ್ತಮ ಅನುಕೂಲಸ್ಥಿತಿ. ಬೇರೆಯಾವುದೂ ಇಲ್ಲ, ಬಾ (ನನ್ನ) ಮನಸ್ಸೇ! ಕ್ರೂರವಾದ ನರಕದಲ್ಲಿ ಮತ್ತೆ ಮತ್ತೆ ಹೋಗಿ ಬೀಳುವೆಯೇಕೆ? ಅತಿ ಕೆಟ್ಟ ಸ್ವಭಾವದವಳಾದ ರಾಕ್ಷಸಿಯ ಪ್ರಾಣಗಳನ್ನು ಕಳೆದ ಹಾಲನ್ನುಂಡು, ಅವಳ ಪ್ರಾಣಗಳನ್ನೇ (ಹೀರಿ) ಮುಗಿಸಿದವನ ಸ್ತುತಿಯೇ ನಮಗೆ ಬಲ ಮತ್ತು ರಕ್ಷಣೆ. (40)

ఆళ్వారు చెప్తున్నారు: భగవంతుని త్రివిక్రమనాగ అవతరించి,
తానే సర్వేశ్వరుడని తెలియచేసిన, తన్న ఒందు కాలన్ను మేలెత్తి

ಮೊದಲನಾ ಲೋಕಗಳೆಲ್ಲವನ್ನೂ ಒಂದು ಪಾದದಿಂದ ಅಳತು ಅಳೆದುಕೊಂಡನು, ಮೇಲಣ ಲೋಕದವರೆಲ್ಲರೂ ಕಂಡು, ಭಗವಂತನ್ನ ದಿವ್ಯಪಾದವನ್ನು ವಿಧಿವತ್ತಾಗಿ ಪೂಜಿಸಿದರು. ಆಗ ಅವರು ಪಾದವನ್ನು ಅರ್ಚಿಸಿದ ಪರಿಮಳ ತುಂಬಿದ ಅನೇಕ ನಾನಾ ಹೂಗಳು ಪಾದದಮೇಲೆ ಬೆಳ್ಳನೆ ಕಡಿದವು. ಆಕಾಶದಲ್ಲಿ ಇರುವುದು ಹೊಳೆಯುವ ತಿರುವ ತಾರೆಗಳು, ಆ ಹೂಗಳೇ, ಆ ವೃಕ್ಷಗಳ ಹೊಳಪಿನ, ಶಂಖ ಹೊಳೆಯಲಾರದೆ ಹೊಳೆದವು.

62. மீனென்னுங் கம்பின் வெறியென்னும் வெள்ளி வேய்,
வானென்னுங் கேடிலா வான்குடைக்கும், — தானோர்
மணிக்காம்பு போல் நிமிர்ந்து மண்ணளந்தான், நங்கள்
பிணிக்காம் பெருமருந்து பின்

ಮೀನೆನ್ನುಙ್ ಕಮ್ಬಿನ್ ವೆಱಿಯೆನ್ನುಮ್ ವೆಳ್ಳಿವೇಯ್,
ವಾನೆನ್ನುಙ್ ಕೇಡಿಲಾ ವಾನ್ ಕುಡೈಕ್ಕುಮ್, — ತಾನೋರ್
ಮಣಿಕ್ಕಾಮ್ಬು ಪೋಲ್ ನಿಮಿರ್ನ್ದು ಮಣ್ಣಳನ್ದಾನ್, ನಙ್ಗಳ್
ಪಿಣಿಕ್ಕಾಮ್ ಪೆರುಮರುನ್ದು ಪಿನ್.

ಮೀನ್ ಎನ್ನುಮ் மீன் என்னும் : ನಕ್ಷತ್ರಗಳು ಎಂಬ, ಕಮ್ಬಿನ್ ಎನ್ನುಮ் வெறி என்னும் : கம்பின் : ಕಂಬಗಳನ್ನುಳ್ಳ, ವೆಱಿ ಎನ್ನುಮ್ ವೆಳ್ಳಿ வெள்ளி : ಬೆಳ್ಳಿಯ (ಬೆಳ್ಳನ್ನ), ಹೊಳಪು ಎಂಬ, ವಾನ್ ಎನ್ನುಮ್ வானென்னும் ವೇಯ್ வேய் = ಮೇಲುಕಟ್ಟನ್ನು, ಕೇಡು ಇಲಾ கேடு இலா : ನಾಶವಿಲ್ಲದ, ವಾನ್ ಕುಡೈ ಆಕಾಶವೆಂಬ, ಕೊಡೆ ಇಲಾ வான் குடைக்கும் : ವಿಸ್ತಾರವಾದ ಕೊಡೆಗೆಲ್ಲ, ತಾನ್ ಓರ್ ಒಂದು ಮಣಿ ಕಾಮ್ಬು ಪೋಲ್ தானோர் மணிக்காம்பு போல் : ತಾನೇ ಒಂದು ಮಣಿ ಕಾಮ್ಬು ಪೋಲ್ ನಿಮಿರ್ನ್ದು நிமிர்ந்து : ಗಾಟಿಯಿಲ್ಲದ ರತ್ನದ ಕಾವಿನಂತೆ (ದಂಡದಂತೆ), ನಿಮಿರ್ನ್ದು ಮಣ್ ಅಳನ್ದಾನ್ மண் அளந்தான் : ಲೋಕಗಳನ್ನು ನೆಟ್ಟಗೆ ನಿಂತು, ಮಣ್ ಅಳನ್ದಾನ್ ನಙ್ಗಳ್ நங்கள் : ನಮ್ಮ, ಪಿಣಿಕ್ಕು பிணிக்கு : ಅಳೆದುಕೊಂಡವನು, ನಙ್ಗಳ್ ಪೆರುಮರುನ್ದು பெருமருந்து ರೋಗಗಳಿಗೆಲ್ಲ, ಆಮ್ ஆம் = ಆಗುವವನು, ಪೆರುಮರುನ್ದು பெருமருந்து : ಪ್ರಬಲವಾದ ಔಷಧಿಯು, ಪಿನ್ பின் = ಮುಂದೆ.

ನಕ್ಷತ್ರಗಳು ಎಂಬ ಕಂಬಗಳಿಂದಲೂ, ಹೊಳಪು ಎಂಬ ಬೆಳ್ಳನ್ನ ಮೇಲುಕಟ್ಟಿನಿಂದಲೂ, ಗಗನ ಎಂಬ ನಾಶವಿಲ್ಲದ ವಿಸ್ತಾರವಾದ ಕೊಡೆಗೆಲ್ಲ ಕಾವೇ ಒಂದು ಗಾಟಿಯಿಲ್ಲದ ರತ್ನದ ದಂಡದಂತೆ ನೆಟ್ಟಗೆ (ನೇರ) ನಿಂತು ಲೋಕಗಳನ್ನು ಅಳೆದುಕೊಂಡವನು ಮುಂದೆ ನಮ್ಮ ರೋಗಗಳಿಗೆಲ್ಲ ಪ್ರಬಲವಾದ ಔಷಧಿಯಾಗುವನು.

Garani Srinivasan

ಒಂದಿನ ಪಾಶುರದಲ್ಲಿ ಭಗವಂತನ ತ್ರಿವಿಕ್ರಮಾವತಾರದ ವಿಷಯವನ್ನು ಹೇಳಲಾಯಿತು. ದೇವಾದಿದೇವತೆಗಳು ಎಲ್ಲರೂ ಒಟ್ಟುಗೂಡಿ ಭಗವಂತನ ಪಾದವನ್ನು ಅರ್ಚನೆ ಮಾಡಿದ ಪುಷ್ಪಗಳಿಂದ ವ್ಯಾಪಿಸಿದ್ದು, ಅವುಗಳ ಹೊಳಪಿನ, ತಂಪಿನ ಮನುಷ್ಯವರ್ತಿಗಳು ಯಾವ ಬಗೆಯಲ್ಲೂ ನಿಂತಾಬಿಯಲ್ಲ ನಾವು ಎನ್ನಲಾಯಿತು.

ಈಗ, ಮತ್ತೊಂದು ಸುಂದರವಾದ ರೀತಿಯಿಂದ ಅದನ್ನೇ ವಿವರಿಸಲಾಗಿದೆ. ನೆಲದ ಮೇಲಿನ ಜನರಿಗೆ ಬಿಸಿಲು ಮಳೆಗಳ ಬಾಧೆಯಿಂದ ತಪ್ಪಿಸಲು ಕೊಡೆಯನ್ನು ಹಿಡಿದು ಬರುತ್ತಾರೆ. ಹಾಗೆಯೇ ಜನ ತಮ್ಮ ತಪ್ಪಿಸಿಕೊಳ್ಳಲಾಗದ ಕೋಟೆಗೆ (ಬಿಸಿಲು-ಮಳೆಗಳಿಂದ) ಭಗವಂತನೇ ಆಶ್ರಯ — ಅವನೇ ಕೊಡೆ.

ಭಗವಂತನು ಇಡೀ ಬ್ರಹ್ಮಾಂಡಕ್ಕೇ ಒಂದು ಕೊಡೆಯಂತೆ ಇದ್ದಾನೆ. ಅನಂತವಾದ ನಾಶವಿಲ್ಲದ (ಶುದ್ಧವಾದ) ಆಕಾಶವೇ ಕೊಡೆಯ ಬಟ್ಟೆ. ಆ ... ಕಾಣುವ ಎಂಟು ದಿಕ್ಕುಗಳು ಕೊಡೆಯ ~~[illegible]~~ ಕಡ್ಡಿಗಳು. ತಾರೆಗಳೇ ಅದನ್ನು ಹಿಡಿಯುವ ಕೊಡೆಯ ಮೇಲಿನ ಕುಚ್ಚುಗಳು. ಶ್ರೀ ತಂಬಿಗಳು. ಕಣ್ಣು ಕೋರೈಸುವ ಬೆಳಕಿನ ಕೊಡೆಗೆ ಆಧಾರವಾದ ಕಡ್ಡಿ ತ್ರಿವಿಕ್ರಮನಾಗಿ ನಿಂತ ಭಗವಂತನೇ ಆ ಕೊಡೆಯ ದಂಡ. ಇದು ಕಾವ್ಯ.

ಆಳ್ವಾರರು ಹೇಳುತ್ತಾರೆ: ತ್ರಿವಿಕ್ರಮನಾದ ಭಗವಂತನು ಕೊಡೆ. ಅವನ ಆಸೆಯು ಹಾಗೆ ನಮ್ಮೆಲ್ಲರ ಬಾಧೆಗಳನ್ನು ನಿವಾರಿಸುತ್ತವನು. ಅವನ ಆಸೆ ಯೇ ನಮ್ಮ (~~[illegible]~~) ಕೋಟೆಗೆ ರಕ್ಷಣೆ ಪ್ರಬಲವಾದ ಶಕ್ತಿ.

63. பின்துரக்கும் காற்றிழந்த சூல்கொண்டல் பேர்ந்தும் போய்,
வன்திரைக்கண் வந்தணைந்த வாய்மைத்தே, — அன்று
திருச்செய்ய நேமியான் தீயரக்கி மூக்கும்
பருச்செவியும் ஈர்ந்த பரன்

ಪಿನ್ದುರಕ್ಕುಮ್ ಕಾಱ್ಱಿೞನ್ದ ಶೂಲ್ ಕೊಂಡಲ್ ಪೇರ್ನ್ದುಮ್ ಪೋಯ್
ವನ್ದಿರೈಕ್ಕಣ್ ವನ್ದಣೈನ್ದ ವಾಯ್ಮೈತ್ತೇ, — ಅನ್ಱು
ತಿರುಚ್ಚೆಯ್ಯ ನೇಮಿಯಾನ್ ತೀಯರಕ್ಕಿ ಮೂಕ್ಕುಮ್
ಪರುಚ್ಚೆವಿಯುಮ್ ಈರ್ನ್ದ ಪರನ್.

ಪಿನ್ ಪின் = ಹಿಂಬಾಲಿಸಿ, ತುರಕ್ಕುಮ್ துரக்கும் = ತಳ್ಳುವ, ಕಾಱ್ಱು காற்று = ಗಾಳಿಯನ್ನು, ಇೞನ್ದ இழந்த = ಕಳೆದುಕೊಂಡ, ಶೂಲ್ சூல் = ಪೂರ್ಣವಾಗಿ ನೀರನ್ನು ತುಂಬಿಕೊಂಡಿರುವ (ಪೂರ್ಣಗರ್ಭಿಣಿ ಯಂತೆ), ಕೊಂಡಲ್ கொண்டல் = ಕಾರ್ಮುಗಿಲು, ಪೇರ್ನ್ದುಮ್ ಪೋಯ್ பேர்ந்தும் போய் = ಒಟ್ಟುಗೂಡಿ ಹೋಗಿ, ವನ್ வன் = ಬಲವಾದ, ತಿರೈಕ್ಕಣ್ திரைக்கண் = ಅಲೆಗಳಿರುವ, ವನ್ದು வந்து = ಬಂದು, ಅಣೈನ್ದ அணைந்த = ಸೇರಿಕೊಂಡ, ವಾಯ್ಮೈತ್ತೇ வாய்மைத்தே =

ಹಾಗೆಯೇ, ಅನಿಲ ಅಣ್ಣು = ಬಂದ (ಅಂದು), ಶಿರು ಚಂದ್ರ ಶ್ರೀ [illegible]
ಯು = ಪವಿತ್ರವೂ ಸೊಬಗಿನದೂ ಆದ, ನೇಮಿಯಾನ್ ಕ್ರೂರಿಯಾಣ = ಚಕ್ರಾ
ಯುಧವನ್ನುಳ್ಳವನು, ಶಿಲ ಅರಕ್ಕಿ ಕೀ ಅರಕಕಿ = ಕ್ರೂರ ರಾಕ್ಷಸಿಯ,
ಮೂಕ್ಕುಮಾ [illegible] = ಮೂಗನ್ನು, ಪರು ಕಿವಿಯುಮ [illegible]
ಚುಟಂ = ಅಗಲವಾದ ಕಿವಿಯನ್ನು, ಅರಿನ್ದ [illegible] = ಕತ್ತರಿಸಿದ, ಪರನ್
ಪರಣ್ = ಸರ್ವೇಶ್ವರನು (ಶ್ರೀರಾಮನು).

ತಂಪಾಗಿ ಕಲ್ಲುವ ಗಾಳಿಯನ್ನು ತಳ್ಳಿದುಕೊಂಡ ಸಂಪೂರ್ಣವಾಗಿ ನೀರನ್ನು ತುಂಬಿಕೊಂಡಿರುವ ಕಾಮುಗಿಲು, ಬಿಟ್ಟುಕೊಂಡು, ಬಲವಾದ ಅಲೆಗಳ ನಡುವೆ ಬಂದು ಸೇರಿಕೊಂಡ ಹಾಗೆಯೇ, ಅಂದು ಪವಿತ್ರವೂ ಸುಂದರವೂ ಆದ ಚಕ್ರಾಯುಧವನ್ನುಳ್ಳ ಸರ್ವೇಶ್ವರನು (ಶ್ರೀರಾಮನು), ಕ್ರೂರ ರಾಕ್ಷಸಿಯ ಮೂಗನ್ನು ಅಗಲವಾದ ಕಿವಿಯನ್ನು ಕತ್ತರಿಸಿ ಹಾಕಿದನು. (63)

ಭಗವಂತನು ಯಾವ ನಿಮಿತ್ತಕ್ಕಾಗಿ ಭೂಲೋಕದಲ್ಲಿ ಅವತರಿಸುವನೋ ಅದನ್ನು ಪೂರ್ಣಗೊಳಿಸಿದ ಕೂಡಲೇ ತನ್ನ ಸ್ಥಾನವಾದ ಪಾಲ್ಗಡಲಿಗೆ ಹೋಗಿ ಸೇರುವನು. ಈ ವಿಷಯವನ್ನು ಇಂದು ಸುಂದರವಾದ ಉಪಮಾನದ ಮೂಲಕ ವಿವರಿಸಲಾಗಿದೆ.

ಕಡಲಲ್ಲಿ ನೀರನ್ನು ಹೀರಿಕೊಂಡು, ತನ್ನಲ್ಲಿ ಕೂಡಿಟ್ಟುಕೊಂ ಡು ಮೋಡಗಳ ಸಹಾಯದಿಂದ ಮೆಲ್ಲಮೆಲ್ಲನೆ ಮೇಲಕ್ಕೇರಿ, ಆಕಾಶದಲ್ಲಿ ಗಾಳಿಯ ಸಹಾಯದಿಂದ ನೆಲದ ಮೇಲೆ ಅಲ್ಲಲ್ಲಿ ಸುರಿ ಸುತ್ತಾ, ತನ್ನಲ್ಲಿರುವ ನೀರನ್ನು ನೆಲದ ಮೇಲೆ ... ಯಾದರೆ, ಅದ ವನ್ನು ಚೆಲ್ಲಾಪಿಲ್ಲಿಯಾಗಿ ಮಾಡುತ್ತದೆ. ಗಾಳಿಯು ಚಿತ್ತಾಕರ್ಷಕವಾಗಿ ಸುರಿದುಬಿಡುತ್ತದೆ. ತನ್ನಲ್ಲಿರುವ ನೀರನ್ನೆಲ್ಲಾ ಕಡಲಿಗೇ ಸುರಿದುಬಿಡುತ್ತದೆ.

ಹಾಗೆಯೇ, ದಿವ್ಯವಾದ ಚಕ್ರಾಯುಧವನ್ನು ಧರಿಸಿರುವ ಸರ್ವೇಶ್ವರನು ರಾವಣಾದಿ ರಾಕ್ಷಸರುಗಳನ್ನು ನಿರ್ನಾಮ ಮಾಡುವುದಕ್ಕಾಗಿ ಶ್ರೀರಾಮನಾಗಿ ಅವತರಿಸಿದನು. ತಂದೆಯ ಮಾತಿಗೆ ಕಟ್ಟುಬಿದ್ದು ಅರಣ್ಯವಾಸ ಮಾಡುತ್ತಾ, ಪಂಚವಟಿಯಲ್ಲಿದ್ದಾಗ, ರಾವಣನ ತಂಗಿಯಾದ ಶೂರ್ಪನಖಿಯು ಅವನನ್ನು ಮೋಹಿಸಿ ಬಂದಳು. ಅವಳ ಕಿವಿ ಮೂಗುಗಳನ್ನು ಕತ್ತರಿಸಿ, ಅಟ್ಟಿದನು. ಈ ನೆಪದಿಂದ, ಅವನು ರಾವಣನ ಕೋಪಕ್ಕೆ ಈಡಾದ ನು. ರಾವಣನು ಮೋಸದಿಂದ ಸೀತೆಯನ್ನು ಅಪಹರಿಸಿಕೊಂಡುಹೋಗಿ ಲಂಕೆಯಲ್ಲಿ ಸೆರೆಯಿಟ್ಟನು. ಸೀತೆಯನ್ನು ಸೆರೆಯಿಂದ ಬಿಡಿಸುವ ನಿಮಿತ್ತಕ್ಕಾಗಿ, ಶ್ರೀರಾಮನು ರಾವಣನನ್ನು ಅವನ ದುಷ್ಟ ರಾಕ್ಷಸ-ಕುಲವನ್ನು ನಾಶಮಾಡಿದನು. ತನ್ನ ಕೆಲಸವನ್ನು ಸಾಧಿಸಿಕೊಂಡ ಬಳಿಕ ಸ್ವಸ್ಥಾನವಾದ ಮತ್ತೆ ಪಾಲ್ಗಡಲನ್ನು ಸೇರಿದನು.

ಸ್ಥಂದಯರ್ ಶೈರಾಯರ್‌ಗಳಲ್ಲಿ ಭಗವಂತನು ~~[illegible]~~ ಕಾವಲ್ ಆಲಂಕೆ. ದುಷ್ಟಶಿಕ್ಷಣದಲ್ಲಿ ಶ್ರೀರಾಮನಂತೆ - ಎಂದರ್ಥ.

Garani Srinivasan

64. பரனு மவனுதல் பாவிப்ப ராகில்,
உரனு லொருமூன்று போதும், — மரமேழன்று
எய்தானைப் புள்ளின் வாய் கீண்டானையே, அமரர்
கைதான் தொழாவே கலந்து.

ಪರನಾಮವನಾದಲ್ ಪಾವಿಪ್ಪರಾಹಿಲ್,
ಉರನಾಲೊರು ಮೂನ್ಱು ಪೋದುಮ್, — ಮರಮೇೞನ್ಱು
ಎಯ್‌ದಾನೈಪ್ಪುಳ್ಳಿನ್ ವಾಯ್ ಕೀಣ್ಡಾನೈಯೇ, ಅಮರರ್
ಕೈದಾನ್ ತೊೞಾವೇ ಕಲನ್ದು.

ಪರನ್ பரன் = 'ಪರ'ನು (ಸರ್ವೇಶ್ವರನು), ಆಮ್ ஆம் = ಆದ, ಅವನ್ அவன் = ಅವನು, ಆದಲ್ ஆதல் = ಎಂಬುದಾಗಿ, ಪಾವಿಪ್ಪರ್ பாவிப்பர் = ಭಾವಿಸುವವರು, ಆಹಿಲ್ ஆகில் = ಆದರೆ, ಉರನಾಲ್ உரனால் = ವಿವೇಕದಿಂದ, (ಮನಃಪೂರ್ವಕವಾಗಿ), ಒರು ಮೂನ್ಱು ಪೋದುಮ್ ஒருமூன்று போதும் = ಮೂರು ಹೊತ್ತು, (ಯಾವಾಗಲೂ), ಮರಮ್ ಏೞ್ மரம் ஏழ் = ಏಳು ಮರಗಳನ್ನು (ಸಾಲವೃಕ್ಷ) ಅನ್ಱು அன்று = ಅಂದು, ಎಯ್‌ದಾನೈ எய்தானை = ಹೊಡೆದವನನ್ನು, ಪ್ಪುಳ್ಳಿನ್ ವಾಯ್ புள்ளின் வாய் = (ಬಕ) ಪಕ್ಷಿಯ ಬಾಯನ್ನು, ಕೀಣ್ಡಾನೈಯೇ கீண்டானையே = ಸೀಳಿದವನನ್ನೇ, ಅಮರರ್ ಕೈ அமரர் = ದೇವತೆಗಳ ಕೈಗಳು, ತೊೞಾವೇ தொழாவே = ಪೂಜಿಸಲಾರವೇ? (ನಮಸ್ಕರಿಸಲಾರವೇ?) ತಾನ್ ಕಲನ್ದು தான் கலந்து = ಒಟ್ಟಾಗಿ,

ಅಂದು, ಏಳು ಮರಗಳನ್ನು (ಒಂದೇ ಬಾಣದಿಂದ) ಹೊಡೆದವನನ್ನೇ, (ಬಕ) ಪಕ್ಷಿಯ ಬಾಯನ್ನು ಸೀಳಿಹಾಕಿದವನನ್ನೇ 'ಪರ'ನೆಂದು (ಸರ್ವೇಶ್ವರನೆಂದು) ~~ಭಾವಿಸ~~ ಭಾವಿಸುವವರಾದರೆ, (ಅವರನ್ನ) ಮನಃಪೂರ್ವಕವಾಗಿ ಎಲ್ಲ ಕಾಲದಲ್ಲೂ ದೇವತೆಗಳ ಕೈಗಳು ಒಟ್ಟಾಗಿ ಪೂಜಿಸವೇ? (64)

"ಮರಮೇೞನ್ಱು ಎಯ್‌ದಾನೈ" – ಇದು ಭಗವಂತನ ಶ್ರೀರಾಮಾವತಾರದ ಪ್ರಸಂಗ. ವಾಲಿಯನ್ನು ಕೊಲ್ಲಲು ತನಗೆ ಸಾಮರ್ಥ್ಯವಿದೆಯೆಂದು ತಿಳಿಯುವುದಕ್ಕಾಗಿ, ಸುಗ್ರೀವನಿಗೆ ಶ್ರೀರಾಮನು ತೋರಿದ ನಿದರ್ಶನ ಇದು. ಒಂದೇ ಸಾಲಿನಲ್ಲಿ ಇಲ್ಲದೆ, ಬೇರೆ ಬೇರೆ ಕಡೆಗಳಲ್ಲಿ ಬೆಳೆದಿದ್ದ ಏಳು ತಾಳೆಯ ಮರಗಳನ್ನೂ ಶ್ರೀರಾಮನು ತನ್ನ ಒಂದೇ ಬಾಣದಿಂದ ರಂಧ್ರ ಮಾಡಿದನು.

"ಪ್ಪುಳ್ಳಿನ್ ವಾಯ್ ಕೀಣ್ಡಾನೈ" – ಇದು ಭಗವಂತನ ಶ್ರೀಕೃಷ್ಣಾವತಾರದ ಒಂದು ಪ್ರಸಂಗ. ಬಾಲಕೃಷ್ಣನು ನಂದಗೋಕುಲದಲ್ಲಿ ಬೆಳೆಯುತ್ತಿದ್ದಾಗ, ಕಾಡಿಗೆ ದನಕರುಗಳೊಂದಿಗೆ ಅವನೊಡನೆ ಇತರ ಗೋವಳ ಬಾಲಕರ ಸಂಗಡ ಹೋಗುತ್ತಿದ್ದನು. ಅವನ ಶತ್ರುವಾದ ಕಂಸನು ಅವನನ್ನು ಕೊಲ್ಲಿಸುವುದಕ್ಕೆ ನಾನಾ ರಾಕ್ಷಸರನ್ನು ಆಗಿಂದಾಗ್ಗೆ ಕಳುಹಿಸುತ್ತಿದ್ದನು. ಅವರಲ್ಲಿ ಬಕಾಸುರ ಎಂಬುವನೂ ಒಬ್ಬನು. ಬಕಪಕ್ಷಿಯ ವೇಷದಿಂದ ಅವನು ಕೃಷ್ಣನನ್ನು ಕೊಂದು

ಹಾಕಲು ಮುನ್ನುಗ್ಗಿ ಬಂದನು. ಅದನ್ನರಿತ ಕೃಷ್ಣನು, ಆ ಬಕಪಕ್ಷಿಯನ್ನು ಹಿಡಿದು ಅದರ ಬಾಯನ್ನು ಸೀಳಿ, ಕೊಂದು ಹಾಕಿದನು.

ಆಳ್ವಾರರು ಹೇಳುತ್ತಾರೆ: ಶ್ರೀರಾಮ, ಶ್ರೀಕೃಷ್ಣ - ಮುಂತಾದ ಬೇರೆ ವಂಶದ ಅವತಾರಗಳನ್ನು ಯಾರು, ಭಿನ್ನ ಭಿನ್ನ ಭಾವನೆಯಿಂದ ನೋಡದೆ, ಮನಃ ಪೂರ್ವಕವಾಗಿ, ಅವನೇ ಸರ್ವೇಶ್ವರನ ಅವತಾರವೆಂದು (ಅವನೇ ಸರ್ವೇಶ್ವರನೆಂದು) ಭಾವಿಸುವವರನ್ನು ದೇವತೆಗಳೂ ಪೂಜಿಸುವರು.

65. கலந்து நலியும் கருந்துயரை நெஞ்சே!
மலங்க வடித்து மடிப்பான், — விலங்குகள் போல்
தொன் மாலைக் கேசவனை நாரணனை மாதவனைச்,
சொன் மாலை எப்பொழுதும் சூட்டு.

ಕಲನ್ದು ನಲಿಯುಮ್ ಕರುನ್ದುಯರೈ ನೆಂಜೇ!
ಮಲಙ್ಗ ವಡಿತ್ತು ಮಡಿಪ್ಪಾನ್, - ವಿಲಙ್ಗಲ್ ಪೋಲ್
ತೊನ್ ಮಾಲೈ ಕ್ಕೇಶವನೈ ನಾರಣನೈ ಮಾದವನೈ,
ಶೊನ್ ಮಾಲೈ ಯೆಪ್ಪೊಳುದುಮ್ ಶೂಟ್ಟು.

ಕಲನ್ದು கலந்து = ಬಿಟ್ಟುಗಾಡಿ, ನಲಿಯುಮ್ நலியும் = ಹಿಂಸಿಸುವ, ಕರು கரு = ಕಪ್ಪಾದ (ಭಯಂಕರವಾದ), ತುಯರೈ துயரை = ದುಃಖಗಳನ್ನು, ನೆಂಜೇ நெஞ்சே = ಮನಸ್ಸೇ, ಮಲಙ್ಗ மலங்க = ಛಿದ್ರಛಿದ್ರವಾಗುವಂತೆ, ಅಡಿತ್ತು அடித்து = ಹೊಡೆದು, ಮಡಿಪ್ಪಾನ್ மடிப்பான் = ನಾಶಪಡಿಸುವುದಕ್ಕೋಸ್ಕರ, ವಿಲಙ್ಗಲ್ ಪೋಲ್ விலங்கல் போல் = ಪರ್ವತದ ಹಾಗೆ (ಸ್ಥಿರವಾಗಿ, ಆಧಾರವಾಗಿ, ಇರುವ), ತೊಲ್ ಮಾಲೈ தொல் மாலை = ಅನಾದಿಕಾಲದಿಂದಲೂ ಇರುವ ಸರ್ವೇಶ್ವರನನ್ನು, ಕೇಶವನೈ கேசவனை = ಸುಂದರವಾದ ಕೇಶರಾಶಿಯುಳ್ಳವನನ್ನು, ನಾರಣನೈ நாரணனை = ನರಕದಿಂದ ತಪ್ಪಿಸುವವನನ್ನು (ಶ್ರೀಮನ್ನಾರಾಯಣನನ್ನು), ಮಾದವನೈ மாதவனை = ಲಕ್ಷ್ಮೀಪತಿಯನ್ನು. ಶೊಲ್ ಮಾಲೈ சொல் மாலை = (ಮುಂತಾದ ಅವನ) ನಾಮಗಳ ಹಾರವನ್ನು, ಎಪ್ಪೊಳುದುಮ್ எப்பொழுதும் = ಎಡೆಬಿಡದಂತೆ, ಶೂಟ್ಟು சூட்டு = (ಅವನಿಗೆ) ಮುಡಿಸು.

ಮನಸ್ಸೇ, ಬಿಟ್ಟುಗಾಡಿ ಹಿಂಸಿಸುವ ಭಯಂಕರವಾದ ದುಃಖಗಳನ್ನು ಪುಡಿಪುಡಿಯಾಗುವಂತೆ ಹೊಡೆದು ನಾಶಪಡಿಸುವುದಕ್ಕೆ, ಪರ್ವತದ ಹಾಗೆ ಭದ್ರವಾಗಿ ಆಧಾರವಾಗಿರುವ ಅನಾದಿಕಾಲದ ಸರ್ವೇಶ್ವರನನ್ನು, ಕೇಶವನನ್ನು (ಸುಂದರವಾದ ಕೇಶರಾಶಿಯುಳ್ಳವನನ್ನು), ನಾರಾಯಣನನ್ನು (ನರಕದಿಂದ ಬಿಡುಗಡೆ ಮಾಡುವವನನ್ನು), ಮಾಧವನನ್ನು (ಲಕ್ಷ್ಮೀಪತಿಯನ್ನು) ಅವನ ದಿವ್ಯನಾಮಗಳ ಹಾರವನ್ನು ಎಡೆಬಿಡದಂತೆ ಅವನಿಗೆ ಮುಡಿಸಿ ಪೂಜಿಸು.

Garani Srinivasan

ಎಡೆಬಿಡದಂತೆ ಭಗವನ್ನಾಮಗಳನ್ನು ಉಚ್ಚರಿಸುತ್ತಲೇ ಇರುವುದು ನಮ್ಮೆಲ್ಲ ದುಃಖ ಸಂಕಟಗಳನ್ನು ನೀಗಿಸಿಕೊಳ್ಳುವುದಕ್ಕೆ ಸುಲಭವಾದ ಮಾರ್ಗ ಎಂದು ಇಲ್ಲಿ ಹೇಳಲಾಗಿದೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನೀನು ಸದಾಕಾಲವೂ ಕೇಶವ, ಮಾಧವ, ನಾರಾಯಣಾ, ಎಂದು ಮುಂತಾದ ಸರ್ವೇಶ್ವರನ ದಿವ್ಯನಾಮಗಳನ್ನು ಉಚ್ಚರಿಸುತ್ತಾ ಇರು. ಇದರಿಂದ ನಿನ್ನ ಭಯಂಕರವಾದ ದುಃಖ, ಸಂಕಟಗಳೆಲ್ಲವೂ ನೀಗಿ ಹೋಗುವುವು.

66. சூட்டாய் நேமியான் தொல்லரக்க னின்னுயிரை,
மாட்டே துயரிழைத்த மாயவனை,- ஈட்ட
வெறி கொண்ட தண்டுழாய் வேதியனை, நெஞ்சே!
அறிகண்டாய் சொன்னேன் அது.

ಸೂಟ್ಟಾಯ್ ನೇಮಿಯಾನ್ ತೊಲ್ಲರಕ್ಕ ನಿನ್ನುಯಿರೈ,
ಮಾಟ್ಟೇ ತುಯರಿೞೈತ್ತ ಮಾಯವನೈ,- ಈಟ್ಟ
ವೆಱಿಕೊಣ್ಡ ತಣ್ಡುೞಾಯ್ ವೇದಿಯನೈ, ನೆಂಜೇ!
ಅಱಿಕಣ್ಡಾಯ್ ಶೊನ್ನೇನದು.

ಸೂಡು ಆಯ சூடு ஆய = ಅಲಂಕರಿಸಲಾಗಿರುವ, ನೇಮಿಯಾನ್ நேமியான் = ಚಕ್ರಾಯುಧವುಳ್ಳವನನ್ನು, ತೊಲ್ தொல் = ಬಹುಕಾಲದಿಂದಲೂ (ಸಂಸಾರದ), ಇನ್ இன் = ಇನಿದಾದ, ಉಯಿರೈ, ಅರಕ್ಕನ್ அரக்கன் = ರಾಕ್ಷಸನ, ಮಾಟ್ಟೇ மாட்டே = ಪೂರ್ತಿ ಪೂರ್ತಿ ಮಾಡಿ, ತುಯರ್ ಉಯಿರೈ உயிரை = ಪ್ರಾಣವನ್ನು, ಮಾಟ್ಟೇ ಇೞೈತ್ತ இழைத்த = ನಾಶಪಡಿಸಿದ, ಮಾಯವ ತುಯಿರ் = ಸಂಕಟವನ್ನು, ಇೞೈತ್ತ ಮಾಯವನೈ = ಆಶ್ಚರ್ಯಕರನನ್ನು, ಈಟ್ಟ ஈட்ட = ಒಟ್ಟುಗೂಡಿದ (ಒಪ್ಪವಾದ), ವೆಱಿಕೊಣ್ಡ வெறி கொண்ட = ಪರಿಮಳ ತುಂಬಿದ, ತಣ್ ತುೞಾಯ್ தண் துழாய் = ತಂಪಾದ ತುಲಸಿಯ ಹಾರವನ್ನು ಧರಿಸಿರುವ, ವೇದಿಯನೈ வேதியனை = ವೇದಗಳಲ್ಲಿ ಪ್ರತಿಪಾದಿತನಾದವನನ್ನು, ನೆಂಜೇ நெஞ்சே = ಮನಸ್ಸೇ, ಅಱಿ ಕಂಡಾಯ್ அறி கண்டாய் = ತಿಳಿ (ಅರಿತುಕೋ) ಕಂಡೆಯಾ, ಶೊನ್ನೇನ್ ಅದು சொன்னேன் அது = ಅದನ್ನು ಹೇಳಿದ್ದೇನೆ.

ಕೈಯಲ್ಲಿ ಅಲಂಕರಿಸಿರುವ ಚಕ್ರಾಯುಧಧಾರಿಯನ್ನು, ಬಹುಕಾಲದಿಂದ ಸಂಸಾರದ ಸಂಕಟವನ್ನು ಕೊಡುತ್ತಿದ್ದವನ(?) ರಾಕ್ಷಸನ ಇನಿದಾದ ಪ್ರಾಣಗಳನ್ನು ಪೂರ್ತಿ ಪೂರ್ತಿ ಮಾಡಿ ಕೊಂದವನನ್ನು, ಒಪ್ಪವಾದ ಪರಿಮಳ ತುಂಬಿದ/ತುಲಸಿಯ ಹಾರವನ್ನು ಧರಿಸಿರುವವನನ್ನು, ವೇದಗಳನ್ನು ಪ್ರತಿಪಾದಿತನಾದವನನ್ನು, ಮನಸ್ಸೇ, ಅರಿತುಕೋ, ಕಂಡೆಯಾ. ಈ (ಮುಖ್ಯ) ವಿಷಯವನ್ನು ಹೇಳಿದ್ದೇನೆ. (66)

ಯಾರನ್ನು ಮನಸ್ಸು ಮುಖ್ಯವಾಗಿ ನೆನೆಸಿ, ಅನುಸಂಧಾನ ಮಾಡಬೇಕೆಂಬುದು ಈ ಪಾಶುರದ ವಿಷಯ.

ಭಗವಂತನನ್ನು, ~~ಮೂರು~~ ನಾಲ್ಕು ವಿಷಯಗಳನ್ನಿಟ್ಟುಕೊಂಡು, ವರ್ಣಿಸಲಾಗಿದೆ.

శత్రువులం దారకవ్వూ, సుందరవ్వూ ఆగిరువ ఆకృతియుద్దవన్ను ధరిసిరువవను ఎం బుదు మోదలనేయదు. బద్రాలదింద లూ మయూరులోకదల్లన్ను బంబ సుత్తద్దదాష్టదను రావణాంతక (ఇదన్ను లక్ష్మీకవ్రుగా అన్వయిసబద్దు). అవనన్ను కొండయకక్కె సామర్థ్యవుళ్ళ స్వామి (శ్రీరామావతారదిందద) సర్వేశ్వర. ఇదు ఎరడనేయదు. అవ్వూ విమలశంఖచక్ర ఆదవనూ లోయన్ను (శంఖాదకులపియ దారవన్ను) ధరిసిరువవను జగదంత-శ్రీవత్సా లెయన్ను (కంసాదకులపియ దారవన్ను) ధరిసిరువవను అవనే. ఆ సర్వేశ్వరనన్నే (శ్రీమన్నారాయణనన్నే) చెన్నాగి అరుకొండు అనుసంధాన మాడబేకెంబ సత్యవన్నూ ఆళ్వారరు (తిళిసుత్తారె.

67. அதுவோ நன் றென்றங் கமருலகோ வேண்டில்,
அதுவோர் பொருளிலதே யன்றே? — அதுவொழிந்து
மண்ணின்றன் மேனிலுங் கூடும் மடநெஞ்சே!
கண்ணன் தாள் வாழ்த்துவதே கல்

అదువో నన్ఱెన్ఱు అజ్గమరులగో వేండిల్,
అదువోర్ పొరుళిల్లై యన్ఱే? — అదువొళిన్దు
మణ్ణిన్ఱు ఆళ్వేననిలుమ్ కూడుమ్ మడనెంజే!,
కణ్ణన్ తాళ్ వాళ్త్తువదే కల్.

అదువో అதுவோ = ఆ పరమపదానుభవవో, నన్ఱెన్ఱు = ఒళ్ళెయదు, ఎన్ఱు என்று = ఎందు, అజ్గు அங்கு = అల్లి (ఆ) అమర అமர் = ఆ అమరలోకవన్నే, వేండిల్ அமர் உலகோ = అమరలోకవో, వేండిల் = అపేక్షిసిదరె, అదు அது = అదు, ఓర் ஓர் = ఒందు, పొరుళ్ ఇల్లై பொருள் இல்லை = వస్తువల్ల, అన్ఱే அன்றே = అల్లవే, అదు அது = అదన్ను, ఒళిన్దు ஒழிந்து = బిట్టు (బిట్టు), మణ్ణిల్ నిన్ఱు மண் நின்று = ఈ లోకదల్లే ఇద్దుకొండు, ఆళ్వేన్ ஆழ்வேன் = ఆళుత్తేనె, ఎనిలుమ్ எனிலும் = ఎన్నువుదక్కె, కూడుమ్ கூடும் = సాధ్య, మడనెంజే மடநெஞ்சே = ముగ్ధమను నెస్సే, కణ్ణన్ తాళ్ கண்ணன் தாள் = ఆశ్రితసార భగవంతన్నే, కణ్ణన్ తాళ్ = శ్రీకృష్ణన పాదగళన్ను, వాళ్త్తువదే வாழ்த்துவதே = స్తుతిసువుదన్నే, కల్ கல் = కలి.

ముగ్ధమనస్సే, పరమపదానుభవవొళ్ళెయదు ఎందు బగెదు ఆ అమరలోకవన్నే బేడు ఎందు బేడిదరె అదొందు వస్తువల్ల, అల్లవే? ఆ పరమపదవన్ను బిట్టు, ఈ లోకదల్లే ఇద్దుకొండు ఆళుత్తేనె ఎన్నువుదక్కూ సాధ్య. ఆద్దరింద ఆశ్రితసులభన పాదగళన్నే స్తుతిసువుదన్నే కలి.

Garani Srinivasan

ಈ ಪಾಶುರದಲ್ಲಿ ಆಳ್ವಾರರು ತಮ್ಮ ಮನಸ್ಸಿಗೆ ಒಳ್ಳೆಯ ಉಪದೇಶವೊಂದನ್ನು ಕೊಡುತ್ತಾರೆ.

ಆಳ್ವಾರರು ಹೇಳುತ್ತಾರೆ: ಅರಿಯದ ಮನಸ್ಸೇ, ನನಗೆ ಪರಮಪದಾನುಭವ ಬಲು ಒಳ್ಳೆಯದೆಂದೂ ಅದನ್ನು ಪಡೆದುಕೊಳ್ಳಬೇಕೆಂದೂ ಆಸೆಯಿರಬಹುದು. ಅದನ್ನು ನನಗೆ ನೀಡೆಂದು ನೀನು ಭಗವಂತನನ್ನು ಕೇಳಿದರೂ, ಸ್ವಾಮಿಗೆ ಅದೊಂದು ದಾನ ನೀಡುವ ವಸ್ತುವಲ್ಲ ಕಂಡೆಯಾ. ಅದನ್ನು ನೀನೇ ಸ್ವಪ್ರಯತ್ನದಿಂದ ಗಳಿಸಿಕೊಳ್ಳಬೇಕು. 'ಪರಮಪದವೇ ಬೇಡ, ಈ ಲೋಕದಲ್ಲೇ ಇದ್ದುಕೊಂಡು ನಾನು ಆನಂದವನ್ನು ಅನುಭವಿಸುತ್ತೇನೆ' ಎಂದು ನೀನು ಬೇಡುವುದಕ್ಕೇನೂ ಅವಕಾಶವಿದೆ. ಆದರೆ, ಈ ಲೋಕದಲ್ಲಿ ದುಃಖ ಸಂಕಟಗಳೇ. ಆನಂದಕ್ಕೆ ಇಲ್ಲಿ ಎಡೆಯಿಲ್ಲ. ಆದ್ದರಿಂದ, ನೀನು ಇಲ್ಲಿ ಜೀವಿಸುವವರೆಗೂ ಭಗವಂತನ ತಿರುವಡಿಗಳನ್ನು ಆಶ್ರಯಿಸಬೇಕು. ಅವುಗಳನ್ನು ನಿತ್ಯವೂ ಪೂಜಿಸಬೇಕು. ಅದೇ ನಿನ್ನ ಮುಖ್ಯ ಕೆಲಸವೆಂದು ತಿಳಿದು, ನೀನು ಅದನ್ನು ಮಾತ್ರ ಕೇಳು.

'ನನಗೆ ಇದು ಬೇಕು, ಅದು ಬೇಕು' ಎಂದು ಬೇಡುವುದು ತರವಲ್ಲ, ನಿನಗೆ ಬೇಕಾದದ್ದನ್ನು ನೀನು ಪ್ರಯತ್ನಪೂರ್ವಕವಾಗಿ ಪಡೆದುಕೊಳ್ಳಬೇಕು. ಅದಕ್ಕೆ ಆರ್ತಿಯನ್ನು ಪಡೆದುಕೊಳ್ಳುವುದು ನಿನ್ನ ಮೊದಲ ಕರ್ತವ್ಯ. ಆದ್ದರಿಂದಲೇ, ನೀನು ಸ್ವಾಮಿಯ ತಿರುವಡಿಗಳನ್ನು ಆಶ್ರಯಿಸು. ಅದನ್ನು ಭಜಿಸು, ಪೂಜಿಸು. ಅದೇ ತಕ್ಕ ಉಪಾಯ.

68. கல்லுங் கனைகடலும் வைகுந்த வானாடும்,
புல்லென் றொழிந்தனகொல்? ஏபாவம், - வெல்ல
நெடியான் நிறங்கரியா னுள்புகுந்து நீங்கான்,
அடியேன துள்ளத் தகம்

ಕಲ್ಲುಙ್ ಕನೈಕಡಲುಮ್ ವೈಕುಂದ ವಾನಾಡುಮ್,
ಪುಲ್ಲೆನ್ ಱೊೞಿಂದನಕೊಲ್? ಏಪಾವಮ್, - ವೆಲ್ಲ
ನೆಡಿಯಾನ್ ನಿಱಙ್ಗರಿಯಾ ನುಳ್ಪುಗುಂದು ನೀಙ್ಗಾನ್,
ಅಡಿಯೇನ ದುಳ್ಳತ್ ತಗಮ್.

ಕಲ್ಲುಮ್ கல்லும் = ಬೆಟ್ಟವೂ, ಕನೈ கனை = ಘೋಷಿಸುತ್ತಿರುವ, ಕಡಲುಮ್ கடலும் = ಕಡಲೂ, ವೈಕುಂದಮ್ வைகுந்தம் = ಶ್ರೀವೈಕುಂಠವೂ, ವಾನ್ನಾಡುಮ್ வான்நாடும் = ಮೇಲಣಲೋಕವೂ, ಪುಲ್ಎನ್ಱು புல்என்று = ಹುಲ್ಲಿಗೆ ಸಮಾನ ಎಂದು, ಒೞಿಂದನ ಕೊಲ್ ஒழிந்தன கொல் = ಹೊರಟು ಬಿಟ್ಟುವೋ ಹೇಗೆ?, ಏ ಪಾವಮ್ ஏபாவம் = ಅಯ್ಯೋ ಪಾಪವೇ, ವೆಲ್ಲ ನೆಡಿಯಾನ್ வெல்லநெடியான் = ಅತ್ಯಂತ ಉನ್ನತನು (ಮಹೋನ್ನತ ಸ್ವಭಾವನು), ನಿಱಮ್ நிறம் =

ಬಣ್ಣದಲ್ಲಿ, ಕರಿಯಾನ್ கரியான் = ಕರಿಯನು, ಉಳ್ ಉಱ = ಅಂತರಂಗವನ್ನು, ಪುಕ್ಕು புகுந்து = ಪ್ರವೇಶಿಸಿ, ನೀಙ್ಗಾನ್ நீங்கான் = ಬಿಟ್ಟು ಹೋಗುವುದಿಲ್ಲ, ಅಡಿಯೋನದು அடியேனது = ದಾಸನಾದವನದು, ಉಳ್ಳತ್ತು ಅಗಮ್ உள்ளத்து அகம் = ಅಂತರಂಗದ ವಾಸಸ್ಥಾನವನ್ನು.

ಮುಗಿಲಿನ್ನ ಕರಿಯನು, ಬಣ್ಣದಲ್ಲಿ ಕರಿಯನು, ದಾಸನಾದವನ ಅಂತರಂಗವನ್ನು ಪ್ರವೇಶಿಸಿ ಆ ವಾಸಸ್ಥಳದಿಂದ ಬಿಟ್ಟು ಹೋಗುವುದಿಲ್ಲ. ಕಾರಣ, ನನಗೆ ಬೆಟ್ಟವೂ, ಭೋರ್ಗರೆಯುವ ಕಡಲೂ, ಶ್ರೀವೈಕುಂಠವೂ, ಮೇಲಣ ಲೋಕಗಳೂ — ಎಲ್ಲವೂ ಹುಲ್ಲಿಗೆ ಸಮನೆಂದು ಅವುಗಳನ್ನು ತೊರೆದುಬಿಟ್ಟೆ. (೬೮)
ಯಾಕೆ ಹೇಗೆ?

'ಕಲ್' ಎಂದರೆ, ಪರ್ವತ. ಭೂಲೋಕದಲ್ಲಿ ಭಗವಂತನು ಅರ್ಚಾಸ್ವರೂಪಿಯಾಗಿ ನೆಲೆಸಿರುವ ಸ್ಥಳಗಳಲ್ಲಿ ಬೆಟ್ಟದ ಶಿಖರ ಒಂದು. ತಿರುವೇಂಗಡಂ ಅದಕ್ಕೆ ಒಂದು ನಿದರ್ಶನ.

'ಕನ್ನಕಡಲು' ಎಂದರೆ, ಘೋಷಿಸುವ ಕಡಲು — ಹಾಲ್ಗಡಲು. ಭಗವಂತನು ವ್ಯೂಹಾವತಾರಿಯಾಗಿ, ಅನಂತಶಯನನಾಗಿರುವ ಸ್ಥಳ.

'ವಾನ್ ಉಲಗು' ಎಂದರೆ, ಸ್ವರ್ಗಾದಿ ಮೇಲಣ ಲೋಕಗಳು.

'ಉಳ್ಳತ್ತು ಅಗಮ್' ಎಂದರೆ, ಅಂತರಂಗದಲ್ಲಿ ಮನೆಮಾಡಿಕೊಂಡಿರುವುದು. (ಅಂತರಂಗದಲ್ಲಿ ಮನೆ). ಭಗವಂತನು ಚೇತನನ ಬಳಿಗೆ ಅವನಲ್ಲಿ ಆಸೆಯಾಗಿ ನೆಲಸಿದ್ದಾನೆ.

'ವಲ್ಲನೆಡಿಯಾನ್' ಎಂದರೆ, ಸರ್ವೇಶ್ವರನಾದ ಭಗವಂತ.

'ನಿಱಕ್ಕರಿಯಾನ್' ಎಂದರೆ, ಬಣ್ಣದಲ್ಲಿ ಕರಿಯಾನು — ಭಗವಂತನಿಗೆ ಒಂದೊಂದು ಯುಗದಲ್ಲಿ ಒಂದೊಂದು ಬಣ್ಣವನ್ನು ಕಲ್ಪಿಸಿ ಹೇಳಲಾಗಿದೆ. ಅದರಂತೆ, ಕಲಿಯುಗದಲ್ಲಿ ಭಗವಂತನು ಕರಿಯ ಬಣ್ಣದವನು ಎಂದು ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತನು ಭಕ್ತನ ಅಂತರಂಗವನ್ನು ಪ್ರವೇಶಿಸಿದ ಬಳಿಕ ಅವನು ಅಲ್ಲಿಯೇ ಸ್ಥಿರವಾಗಿ ನೆಲಸಿರುತ್ತಾನೆ. ಅಂಥ ಭಕ್ತನಿಗೆ ಬೇರೆ ಏನೂ ಬೇಕೆನಿಸುವುದೇ ಇಲ್ಲ. ತಿರುಮಲೆಗಳಾಗಲಿ, ಹಾಲ್ಗಡಲಾಗಲಿ, ಶ್ರೀವೈಕುಂಠವಾಗಲಿ — ಎಲ್ಲವೂ ತನ್ನ ಅಂತರಂಗವೇ ಆಗಿರುವಾಗ, ಅವನಿಗೆ ಬಿಡಿಬಿಡಿಯಾಗಿ ಅವುಗಳ ಅವಶ್ಯವೇನಿದೆ? ಸ್ವರ್ಗಾದಿ ಲೋಕಗಳ ಸುಖವೂ ಅವನಿಗೆ ಬೇಡ.

69. அகஞ்சிவந்த கண்ணினராய் வல்வினையராவார்,
முகஞ்சிதைவ ராமன்றே முக்கி, - மிகுந்திருமால்
சீர்க்கடலை யுள்பொதிந்த சிந்தனையேன் றன்னை,
ஆர்க்கடலாஞ் செவ்வே யடர்த்து?

ಅಹಂಜಿವನ್ದ ಕಣ್ಣಿನರಾಯ್ ವಲ್ ವಿನೈಯರ್ ಆವಾರ್,
ಮುಹಂಜಿದೈವರಾಮನ್ಱೇ ಮುಕ್ಕಿ - ಮಿಹುನ್ದಿರುಮಾಲ್
ಶೀರ್ ಕಡಲೈ ಯುಳ್ ಪೊದಿನ್ದ ಶಿನ್ದನೈಯೇನ್ ತನ್ನೈ,
ಆರ್ಕ್ಕಡಲಾಂ ಶೆವ್ವೇ ಯಡರ್ತ್ತು?

ಅಹಮ್ அகம் = ಅಂತಃಕರಣದಿಂದ, ಶಿವನ್ದ சிவந்த = ಕೆಂಪಾದಂಥ, ಕಣ್ಣಿಯರ್ ಆಯ್ கண்ணினர் ஆய் = ಕಣ್ಣುಳ್ಳವರಾಗಿ, ವಲ್ ವಿನೈಯರ್ வல்வினையர் = ಕ್ರೂರಪಾಪಕರ್ಮಗಳು, ಆವಾರ್ ஆவார் = ಆಗುತ್ತಾರೆ, ಮುಹಮ್ முகம் = ಮುಖವನ್ನ, ಶಿದೈವರ್ ಆಮ್ சிதைவர் ஆம். ನಿಜಗಾ ಬಾಧಿಸಿಕೊಳ್ಳುವರು, ಅನ್ಱೇ அன்றே = ಅಲ್ಲವೇ?, ಮುಕ್ಕಿ முக்கி = ವ್ಯಥೆಪಟ್ಟು, ಮಿಹುಮ್ மிகும் = ಬಹಳ, ತಿರು திரு = ಪವಿತ್ರನಾರುವ, [redacted] ಮಾಲ್ மால் = ಸರ್ವೇಶ್ವರನ, ಶೀರ್ சீர் = ಕಲ್ಯಾಣಗುಣಗಳೆಂಬ ಕಡಲೈ கடலை = ಕಡಲನ್ನು, ಉಳ್ உள் = ಮನಸ್ಸಿನಲ್ಲಿ, ಪೊದಿನ್ದ பொதிந்த = ತುಂಬಿಕೊಂಡಿರುವ, ಶಿನ್ದನೈಯೇನ್ ತನ್ನೈ சிந்தனையேன் தன்னை = ಚಿಂತನೆಯುಳ್ಳ ನನ್ನನ್ನು, ಆರ್ಕ್ಕು ஆர்க்கு = ಯಾರಿಂದ, ಅಡಲ್ ಆಮ್ அடல் ஆம் = ಜಯಿಸಲಾದೀತು, ಅಡರ್ತ್ತು அடர்த்து = ಅಡಗಿಸಿಕೊಂಡು, ಶೆವ್ವೇ செவ்வே = ಚೆನ್ನಾಗಿ, ಹಿಡಿದುಕೊಂಡು.

ಅಂತಃಕರಣದಿಂದ ಕೆಂಪಾದಂಥ ಕಣ್ಣುಳ್ಳವರಾಗಿ, ಮುಖವನ್ನು ನಿಜಗಾಗಿಯೂ ಬಾಧಿಸಿಕೊಂಡು, ವ್ಯಥೆಪಟ್ಟು ಕ್ರೂರಕರ್ಮಗಳು ಆಗುತ್ತಾರಲ್ಲವೇ? ಬಹಳ ಪವಿತ್ರನಾಗಿರುವ ಸರ್ವೇಶ್ವರನ ಕಲ್ಯಾಣಗುಣಗಳೆಂಬ ಕಡಲನ್ನು ಮನಸ್ಸಿನಲ್ಲಿ ತುಂಬಿಕೊಂಡಿರುವ ಮನಸ್ಸುಳ್ಳ ನನ್ನನ್ನು ಹಿಡಿದು ಅಡಗಿಸಿಕೊಂಡಿರುವ ಚಿಂತನೆಯನ್ನು ಹೊಂದಿ,
69
ಯಾರಿಂದ ಜಯಿಸಲು ಸಾಧ್ಯ?

ಆಳ್ವಾರರು ಹೇಳುತ್ತಾರೆ: ನಾನೀಗ ನನ್ನ ಮನಸ್ಸನ್ನು ಭಗವಂತನ ಗುಣಗಳ ಕಡೆ ಸ್ಥಿರವಾಗಿಸಿದ್ದೇನೆ. ಅಲ್ಲದೆ, ಭಗವಂತನ ಪವಿತ್ರವಾದ ಅನಂತ ಕಲ್ಯಾಣಗುಣಗಳೆಂಬ ಅಪಾರ ಕಡಲನ್ನು ನನ್ನ ಅಂತರಂಗದಲ್ಲಿ ತುಂಬಿಕೊಂಡಿದ್ದೇನೆ. ಅದನ್ನು ಪಡೆಬಂದಂತೆ ಚಿಂತಿಸುತ್ತಿರುತ್ತೇನೆ. ಆದ್ದರಿಂದ, ಯಾವ ಬಗೆಯ ಪಾಪಕರ್ಮಗಳೂ ಇನ್ನು ಮೇಲೆ ನನ್ನನ್ನು ಬಾಧಿಸಲಾರವು. ನನ್ನನ್ನು ಅವು ಜಯಿಸಲಾರವು.

ಮನಸ್ಸನ್ನು ನಿಗ್ರಹಿಸಿ, ಭಗವದ್ಗುಣಾನುಭವದಲ್ಲೇ ಮುಳುಗಿರುವ ಯಾರ ಬಳಿಯಲ್ಲೂ ಪಾಪಕರ್ಮಗಳು ಸುಳಿಯುವುದಿಲ್ಲ ಎಂದರ್ಥ.

70. அடர்பொன்முடியானை யாயிரம்பேரானைச்,
சுடர்கொள் சுடராழியானை, - இடர்கடியும்
மாதா பிதுவாக வைத்தேனெனதுள்ளே,
யாதாகில் யாதே யினி?

ಅದರ್ ಪೊನ್ ಮುಡಿಯಾನ್ನೈ ಆಯಿರವ ಪ್ಪೇರಾನ್ನೈ,
ಶುದರ್ ಕೊಳ್ ಶುದರಾಳಿಯಾನ್ನೈ, - ಇದರ್ ಕಡಿಯುಮ
ಮಾದಾ ಪಿದುವಾಹ ವೈತ್ತೇನ್ ಎನದುಳ್ಳೇ,
ಯಾದಾಗಿಲ್ ಯಾದೇ ಇನಿ?

ಅದರ್ ಪೊನ ಮುಡಿಯಾನ್ನೈ அடர் பொன்முடியானை = ರತ್ನಮಯವಾದ ಬಂಗಾರದ ಕಿರೀಟವನ್ನು ಧರಿಸಿರುವವನನ್ನು, ಆಯಿರವ ಪ್ಪೇರಾನ್ನೈ ஆயிரம் பேரானை = ಸಾವಿರ ಹೆಸರುಗಳುಳ್ಳವನನ್ನು, ಶುದರ್ ಕೊಳ್ சுடர்கொள் = ಪ್ರಜ್ವಲಿಸುವ, ಶುದರಾಳಿಯಾನ್ನೈ சுடராழியானை = ಚಕ್ರಾಯುಧಧಾರಿಯನ್ನು, ಇದರ್ இடர் = ದುಃಖ ಸಂಕಟಗಳನ್ನು, ಕಡಿಯುಮ கடியும் = ನಿರ್ಮೂಲಗೊಳಿಸುವ, ಮಾದಾ ಪಿದು ಆಹ மாதா பிதுவாக = ತಾಯಿ ತಂದೆ ಎಂದು, ವೈತ್ತೇನ್ வைத்தேன் = ಇಟ್ಟುಕೊಂಡಿದ್ದೇನೆ, ಎನದು ಉಳ್ಳೇ எனது உள்ளே = ನನ್ನ ಮನದಲ್ಲಿ, ಯಾದು ಆಗಿಲ್ ಯಾದೇ ಇನಿ யாதாகில் யாதே இனி = ಇನ್ನು ನನಗೆ ಏನಾದರೆ ಏನು?

ರತ್ನಮಯವಾದ ಚಿನ್ನದ ಕಿರೀಟವನ್ನು ಧರಿಸಿರುವವನನ್ನು, ಸಾವಿರ ಹೆಸರುಗಳನ್ನುಳ್ಳವನನ್ನು, ಪ್ರಜ್ವಲಿಸುವ ಚಕ್ರಾಯುಧವನ್ನು ಧರಿಸಿರುವವನನ್ನು, ದುಃಖಸಂಕಟಗಳನ್ನು ನಿರ್ಮೂಲಗೊಳಿಸುವ ತಾಯಿ ತಂದೆಯೆಂದು ನನ್ನ ಅಂತಃಕರಣದಲ್ಲಿ ಭಾವಿಸಿಕೊಂಡಿದ್ದೇನೆ. ಇನ್ನು ನನಗೆ ಏನಾದರೆ ಏನು? (70)

ಆಳ್ವಾರರು ಹೇಳುತ್ತಾರೆ: ಭಗವಂತ ಅಪ್ರತಿಮ ಸುಂದರ. ಅದಕ್ಕೆ ತಕ್ಕಂತೆ ದಿವ್ಯಾಲಂಕಾರ ಭೂಷಿತ. ಅವನಿಗೆ ಅನಂತನಾಮಗಳು - ಸುಪ್ರಸಿದ್ಧವಾದ ಸಾವಿರ ನಾಮಗಳು. ಅವನ ಸಾಮರ್ಥ್ಯ ಸಾಟಿಯಿಲ್ಲದ್ದು. ಕೈಯಲ್ಲಿ ತೀಕ್ಷ್ಣವಾದ ಪ್ರಜ್ವಲಿಸುವ ಚಕ್ರಾಯುಧವಿದೆ. ಅವನು ತಾಯಿಯಾಗಿ ನನ್ನನ್ನು ಪ್ರೇಮದಿಂದ ಪಾಲಿಸುತ್ತಾನೆ. ತಂದೆಯಾಗಿ ಶಿಕ್ಷಿಸಿ, ನನ್ನ ತಪ್ಪುಗಳನ್ನು ತಿದ್ದಿ, ನನ್ನನ್ನು ಸನ್ಮಾರ್ಗಕ್ಕೆ ತರುತ್ತಾನೆ. ಆದ್ದರಿಂದ, ಸ್ವಾಮಿಯನ್ನು ನನ್ನ ತಾಯಿ ತಂದೆ ಎಂದು ಭಾವಿಸಿಕೊಂಡಿದ್ದೇನೆ. ಅವನನ್ನು ನನ್ನ ಅಂತರಂಗದಲ್ಲಿ ಇಟ್ಟುಕೊಂಡಿದ್ದೇನೆ. ಇನ್ನು ಮುಂದೆ ನನಗೆ ದುಃಖ ಸಂಕಟಗಳ ಬಾಧೆಗೆ ಎಳ್ಳಷ್ಟೂ ಅವಕಾಶವಿಲ್ಲ.

71. இனிநின்று நின்பெருமை யானுரைப்ப தென்னே?
தனிநின்று சார்விலா மூர்த்தி!, - பனிநீர்
அகத்துலவு செஞ்சடையான் ஆகத்தான், நான்கு
முகத்தான் நின் உந்தி முகத்து.

ಇನಿನಿನ್ರು ನಿನ್ ಪೆರುಮೈ ಯಾನುರೈಪ್ಪದೆನ್ನೇ?
ತನಿನಿನ್ರು ಶಾರ್‌ವಿಲಾ ಮೂರ್‌ತ್ತಿ!, - ಪನಿನೀರ್
ಅಹತ್ತುಲವು ಶೆಂಜಡೈಯಾನ್ ಆಹತ್ತಾನ್, ನಾನ್ಗು
ಮುಹತ್ತಾನ್ [illegible]

ಇನಿ ನಿನ್ಱು = ಇನ್ನು, ನಿನ್ಱು ನಿನ್ಱು = ಬಯಸ್ಸಿ, (ಇನಿನಿನ್ಱು ನಿನ್
ಱು = ಹೇಗಿರುವಾಗ, ಇನ್ನು ಮೇಲೆ), ನಿನ್ ಪೆರುಮೈ ನಿನ್ ಪೆರುಮೈ = ನಿನ್ನ
ಹಿರಿಮೆಯನ್ನು, ಯಾನ್ ಯಾನ್ = ನಾನು, ಉರೈಪ್ಪದು ಎನ್ನೇ ಉರೈಪ್ಪದೆ (ಸಂಪೂರ್ಣವಾಗಿ),
ನ್ನೇ = ಹೇಳುವುದು ಏನಿದೆ, ತನಿ ತನಿ = ಪ್ರತ್ಯೇಕವಾಗಿ, ನಿನ್ಱ ನಿನ್
ಱ = ಇರುವವನೂ, ಸಾರ್ವು ಸಾರ್ = ನಿಲುಕಲು. ಇಲಾ ಇಲಾ = ಪ್ರಾಪ್ಯವಿಲ್ಲ
ದ (ಬೇರೆಯವರನ್ನು ಆಧಾರವಾಗಿಲ್ಲದವನೂ), ಆದ, ಮೂರ್ತ್ತಿ ಮೂರ್ತ್ತಿ = ದಿವ್ಯ
ಮಂಗಳವಿಗ್ರಹವೇ, ಪನಿನೀರ್ ಪನಿನೀರ್ = ತಂಪಾದ ಗಂಗಾಜಲವು, ಅಹತ್ತು
ಅಹತ್ತು = ಒಳಗೆ, ಉಲವು ಉಲವು = ಸಂಚರಿಸುವ, ಸೆಮ್ ಜಡೈಯಾನ್
ಸೆಞ್ ಸಡೈಯಾನ್ = ಕೆಂಜಡೆಯವನು, ಆಹತ್ತಾನ್ ಆಹತ್ತಾನ್ =
ದೇಹವನ್ನು ಉಳ್ಳವನೇ (ನಿನ್ನ ದೇಹದ ಭಾಗವಾಗಿರುವವನೇ), ನಾನ್ಮುಹ
ತ್ತಾನ್ ನಾನ್ಮುಹತ್ತಾನ್ = ನಾಲ್ಕುಮುಖನು, ನಿನ್ ನಿನ್ = ನಿನ್ನ,
ಉನ್ದಿ ಉನ್ದಿ = ನಾಭಿಯನ್ನು, ಮುದಲ್ ಮುದಲ್ = ಆದಿಕಾರಣವಾಗಿ ಉಳ್ಳ
ವನೇ.

ಪ್ರತ್ಯೇಕನಾಗಿಯೂ ಪರಿಪೂರ್ಣನಾಗಿಯೂ ಇರುವ ದಿವ್ಯಮೂರ್ತಿಯೇ, ತಂಪಾದ ಗಂಗಾಜಲವನ್ನು ಒಳಗೆ ಹಿಡಿದಿಟ್ಟಿರುವ ಕೆಂಜಡೆಯವನನ್ನು ನಿನ್ನ ದೇಹದಭಾಗವಾಗಿ ಉಳ್ಳವನೇ, ನಾಲ್ಕುಮುಖನು ನಿನ್ನ ನಾಭಿಯನ್ನೇ ~~ ~~ ಆದಿ ಕಾರಣವಾಗಿ (ಹುಟ್ಟಿದಸ್ಥಳವಾಗಿ) ಉಳ್ಳವನೇ, ಇನ್ನು ನಿನ್ನ ಹಿರಿಮೆಯನ್ನು (71)
ಹೇಳುವುದಾದರೂ ಏನಿದೆ?

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀನು ಯಾರ ಆಧಾರವನ್ನೂ ಬಯಸದೆ ಪ್ರತ್ಯೇಕನಾಗಿಯೂ, ಎಲ್ಲರಿಗೂ ಮೇಲ್ಪಟ್ಟವನಾಗಿದ್ದೀ. ನೀನು ಪರಿಪೂರ್ಣನು. ದಿವ್ಯಸುಂದರಮೂರ್ತಿ. ಗಂಗೆಯನ್ನು ತನ್ನ ಕೆಂಜಡೆಯಲ್ಲಿ ಧರಿಸಿರುವ ಶಿವನಿಗೆ ನಿನ್ನ ದೇಹದ ಒಂದು ಭಾಗವನ್ನು ನೀಡಿದ್ದೀ. ನಿನ್ನ ನಾಭಿಯನ್ನು ನಾಲ್ಕುಮುಖನ ಹುಟ್ಟಿದ ಸ್ಥಳವನ್ನಾಗಿ (ಅದಕ್ಕೆ ಆಧಾರವಾಗಿ) ಮಾಡಿದ್ದೀ. ಹೀಗಿರುವಲ್ಲಿ, ನಿನ್ನ ಹಿರಿಮೆಯನ್ನು ಸಂಪೂರ್ಣವಾಗಿ ಹೇಳಲು ನಾನೆಷ್ಟರವನು?

72. முதலாந் திருவுருவம் மூன்றென்பர், ஒன்றே
முதலாகும் மூன்றுக்கு மென்பர், — முதல்வா!
நிகரிலகு காருருவா! நின்னகத்த தன்றே?,
புகரிலகு தாமரையின் பூ.

ಮುದಲಾನ್ತಿರುವುರುವಮ್ ಮೂನ್ಱೆನ್ಬರ್, ಒನ್ಱೇ
ಮುದಲಾಹುಮ್ ಮೂನ್ಱುಕ್ಕು ಮೆನ್ಬರ್, — ಮುದಲ್ವಾ!
ನಿಹರಿಲಹು ಕಾರುರುವಾ! ನಿನ್ನಹತ್ತ ದನ್ಱೇ?,
ಪುಹರಿಲಹು ತಾಮರೈಯಿನ್ ಪೂ?

ಮುದಲ್ ಆಮ್ முதலாம் = ಪ್ರಾರಂಭದಲ್ಲಿ ಆಗಿರುವ, ತಿರುಉರುವಮ್
திரு உருவம் = ಪವಿತ್ರವಾದ ರೂಪಗಳು, ಮೂನ್ರು மூன்று = ಮೂರು,
ಎನ್ಬರ್ என்பர் = ಎನ್ನುತ್ತಾರೆ, ಒನ್ರೇ ஒன்றே = ಒಂದೇ, ಮುದಲ್
ಆಕುಮ್ முதலாகும் = ಮೊದಲಾಗುತ್ತದೆ, ಮೂನ್ರುಕ್ಕುಮ್ மூன்றுக்கும் = ಮೂರು
ರೂಪಗಳಿಗೆ, ಎನ್ಬರ್ என்பர் = ಎನ್ನುತ್ತಾರೆ, ಮುದಲ್ವಾ முதல்வா = ಎಲ್ಲಕ್ಕೂ
ಆದಿಕಾರಣನಾದವನೇ, ~~[struck]~~ ನಿಹರ್ நிகர் = ಸಾಮ್ಯವನ್ನು,
ಇಲಹು இலகு = ಬೆಳಗುವ, ಕಾರ್ ಉರುವಾ காருருவா = ಕಾರ್ಮುಗಿ
ಲ ಸ್ವರೂಪನೇ, ನಿನ್ ಅಹತ್ತು ಅನ್ರೇ நின் அகத்து அன்றோ =
ನಿನ್ನ ದೇಹದ್ದು ಅಲ್ಲವೇ, ಪುಹರ್ புகர் = ಶೋಭೆಯನ್ನು (ಕಳೆಯನ್ನು), ಇಲಹು
இலகு = ಬೆಳಗುವ, ತಾಮರೈಯಿನ್ ಪೂ தாமரையின் பூ = ತಾವರೆಯ
ಹೂವು?

ಮೊದಲಲ್ಲಿ ಆಗಿರುವ ದಿವ್ಯಮೂರ್ತಿಗಳು ಮೂರು ಎನ್ನುತ್ತಾರೆ. ಒಂದೇ ಮೂರು ರೂಪಗಳಾಗುತ್ತವೆ ಎನ್ನುತ್ತಾರೆ.
ಮೂರಕ್ಕೆ ~~ಮೊದಲಾಗಿ~~ ಮೊದಲು, ಕಾರ್ಮುಗಿಲ ಸ್ವರೂಪನೇ,
ಎಲ್ಲಕ್ಕೂ ಆದಿಕಾರಣನೇ, ಸಾಮ್ಯವನ್ನು ಬೆಳಗುವ ಕಮಲದ ಹೂವು ನಿನ್ನ ದೇಹದ್ದೇ ಅಲ್ಲವೇ!
ಶೋಭೆಗಳನ್ನು (ಕಳೆಯನ್ನು) ಬೆಳಗುವ ಕಮಲದ ಹೂವು (72)

ಇಲ್ಲಿ ಶ್ರೀಮನ್ನಾರಾಯಣನ ಸರ್ವೇಶ್ವರತ್ವವನ್ನು (ಪಾರಮ್ಯವನ್ನು) ಪ್ರತಿಪಾದಿಸಲಾಗುತ್ತದೆ.

ಎಲ್ಲಕ್ಕೂ ಆದಿಕಾರಣನಾದವನು ಒಬ್ಬನೇ. ಅವನೇ ಸರ್ವೇಶ್ವರನಾದ ಶ್ರೀಮನ್ನಾರಾಯಣ. ಅವನಿಂದಲೇ ಬ್ರಹ್ಮ, ವಿಷ್ಣು, ಶಿವ ಎಂಬ ಮೂರು ರೂಪಗಳಾದವು. ಕಾರ್ಮುಗಿಲು ಹೋಲಿಕೆಯುಳ್ಳ ~~[struck]~~ ಅವನ ರೂಪ. ~~[struck]~~ ಅವನ ನಾಭಿಯಿಂದಲೇ ಕಮಲದ ಹೂ ಬಂದದ್ದು. ಅದರಲ್ಲಿ ನಾಲ್ಮುಖನು ಹುಟ್ಟಿದ್ದು —

ಆಳ್ವಾರರು ಹೇಳುತ್ತಾರೆ: ಎಲ್ಲಕ್ಕೂ ಆದಿಕಾರಣನು ನೀನೇ. 'ಮೊದಲು ಮೂರು ದಿವ್ಯಮೂರ್ತಿಗಳಾದವು' ಎಂದು ಕೆಲವರು ಹೇಳುತ್ತಾರೆ. '~~ಮೊದಲು~~ ಒಂದೇ ಮೊದಲಾಗಿ, ಅದು ಮೂರು ಮೂರ್ತಿಗಳಾದವು' ಎಂದು ಮತ್ತೆ ಕೆಲವರು ಹೇಳುತ್ತಾರೆ. ಕಾರ್ಮುಗಿಲಿಗೆ ಸರಿಸಾಟಿಯಾಗಿರುವ ಸ್ವರೂಪವುಳ್ಳವನೇ. ನಿನ್ನ ದಿವ್ಯನಾಭಿಯಿಂದಲೇ ಅಲ್ಲವೇ ಶೋಭಿಸುವ ಕಮಲದ ಹೂ ಬಂದದ್ದು?

73. பூவையும் காயாவும் நீலமும் பூக்கின்ற,
காவிமல ரென்றுங் காண்டோறும் – பாவியேன்
மெல்லாவி மெய்மிகவே பூரிக்கும், அவ்வவை
யெல்லாம் பிரானுருவே யென்று.

ಪೂವೈಯುಮ್ ಕಾಯಾವುಮ್ ನೀಲಮುಮ್ ಪೂಕ್ಕಿನ್ರ,
ಕಾವಿಮಲರೆನ್ರುಙ್ ಕಾಣ್ಡೋರುಮ್ – ಪಾವಿಯೇನ್
ಮೆಲ್ಲಾವಿ ಮೆಯ್ಮಿಹವೇ ಪೂರಿಕ್ಕುಮ್, ಅವ್ವವೈ
ಯೆಲ್ಲಾಮ್ ಪಿರಾನುರುವೇ ಯೆನ್ರು.

Garani Srinivasan

ಪೂವೈಯುಮ ಪூவையும் = ಕೋಗಿಲೆಯನ್ನು, ಕಾಯಾವುಮ காயாவும் = ಅಗಸೆಹೂವನ್ನು, ನೀಲಮುಮ நீலமும் = ನೀಲಕಮಲವನ್ನು, ಪೂಕ್ಕಿನ್ರ பூக்கின்ற = ಅರಳುತ್ತಿರುವ, ಕಾವಿಮಲರ್ காவி மலர் = ಕನ್ನೈದಿಲೆಯನ್ನು, ಎನ್ರುಮ ಎನ್ರುಮ் = ಯಾವಾಗ ಯಾವಾಗ, ಕಾಣ್‌ತೋರುಮ காண்தோறும் = ನೋಡಿದಾಗಲೂ, ಪಾವಿಯೇನ್ பாவியேன் = ಪಾಪಿಯಾದ ನಾನು, ಮೆಲ್ ಆವಿ மெல் ஆவி = ಮೆತ್ತನೆಯ ಉಸಿರನ್ನು, ಮೆಯ್ மெய் = ಮೈಯು, ಪೂರಿಕ್ಕುಮ பூரிக்கும் = ತುಂಬುತ್ತದೆ (ಬೆಳೆಯುತ್ತದೆ), ಅವ್ ಅವೈ அவ்வவை = ಅವುಗಳು, ಎಲ್ಲಾಮ எல்லாம் = ಎಲ್ಲವೂ, ಪಿರಾನ್ ಉರುವೇ ಎನ್ರು பிரான் உருவே என்று = ಭಗವಂತನ ರೂಪವೇ ಎಂದು.

ಕೋಗಿಲೆಯನ್ನು, ಅಗಸೆಹೂವನ್ನು, ನೀಲಕಮಲವನ್ನು, ಅರಳುತ್ತಿರುವ ಕನ್ನೈದಿಲೆಯನ್ನು ಪಾಪಿಯಾದ ನಾನು ನೋಡಿದಾಗಲೆಲ್ಲಾ ನನ್ನ ಮೈಯು ಮೆತ್ತನೆಯ ಉಸಿರು ತುಂಬಿ ಬರುತ್ತದೆ. ಅವುಗಳೆಲ್ಲವೂ ಭಗವಂತನ ರೂಪಗಳೇ ಎಂದು. (73)

ಕೋಗಿಲೆಯ ಬಣ್ಣ ಕಪ್ಪು. ಅಗಸೆಹೂವಿನ ಬಣ್ಣ ಆಕಾಶದ ನೀಲಿ, ನೀಲಕಮಲ/ನೈದಿಲೆ ಬಣ್ಣ. ಕನ್ನೈದಿಲೆ ಕಪ್ಪು ನೀಲಿ ಮಿಶ್ರಣ — ಇವೆಲ್ಲ ಬಣ್ಣಗಳು ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸುತ್ತವೆ.

ಆಳ್ವಾರರು ಹೇಳುತ್ತಾರೆ: ಕೋಗಿಲೆ, ಅಗಸೆಹೂ, ನೀಲಕಮಲ (ನೈದಿಲೆ), ಕನ್ನೈದಿಲೆ — ಈ ವಸ್ತುಗಳ ಬಣ್ಣ ಭಗವಂತನ ಬಣ್ಣವನ್ನು ಹೋಲುವುದರಿಂದ ನನಗೆ ಪ್ರಿಯವಾದವು. ಪಾಪಿಯಾದ ನನಗೆ ಸ್ವಾಮಿಯ ವಸ್ತುಗಳನ್ನು ನಾನು ನೋಡಿದಾಗಲೆಲ್ಲಾ ಆನಂದಗಳು ಕಣ್ಣೀರು, ಉಸಿರು ಪ್ರೀತಿಯೂ ತುಂಬಿ ಬರುತ್ತದೆ. ನನಗೆ ಆಶ್ಚರ್ಯಕರ ರೀತಿ ಜನಿಸಿದೆ. ಕಣ್ಣಾ, ಮನಸ್ಸು ಭಗವಂತನ ನೆನಪನ್ನು ತರುತ್ತವೆ. ಸೃಷ್ಟಿಯ ನಾನಾ ವಸ್ತುಗಳು ಭಗವಂತನ ನೆನಪನ್ನು ಮಾಡಿ ಮನಸ್ಸನ್ನು ಕರಗಿಸುತ್ತವೆ. ಇದ್ದವರಿಗೆ ಮಾತ್ರ ಅವು ಶಮ್ಮ ಕಲಿಸುವವು.

74\. என்று மொருநா ளொழியாமை யானிரந்தால்,
ஒன்று மிரங்கா துருக்காட்டான்,— குன்று
குடையாக ஆகாத்த கோவலனார், நெஞ்சே!
புடைதான் பெரிதே புவி.

ಎನ್ರು ಮೊರುನಾಳೊೞಿಯಾಮೈ ಯಾನಿರನ್ದಾಲ್,
ಒನ್ರು ಮಿರಙ್ಗಾ ದುರುಕ್ಕಾಟ್ಟಾನ್,— ಕುನ್ರು
ಕುಡೈಯಾಕ ಆಕಾತ್ತ ಕೋವಲನಾರ್, ನೆಞ್ಜೇ!
ಪುಡೈತಾನ್ ಪೆರಿದೇ ಪುವಿ.

ಎನ್ರುಮ ಎನ್ರುಮ் = ಯಾವಾಗಲೂ, ಒರುನಾಳ್ ಒೞಿಯಾಮೈ ஒருநாள் = ಒಂದು ದಿನವೂ ತಪ್ಪದೆ (ಬಿಡದೆ), ಯಾನ್ யான் = ನಾನ್ ஒழியாமை = ನಾನು, ಇರನ್ದಾಲ್ இரந்தால் = ಬೇಡಿದರೆ, (ಬೇಡಿಕೊಂಡರೂ), ಒನ್ರುಮ ನಾನು, ಇರಙ್ಗಾರ್ இரங்கார் = ಕರುಣಿಸರು, ಉರು ஒன்றும் = ಸ್ವಲ್ಪವೂ, ಇರಙ್ಗಾರ್ இரங்கார் = ಕರುಣಿಸರು, ಉರು ಕಾಟ್ಟಾರ್ உருகாட்டார் = ತಮ್ಮ ರೂಪವನ್ನು ತೋರಿಸರು, ಕುನ್ರು குன்று = ಬೆಟ್ಟವನ್ನು, ಕುಡೈ ಆಗ குடை ஆக = ಕೊಡೆಯಾಗಿ ಹಿಡಿದು,

Garani Srinivasan

ಆ ಕಾತ್ತ ಆಯರ್ಕ್ಕು = ಆಕಳನ್ನು ಕಾಪಾಡಿದ, ಕೋವಲನಾರ್ ಕೋಯಿಲಕ್ಕು
ಗ್ = ಗೋವಳನು, ನೆಂಜೇ ಎನಕ್ಕೇ = ಮನಸ್ಸೇ, ಪುಕ್ಕೆ ಕಾನ್ ಪುಡೈ ಸೂಳ
ಣ = ಭಾಗ್ಯಶಾಲೀ, ಪೆರಿದೇ ಉನಕ್ಕು = ದೊಡ್ಡದೇ ಅಲ್ಲವೇ, ಪುಣ್ಣಿಯಂ =
ಭಾಗ್ಯವಯು.

ಮನಸ್ಸೇ, ಒಂದು ದಿನವೂ ತಪ್ಪದಂತೆ ನಾನು ಪ್ರಾರ್ಥಿಸಿದರೂ, ಬೆಟ್ಟವನ್ನೇ ಕೊಡೆಯಾಗಿ ಹಿಡಿದು ದನಕರುಗಳನ್ನು ರಕ್ಷಿಸಿದ ಗೋವಳನು ಸ್ವಪ್ನವೂ ಕರುಣಿಸನು. ತನ್ನ ರೂಪವನ್ನು ತೋರನು. ಭಾಗ್ಯವಯು ಬಲು ದೊಡ್ಡ ಭಾಗ್ಯ 74
ಅಲ್ಲವೇ?

ಭಗವಂತನ ಬಣ್ಣವನ್ನು ಹೋಲುವ ಯಾವ ವಸ್ತುವನ್ನು ನೋಡಿದರೂ ಭಗವಂತನ ನೆನಪು ಬರುವಷ್ಟು ನನ್ನ ಮನಸ್ಸು ಹದಗೊಂಡಿದೆ ~~ಯಾ~~ ~~ನನಗೆ ಒದಗಿ ಬರಲಿಲ್ಲ ಎಂದು~~ ಮತ್ತು ~~ಅದರಿಂದ ಒಳ್ಳೆಯ ಫಲ ದೊರಕಿದ~~ ಅವನನ್ನು ಕಣ್ಣಾರ ಕಾಣಬೇಕೆಂಬ ಆಸೆ ಬೆಳೆಯುತ್ತದೆ ಎಂದು ಒಂದಿನಾ ... ನನಗೆ ಒದಗಿ ಬರಲಿಲ್ಲ ಕುರಿತ ವಿಷಯ. ಅದರಿಂದ ಒಳ್ಳೆಯ ಫಲ ದೊರಕಿತ ... ಈ ಪಾಶುರ ವ್ಯಕ್ತಪಡಿಸುತ್ತದೆ.
ವಲ್ಲ ಎಂಬ ವ್ಯಕ್ತಿಯನ್ನು

"ಕುನ್ರಾಯ್ ಕುಡೈ ಆ ಕಾತ್ತ ಕೋವಲನಾರ್" — ಭಗವಂತನ ಶ್ರೀಕೃಷ್ಣಾವತಾರದ ಒಂದು ಪ್ರಸಂಗವನ್ನು ಇಲ್ಲಿ ಹೇಳಲಾಗುತ್ತದೆ. ನಂದ ಗೋಕುಲದ ಗೋವಳರು ವರ್ಷಕ್ಕೊಮ್ಮೆ ದೇವೇಂದ್ರ ಪೂಜೆಯನ್ನು ಮಾಡಿ, ಹೊತ್ತ ಎಡೆಯನ್ನು ಅವನಿಗೆ ಸಲ್ಲಿಸುತ್ತಿದ್ದ ವಾಡಿಕೆಯುಂಟು. ಒಂದು ಸಲ ಬಾಲಕೃಷ್ಣನು ಗೋಕುಲದ ಹಿರಿಯರನ್ನು ಕಂಡು, ದೇವೇಂದ್ರನನ್ನು ಪೂಜಿಸುವುದು ವ್ಯರ್ಥವೆಂದೂ, ಮಗ್ಗುಲಲ್ಲಿರುವ ಗೋವರ್ಧನಗಿರಿಯಿಂದಲೇ ನಮ್ಮ ಗಿರಿಗೆ ಮಳೆ ಬಂದು, ದನಕರುಗಳಿಗೆ ಹುಲ್ಲು ಮೇವು ಸಿಕ್ಕುವುದರಿಂದ ಹೇಳುತ್ತಾ, ಗೋವರ್ಧನಗಿರಿಯ ಪೂಜೆಯನ್ನೇ ನಡೆಸಬೇಕೆಂದು ಒಪ್ಪಿಸಿದನು. ಅಂತೆಯೇ ಪೂಜೆಯೂ ನಡೆಯಿತು, ಎಡೆಯೂ ಸಲ್ಲಿಸಲಾಯಿತು. ಇದನ್ನು ಕಂಡು ದೇವೇಂದ್ರನಿಗೆ ಕೋಪ ಬಂತು. ಇದರಿಂದ ನಂದಗೋಕುಲವನ್ನೇ ನಾಶಮಾಡಿಬಿಡುವುದಾಗಿ, ಏಳು ದಿನಗಳ ಕಾಲ ಬಿಡದೆ ಬಿರುಮಳೆಯನ್ನು ನಂದಗೋಕುಲದ ಮೇಲೆ ಸುರಿಸಿದನು. ಆಗ, ಬಾಲಕೃಷ್ಣನು ಈ ಗೋವರ್ಧನಗಿರಿಯನ್ನೇ ಎತ್ತಿ ಕೊಡೆಯಂತೆ ಹಿಡಿದನು. ಅದರಡಿಯಲ್ಲಿ ಗೋಕುಲದ ದನಕರುಗಳನ್ನೂ ಗೋವಳರನ್ನೂ ರಕ್ಷಿಸಿದನು. ಇದು ಕತೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ನಾನು ಒಂದು ದಿನವೂ ತಪ್ಪದಂತೆ ಭಗವಂತನನ್ನು ಎಷ್ಟು ಶ್ರದ್ಧೆಯಿಂದ ಬೇಡಿಕೊಂಡರೂ ನನ್ನಲ್ಲಿ ಅವನಿಗೆ ಕರುಣೆಯಿಲ್ಲ, ನನಗೆ ತನ್ನ ದಿವ್ಯರೂಪವನ್ನು ತೋರಿಸನು. ಹಿಂದೆ, ಗೋವರ್ಧನ ಪರ್ವತವನ್ನೇ ಎತ್ತಿ ಕೊಡೆಯಂತೆ ಹಿಡಿದು ಅದರಡಿಯಲ್ಲಿ ದನಕರುಗಳನ್ನು ರಕ್ಷಿಸಿದ ಕರುಣಾಮೂರ್ತಿಗೆ ನನ್ನ ಮೇಲೆ ಕನಿಕರವುಂಟಾಗಲಿಲ್ಲ!

ಈ ಭೂಮಂಡಲ ಆಚ್ಛಾದಿತಂಗಳು ಬಲು ದೊಡ್ಡ ಭಾಗವಲ್ಲವೇ? ಅದರ ಹ್ಲ ಸಾಮರ್ಥ್ಯರವನು? ~~ನನ್ನನ್ನ~~ ಅಲ್ಪನೂ ಪಾಪಿಯೂ ಆದ ನನ್ನನ್ನು ಅರವನು ಶಕ್ತಿ ನೋಡದ್ದು ವಿಷಯವೇ ಅಲ್ಲವೇ?

75. புவியு மிரு விசும்பும் நின்னகத்த, நீயென்
செவியின் வழிபுகுந்தென் னுள்ளாய் — அவி வின்றி,
யான் பெரியன் நீ பெரியை யென்பதனை யாரறிவார்?
ஊன் பருகு நேமியாய்! உள்ளு.

ಪುವಿಯು ಮಿರು ವಿಶುಮ್ಬುಮ್ ನಿನ್ನಗತ್ತ, ನೀಯೆನ್
ಶೆವಿಯಿನ್ ವಳಿಪುಗುನ್ದೆನ್ನುಳ್ಳಾಯ್ — ಅವಿವಿನ್ರಿ,
ಯಾನ್ ಪೆರಿಯನ್ ನೀ ಪೆರಿಯೈ ಯೆನ್ಬದನೈ ಯಾರರಿವಾರ್?
ಊನ್ ಪರುಗು ನೇಮಿಯಾಯ್! ಉಳ್ಳು.

ಪುವಿಯುಮ್ புவியும் = ಭೂಮಂಡಲವೂ, ಇರು ವಿಶುಮ್ಬುಮ್ இரு விசும்பும் = ವಿಸ್ತಾರವಾದ ಮೇಲಣ ಲೋಕಗಳೂ, ನಿನ್ நின் = ನಿನ್ನ, ಅಗತ್ತ அகத்த = ದೇಹದಲ್ಲಿವೆ, (ಅಡಗಿವೆ), ನೀ நீ = ನೀನು, ಎನ್ என் = ನನ್ನ, ಶೆವಿಯಿನ್ செவியின் = ಕಿವಿಯ, ವಳಿ வழி = ಮೂಲಕ, ಪುಗುನ್ದು புகுந்து = ಒಳಹೊಕ್ಕು, ಎನ್ என் = ನನ್ನ, ಉಳ್ಳಾಯ್ உள்ளாய் = ಅಂತರಂಗದಲ್ಲಿರುವೆ, ಅವಿವು அவிவு = ಅಗಲಿಕೆ, ಇನ್ರಿ இன்றி = ಇಲ್ಲದಂತೆ, ಯಾನ್ யான் = ನಾನು, ಪೆರಿಯನ್ பெரியன் = ದೊಡ್ಡವನು, ನೀ நீ = ನೀನು, ಪೆರಿಯೈ பெரியை = ದೊಡ್ಡವನು, ಎನ್ಬದನೈ என்பதனை = ಎಂಬುದನ್ನು, ಯಾರ್ ಅರಿವಾರ್ யார் அறிவார் = ಯಾರು ಅರಿಯಬಲ್ಲರು? ಊನ್ ஊன் = ಮಾಂಸವನ್ನ, ಪರುಗು பருகு = ತಿಂದುಹಾಕುವ, ನೇಮಿಯಾಯ್ நேமியாய் = ಚಕ್ರಾಯುಧವುಳ್ಳವನೇ, ಉಳ್ಳು உள்ளு = (ನೀನೇ) ಯೋಚಿಸಿ ನೋಡು.

ಭೂಮಂಡಲ~~ವೂ~~ ವಿಸ್ತಾರವಾದ ಮೇಲಣ ಲೋಕಗಳೂ ನಿನ್ನ ದೇಹದಲ್ಲಿ ಅಡಗಿವೆ. ನೀನು ನನ್ನ ಕಿವಿಯ ಮೂಲಕ ಒಳಹೊಕ್ಕು ನನ್ನ ಅಂತರಂಗದಲ್ಲಿ ಅಗಲಿಕೆಯಿಲ್ಲದಂತೆ ಇದ್ದೀ. ನಾನು ದೊಡ್ಡವನೋ, ನೀನು ದೊಡ್ಡವನೋ ಯಾರು ಅರಿಯಬಲ್ಲರು? ರಕ್ತ ಮಾಂಸಗಳನ್ನು ತಿಂದುಹಾಕುವ (ನುಂಗುವ) ಚಕ್ರಾಯುಧವುಳ್ಳವನೇ (ನೀನೇ) ಯೋಚಿಸಿ ನೋಡು. (75)

ಭಾಗವತ ಶ್ರೇಷ್ಠರುಗಳು ದೊಡ್ಡವರು. ಮತ್ತು, ಅನಾಮಧೇಯ ಅದಾದಾಗ (ಚಿಕ್ಕವನಾ) ಇರತಕ್ಕವನು — ಎಂಬುದನ್ನು ಇಲ್ಲಿ ಸ್ಥಾಪನ್ಯ ಮಾಡಿದ್ದಾರೆ ದೇಳ ಬಹುದು.

'ಊನ್ ಪರುಗು ನೇಮಿಯಾಯ್' — ಭಾಗವತದ್ವೇಷಿಗಳ, ಭಾಗವತರಂತೆ

Garani Srinivasan

ಶಿರ ರಕ್ತ (ಮಜ್ಜೆ) ಮೊದಲಾದವುಗಳನ್ನು ಹರಿದು ಬಿಟ್ಟುದುದು ಅತಿ ಕಷ್ಟವಾದ ಮಹಾ ಪ್ರಬಲವಾದ ಬಯ್ಕೆಯು ದ್ವಾರೆ ಭಗವಂತನ ಕೈಯುಳ್ಳಿರುವ ಚಕ್ರಾಯುಧ.

ಆಳ್ವಾರರು ಹೇಳುತ್ತಾರೆ: ಮಹಾ ಶಕ್ತಿ ಪ್ರಾಣವಾದ ಚಕ್ರಾಯುಧ ಧಾರಣೆ, ಇಡಿಯ ಬ್ರಹ್ಮಾಂಡದಲ್ಲಿ ನಿನ್ನ ಹೋಲುವುದಿಲ್ಲ ಅಡಗಿದೆ. ನನ್ನ (ಪ್ರತಿಬೋಧನೆ) ಕಳೆಯು ಮೂಲಕ ಬಿಟ್ಟುಹೋಗದೆ ನನ್ನ ಅಂತರಂಗದಲ್ಲಿ ಅಡಗಿದಂತೆ ನೆಲೆಸಿರುವೆ. ಹೀಗಿರುವಾಗ ನಾನು ದೊಡ್ಡವನೋ, ನೀನು ದೊಡ್ಡವನೋ ನೀನೇ ಯೋಚಿಸಿ ನೋಡು.

76. உள்ளில் உள்ளாந்து குடிக்கும், விதிப்படலம்
விள்ள விழித்துன்னை மெய்யுற்றால், – உள்ள
உலகளவும் யானும் உளனாவன் கொலோ?,
உலகளந்த மூர்த்தி! உரை.

ಉಳ್ಳಿಲು ಮುಳ್ಳನ್ತುಡಿಕ್ಕುಮ್, ವಿನ್ಪ್ಪಡಲಮ್
ವಿಳ್ಳ ವಿೞಿತ್ತುನ್ನೈ ಮೆಯ್ಯುಟ್ರಾಲ್, – ಉಳ್ಳ
ಉಲಹಳವುಮ್ ಯಾನು ಮುಳನಾವ ನೆನ್ಕೊಲೋ?,
ಉಲಹಳನ್ದ ಮೂರ್ತ್ತಿ! ಯುರೈ.

ಉಳ್ಳಿಲ್ உள்ளில் = ಚಿಂತಿಸಿದ ಮಾತ್ರಕ್ಕೇ, ಉಳ್ಳಮ್ உள்ளம் = ನನ್ನ ಮನಸ್ಸು, ತಡಿಕ್ಕುಮ್ குடிக்கும் = ಸಂತೋಷದಿಂದ ಉಬ್ಬುತ್ತದೆ, ವಿನ್ಪೈ வினை = ಪಾಪಗಳ, ಪಡಲಮ್ படலம் = ಸಮೂಹವು, ವಿಳ್ಳ விள்ள = ನಾಶವಾಗುವಂತೆ, ವಿೞಿತ್ತು விழித்து = (ನಿನ್ನಿಂದ ನಾನು) ಕಟಾಕ್ಷಿಸಲ್ಪಟ್ಟು, ಉನ್ನೈ உன்னை = ನಿನ್ನನ್ನು, ಮೆಯ್ மெய் = ವಾಸ್ತವವಾಗಿ, ಉಟ್ರಾಲ್ உற்றால் = ಪಡೆಯುವಂತಾದರೆ, ಉಳ್ಳ உள்ள = (ನೀನು) ವ್ಯಾಪಿಸಿರುವ, (ನಿನ್ನಲ್ಲಿರುವ), ಉಲಹು ಅಳವುಮ್ உலகு அளவும் = ಲೋಕವೆಲ್ಲವೂ, ಯಾನುಮ್ யானும் = ನಾನೂ ಸಹ, ಉಳನ್ உளன் = ಇರುವವನು, ಆವನ್ ಆಯ ... ಎನ್ಕೊಲೋ என் கொலோ = ಏನೋ ಅಲ್ಲವೇ? ... ಉಲಹು ಅಳನ್ದ ಮೂರ್ತ್ತಿ உலகு அளந்த மூர்த்தி = ಲೋಕಗಳನ್ನು ಅಳೆದುಕೊಂಡ ಮೂರ್ತಿಯೇ, ಉರೈ உரை = ಹೇಳು.

ನಿನ್ನನ್ನು ಚಿಂತಿಸಿದ ಮಾತ್ರಕ್ಕೇ ನನ್ನ ಮನಸ್ಸು ಸಂತೋಷದಿಂದ ಉಬ್ಬಿ ಹೋಗುತ್ತದೆ. ಪಾಪಗಳ ರಾಶಿಯೆಲ್ಲವೂ ನಾಶವಾಗುವಂತೆ ನೀನು ನನ್ನನ್ನು ಕಟಾಕ್ಷಿಸಿದರೆ, ನಿನ್ನನ್ನು ವಾಸ್ತವವಾಗಿ ನಾನು ಪಡೆಯುವಂತಾದರೆ, ನಿನ್ನಲ್ಲಿರುವ ಲೋಕದೊಡನೆ ನಾನೂ ಸಹ ಇರುವವನಾಗುತ್ತೇನಲ್ಲವೇ? ಲೋಕಗಳನ್ನಳೆದುಕೊಂಡ ಮೂರ್ತಿಯೇ, ಹೇಳು.

'ನೀನು ದೊಡ್ಡವನೋ, ನಾನು ದೊಡ್ಡವನೋ' ಎಂದು ಹಿಂದಿನ ಪಾಶುರದಲ್ಲಿ ಭಗವಂತನನ್ನು ಪ್ರಶ್ನಿಸಲಾಯಿತು. ಈ ಪಾಶುರದಲ್ಲಿ ಭಗವಂತನ ಹಿರಿಮೆಯನ್ನೇ
ಒಪ್ಪಿಕೊಳ್ಳ [illegible]

GaraniSrinivasan

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀನು ತ್ರಿವಿಕ್ರಮನಾಗಿ ಬೆಳೆದು ಎಲ್ಲಾ ಲೋಕಗಳನ್ನು ಅಳೆದು, ಅವುಗಳನ್ನು ನಿನ್ನ ಎರಡೇ ಹೆಜ್ಜೆಗಳಲ್ಲಿ ಅಳೆದುಕೊಂಡವನು. ನಿನ್ನ ಆ ರೂಪವನ್ನು ಮನಸ್ಸಿಗೆ ತಂದುಕೊಂಡಾಗಲೇ ನನ್ನ ಮನಸ್ಸು ಸಂತೋಷವಾದ ಉಬ್ಬರಗೊಳ್ಳುತ್ತದೆ. ನಿನ್ನ ಕಟಾಕ್ಷವೊಂದಿದ್ದರೆ, ನನ್ನ ಪಾಪಗಳೆಲ್ಲವೂ ನಾಶವಾಗುತ್ತವೆ. ನಾನೂ ಸಹ ನಿನ್ನನ್ನು ಪಡೆದುಕೊಳ್ಳುವಂತಾಗುತ್ತದೆ. ಆಗ, ನಿನ್ನಲ್ಲಿ ಅಡಗಿರುವ ಎಲ್ಲಾ ಲೋಕಗಳು, ಜನ ನಾನೂ ಹೇಳಿಕೊಳ್ಳುತ್ತೇನಲ್ಲವೇ?

77. உரைக்கிலோர் சுற்றத்தா ருற்றாரென் றாரே?,
இரைக்குங் கடற்கிடந்த வெந்தாய்!, – உரைப்பெல்லாம்
நின்னன்றி மற்றிலேன் கண்டாய், எனதுயிர்க்கோர்
சொன்னன்றி யாகுந் துணை.

ಉರೈಕ್ಕಿಲೋರ್ ಸುಱ್ಱತ್ತಾ ರುಱ್ಱಾರೆನ್ ಆರೇ?,
ಇರೈಕ್ಕುಂ ಕಡಱ್ಕಿಡಂದ ವೆನ್ದಾಯ್!, – ಉರೈಪ್ಪೆಲ್ಲಾಮ್
ನಿನ್ನನ್ಱಿ ಮಱ್ಱಿಲೇನ್ ಕಣ್ಡಾಯ್, ಎನದುಯಿರ್ಕ್ಕೋರ್
ಸೊನ್ನನ್ಱಿ ಯಾಕುನ್ತುಣೈ.

ಉರೈಕ್ಕಿಲ್ உரைக்கில் = ಹೇಳುವುದಾದರೆ, ಓರ್ ಸುಱ್ಱತ್ತಾರ್ ಉಱ್ಱಾರ್, (ಎನ್ಱು) ಆರೇ ஓர் சுற்றத்தார் உற்றார், (என்று) ஆரே = ಒಬ್ಬನಾದರೂ ಬಂಧು ಬಳಗದವನು ಯಾರಿದ್ದಾರೆ? ಇರೈಕ್ಕುಮ್ இரைக்கும் = ಘೋಷಿಸುವ (ಅಬ್ಬರಿಸುವ), ಕಡಲ್ ಕಿಡಂದ கடல் கிடந்த = ಕಡಲಲ್ಲಿ ಪವಡಿಸಿರುವ, ಎನ್‌ತಾಯ್ எந்தாய் = ಸ್ವಾಮೀ, ಉರೈಪ್ಪೆಲ್ಲಾಮ್ உரைப்பு எல்லாம் = (ನಾನು) ಹೇಳುವುದೆಲ್ಲವೂ, ನಿನ್ನನ್ಱಿ நின் அன்றி = ನಿನ್ನನ್ನು (ಹೊರತು) ಅಲ್ಲದೆ, ಮಱ್ಱು மற்று = ಬೇರೆ, ಇಲೇನ್ ಕಣ್ಡಾಯ್ இலேன் கண்டாய் = ಇಲ್ಲ ಕಂಡೆಯಾ, ಎನದು எனது = ನನ್ನ, ಉಯಿರ್ಕ್ಕು உயிர்க்கு = ಪ್ರಾಣಕ್ಕೆ (ಆತ್ಮಕ್ಕೆ), ಓರ್ ಸೊಲ್ ஓர் சொல் = ಒಂದು ಮಾತು, ... (ಹೆಸರು), ನನ್ಱಿ ಆಕುಮ್ நன்றி ஆகும் = ಒಳ್ಳೆಯದನ್ನು ಮಾಡುವ, ತುಣೈ துணை = ಜೊತೆ.

ಅಬ್ಬರಿಸುವ ಕಡಲಲ್ಲಿ ಪವಡಿಸಿರುವ ಸ್ವಾಮೀ, ಹೇಳುವುದಕ್ಕೆ ಬಂಧು ಬಳಗ ಎಂಬ ಒಬ್ಬರೂ ಇಲ್ಲ. ನಿನ್ನನ್ನು ಹೊರತಲ್ಲದೆ ಬೇರೆಯಾರೂ ನನಗೆ ಇಲ್ಲ ಕಂಡೆಯಾ? ನನ್ನ ಪ್ರಾಣಕ್ಕೆ ಒಳ್ಳೆಯದನ್ನು ಮಾಡುವ (ನಿನ್ನ) ಒಂದು ಹೆಸರು ಜೊತೆಯಾಗಿರುವುದು! (77)

ಶರಣಾಗತಿಯ ತತ್ವವನ್ನು ನಿಚ್ಚಳವಾಗಿ ಬಿಂಬಿಸುವ ಪಾಶುರವಿದು. ಭಗವಂತನನ್ನು ಅನನ್ಯವಾಗಿ ನಂಬಿ, ಅವನನ್ನು ಆಶ್ರಯಿಸಿ, ಪ್ರಾರ್ಥಿಸಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಹಾಲ್ಗಡಲಲ್ಲಿ ಶೇಷಶಯನನಾಗಿ ಪವಡಿಸಿರುವ ಸ್ವಾಮೀ, (ಶ್ರೀಮನ್ನಾರಾಯಣನೇ), ನನಗೆ ನಿನ್ನದಾದ ಜ್ಞಾನ ಕೊಡುವ ಬಂಧು

ವಾಗಲಿ, ಬಳಗವಾಗಲಿ, ಯಾರೂ ಇಲ್ಲ. ನೀನೊಬ್ಬನೇ ನನಗೆ ಸಹಾಯಕನು, ನನ್ನ ಆತ್ಮೋದ್ಧಾರ ಮಾಡತಕ್ಕವನು. ನಿನ್ನ ಹೆಸರನ್ನು ಬಿಟ್ಟು ಬೇರೇನನ್ನು ನಾನು ಎಂದೆಂದಿಗೂ ಬಯಸುವುದಿಲ್ಲ. ಅದೇ ನನಗೆ ಎಲ್ಲ ಕಾಲಕ್ಕೂ ರಕ್ಷಣೆ.

78. துணைநாள் பெருங்கிளையும் தொல்குலமும், சுற்றத்
திணைநாளும் இன்புடைத்தாமேலும், — கணைநாணில்
ஓவாத் தொழிற் சார்ங்கன் தொல் சீரை நன்னெஞ்சே!,
ஓவாத ஊணாக வுண்

ತುಣೈನಾಳ್ ಪೆರುಙ್ಗಿಳೈಯುಮ್ ತೊಲ್ ಕುಲಮುಮ್, ಶುಟ್ರ
ತ್ತಿಣೈನಾಳುಮ್ ಇನ್ಬುಡೈತ್ತಾಮೇಲುಮ್, — ಕಣೈನಾಣಿಲ್
ಓವಾತ್ತೊಳಿಲ್ ಶಾರ್ಙ್ಗನ್ ತೊಲ್ ಶೀರೈ ನನ್ನೆಂಜೇ!,
ಓವಾದ ವೂಣಾಗ ವುಣ್.

ತುಣೈ துணை = ಜೊತೆಗಾರರೂ (ಸಂಗಾತಿಗಳೂ), ನಾಳ್ நாள் = ಕಾಲವೂ (ಆಯುಸ್ಸು), ಪೆರುಙ್ಗಿಳೈಯುಮ್ பெரு கிளையும் = ದೊಡ್ಡ ಸಂಸಾರವೂ, ತೊಲ್ ಕುಲಮುಮ್ தொல் குலமும் = ಬಹುಕಾಲದಿಂದ ಬಂದ ಕುಲವೂ, ಶುಟ್ರತ್ತು சுற்றத்து = ಬಂಧುಗಳ, ತ್ತಿಣೈ திணை = ಕೂಟವೂ, ನಾಳುಮ್ நாளும் = ಯಾವಾಗಲೂ, (ದಿನದಿನವೂ), ಇನ್ಬು ಉಡೈತ್ತು ಆಮ್ ಏಲುಮ್ இன்பு உடைத்து ஆம் ஏலும் = ಸಂತೋಷವನ್ನುಂಟುಮಾಡುವವರಾದರೂ, ಕಣೈ ನಾಣಿಲ್ கணை நாணில் = ಅಂಬುಗಳು (ಬಿಲ್ಲಿನ) ಹೆದೆಯಿಂದ, ಓವಾ ஓவா = ತಪ್ಪದೆ, (ಹೊರಡಿಸುವ), ತೊಳಿಲ್ தொழில் = ಕೆಲಸದಲ್ಲಿ, ಶಾರ್ಙ್ಗನ್ சார்ங்கன் = ತೊಡಗಿರುವ, ಶೀರೈ சீரை = ಮಹದೈಶ್ವರ್ಯವನ್ನು, ನಲ್ ನೆಂಜೇ நன்னெஞ்சே = ನನ್ನ ಒಳ್ಳೆಯ ಮನಸ್ಸೇ, ಓವಾದ ஓவாத = ತಪ್ಪದ, ಊಣ್ ஊண் ஆக = ಆಹಾರವಾಗಿ (ಜೀವನದ ಆಧಾರವಾಗಿ), ಉಣ್ உண் = ಉಣ್ಣು.

ನನ್ನ ಒಳ್ಳೆಯ ಮನಸ್ಸೇ, ಸಂಗಾತಿಗಳೂ, ಆಯುಸ್ಸು, ದೊಡ್ಡ ಸಂಸಾರವೂ, (ಪರಂಪರೆಯಾಗಿ) ಬಹುಕಾಲದಿಂದ ಬಂದ ಕುಲವೂ, ಬಂಧು ಬಳಗಗಳ ಕೂಟವೂ ದಿನದಿನವೂ ಸಂತೋಷವನ್ನುಂಟುಮಾಡುವವರಾದರೂ, ಬಿಲ್ಲಿನ ಹೆದೆಯಿಂದ ಅಂಬುಗಳನ್ನು ತಪ್ಪದೆ ಬಿಡುವ ಕೆಲಸದಲ್ಲಿ ತೊಡಗಿರುವ ಮಹದೈಶ್ವರ್ಯವನ್ನು ತಪ್ಪದಂತೆ ಜೀವನದ ಆಧಾರವಾಗಿ ಉಣ್ಣು. (78)

ಮನಸ್ಸಿಗೆ ಯಾವುದು ಒಳ್ಳೆಯ ಆಹಾರ? ಇಹಲೋಕದ ಜೀವನವೇ? ಪರಲೋಕದ ಶಾಶ್ವತಾನಂದವೇ? ಈ ಪಾಶುರದಲ್ಲಿ ಈ ವಿಷಯವನ್ನು ಸ್ವಾರಸ್ಯವಾಗಿ ಮನನ ಮಾಡಲಾಗಿದೆ.

ಇಹಜೀವನದಲ್ಲಿ, ಕುಲದ ಹಿರಿಮೆ, ಸಂಸಾರದ ವೈಭವ, ದೀರ್ಘಾಯುಸ್ಸು, ಬಂಧುಬಳಗ, ಸಂಗಾತಿಗಳು, ಪ್ರತಿಷ್ಠೆ, ಆಳುಕಾಳು- ಇವ್ಯಾದಿಗಳೆಲ್ಲವೂ

Garani Srinivasan

ಹಿತವನ್ನುಂಟು ಮಾಡತಕ್ಕವು ಎಂಬುದು ಬಲ್ಲಾಗ ಕೇಳಿರಬಹುದು. ಆದರೆ, ಇಹಜೀವನದ ಶಾಶ್ವತ ಸುಖದಾಗ, ದುಃಖ ಸಂಕಟಗಳನ್ನು ಅದು ಮೇಲೆ ಅಂದ ಮೇಲೆ ಕಂಡೂ ಕಾಣುತ್ತಿರುವಾಗ, ಅಂತಹ ಅಂಟುದೇಹದ ಪಾಪಗಳನ್ನು ಮಾಡುತ್ತಿರುವಾಗ, ದುಷ್ಟ ಪಾಪಗಳ ಸಂಕೋಲೆಯಲ್ಲಿ ಸಿಕ್ಕಿ ಬಾಳುತ್ತಿರುವಾಗ, ಅಂಥ ಇಹಜೀವನವನ್ನು ಬಿಟ್ಟುಬಿಡುವುದೆಂದಾಗ, ಅದನ್ನೇ ಬಿಟ್ಟು ದಾಟ ಕೊಂಡು ಬಂದರೂ ಇದು ಅದನ್ನು ನಂಬಿ, ಅದರ ಆಲ್ಲಾನಂದದಲ್ಲಿ ಮುಳುಗಿರುವುದು ನಿಜವಾಗಿಯೂ ಹಿತವಾದದ್ದೇ? ಅದನ್ನು ಬಿಡದಿದ್ದರೆ, ಶಾಶ್ವತಾನಂದವನ್ನು ನೀಡುವ ದಾರಿಯನ್ನು (ಉಪಾಯವನ್ನು) ಹಿಡಿಯಬೇಡವೇ?

ಆಳ್ವಾರರು ಹೇಳುತ್ತಾರೆ: ನನ್ನ ಬಿಟ್ಟರೂ ಮನಸ್ಸೇ, ಇಹಜೀವನದಲ್ಲಿ ಎಷ್ಟೇ ಅನುಕೂಲಗಳು ಕಂಡುಬಂದರೂ, ಜೀವನ ನಿಯಂತ್ರಕ ಅವು ಸಂಕೋಲೆಯನ್ನುಂಟು ಮಾಡುವುದೆಂದರೂ, ನೀನು ಅದನ್ನು ನೆಚ್ಚಿ ಮೋಸಹೋಗಬೇಡ. ದುಷ್ಕೃತ್ಯಗಳೆಲ್ಲವನ್ನು ನಾಶ ಮಾಡುವ ನಿಯಮ ಶಾರ್ಙ್ಗ ಧನುಸ್ಸನ್ನು ಹಿಡಿದಿರುವ, ಅಂಬುಗಳನ್ನು ಕೆಡಿಸಿ, ಸಿದ್ಧನಾದ ಸರ್ವೇಶ್ವರನ ಅನಂತ ಕಲ್ಯಾಣ ಗುಣಗಳನ್ನು ಆಸ್ವಾದಿಸುವುದರಲ್ಲಿಯೇ ನೀನು ಎಚ್ಚರದಿಂದ ನಿರತನಾಗಿರು. ಅದೇ ನಿನಗೆ ಶಾಶ್ವತಾನಂದವನ್ನು ಕೊಡುವ ಶ್ರೇಷ್ಠವಾದ ಉಪಾಯ.

೯೯. உண்ணாட்டுத் தேசன்றே! ஊழ்வினையை யஞ்சுமே?
விண்ணாட்டை யொன்றாக மெச்சுமே? — மண்ணாட்டில்
ஆராகி யெவ்விழிவிற் றாலும், ஆழியங்கைப்
பேராயற் காளாம் பிறப்பு.

ಉಣ್ಣಾಟ್ಟುತ್ ತೇಸನ್ರೇ! ಊಳ್ವಿನೈಯೈ ಯಂಜುಮೇ?
ವಿಣ್ಣಾಟ್ಟೈ ಯೊನ್ರಾಗ ಮೆಚ್ಚುಮೇ? — ಮಣ್ಣಾಟ್ಟಿಲ್
ಆರಾಗಿ ಯೆವ್ವಿಳಿವಿಟ್ರಾಲುಮ್, ಆಳಿಯಂಗೈಪ್
ಪೇರಾಯರ್ಕ್ಕಾಳಾಮ್ ಪಿರಪ್ಪು.

ಉಳ್ ನಾಡು (ಉಳ್ + ನಾಡು = ಉಣ್ಣಾಡು) உள் நாடு = ಪರಮಪದದ (ಅಂತರಂಗವೆಂಬ ನಾಡಿನ), ತೇಸು தேசு = ತೇಜಸ್ಸು (ಹೊಂಬೆಳಕು, ಹಿರಿಮೆ), ಅನ್ರೇ அன்றே = ಅಲ್ಲವೇ? ಊಳ್ ஊழ் = ಹಿಂದಿನ, ವಿನೈಯೈ வினையை = ಪಾಪಗಳನ್ನು, ಅಂಜುಮೇ அஞ்சுமே = ಅಂಜುವುದೇ? ವಿಣ್ ನಾಟ್ಟೈ விண்ணாட்டை = ಮೇಲಣ ಲೋಕದಲ್ಲಿ ಸ್ವರ್ಗವನ್ನು ಆದ ಒನ್ರಾಗ ஒன்றாக = ಒಂದು ವಿಶೇಷವಾಗಿ, ಮೆಚ್ಚುಮೇ மெச்சுமே = ಮೆಚ್ಚುತ್ತದ್ದೇ?, ಮಣ್ ನಾಟ್ಟಿಲ್ மண் நாட்டில் = ಭೂಲೋಕದಲ್ಲಿ,

ಓರ್ ಆಂ ಆರ್ ಆಕ್ಕಿ = ಯಾರಾದರೂ ಆಗ, ಎವ್ ಇಯಲ್ ವಿಟ್ರು ನಾಯ್ತಿ ಲ್ಲಿ ಯಿರ್ಱು = ಎಂಥ ಕೀಳು ವೃತ್ತಿಯವರು, ಆನಾಲುಮ್ ಆಳುಂ = ಆದರೂ, ಆಟ್ ಆಟ್ಚಿ = ಚಕ್ರಾಯುಧವನ್ನು, ಅವನ್ ಕ್ಕೆ ಅಂ ಆಕ = ಸುಂದರವಾದ ಕೈಯಲ್ಲಿ ಧರಿಸಿದ, ಪೇರ್ ಆಯನುಕ್ಕು ಪೆರ್ ಆಯರ್ಕ್ಕೇ = ಪ್ರಸಿದ್ಧನಾದ ಗೋವಳನಿಗೆ, ಆಳ್ ಆವರ್ ಆರ್ ಆಂ = ಆಳಾದವರ, ಪಿಱಪ್ಪು ಪಿಱಪ್ಪು = ಹುಟ್ಟು (ಜನ್ಮ) ಎಂಬುದು

ಭೂಲೋಕದಲ್ಲಿ ಯಾವ ಕೀಳು ವೃತ್ತಿಯವರಾದರೂ, ಚಕ್ರಾಯುಧವನ್ನು ಸುಂದರವಾದ ಕೈಯಲ್ಲಿ ಧರಿಸಿದ ಸುಪ್ರಸಿದ್ಧನಾದ ಗೋವಳನಿಗೆ ಆಳಾದವರ ನಾಟಿನ ಕೀಜನ್ಮ (ನೀಚ ಜನ್ಮವೆಂಬುದು ಪರಮಪದವೆಂಬ (ಅಂತರಂಗವೆಂಬ) ... ಯುಗಯುಗಗಳ ಪಾಪಗಳನ್ನು ಕಳೆದು ಅಂಜುವುದೇ? ಹಿಂದು) ಉಳ್ಳದ್ದಲ್ಲವೇ? ಮೇಲಣ ಲೋಕಗಳ (ಬಾಳ್ವೆ)ಯನ್ನು ಒಂದು ವಿಶೇಷವಾಗಿ ಪುಷ್ಟಿಕೊಡುವುದೇ? (79)

ಈ ಪಾಶುರದಲ್ಲಿ ಯಾವ ಬಗೆಯ ಬಾಳ್ವೆ ಶ್ರೇಷ್ಠವಾದದ್ದು — ಎಂದರೆ, ಅದಕ್ಕೆ ಜಾತಿ ಮುಖ್ಯವೇ, ಕೆಲಸ (ವೃತ್ತಿ) ಮುಖ್ಯವೇ, ಬಾಳ್ವೆ ಮುಖ್ಯವೇ ಎಂಬುದನ್ನು ಸ್ಪಷ್ಟವಾಗಿ ತಿಳಿಯ ಹೇಳುತ್ತದೆ.

"ಆಟ್ ಯಾಟ್ಚಿ ಪೇರಾಯನುಕ್ಕು ಆಳಾವಾರ್ ಪಿಱಪ್ಪು" — ಚಕ್ರಾಯುಧಧಾರಿಯಾದ ಸರ್ವೇಶ್ವರನು ಸುಪ್ರಸಿದ್ಧ ಗೋವಳನಾದ ಶ್ರೀಕೃಷ್ಣನಾಗಿ ಅವತರಿಸಿದನಷ್ಟೆ. ಅವನಿಗೆ ಆಳಾಗಿ, ಅವನ ಕೈಂಕರ್ಯದಲ್ಲಿ ತೊಡಗಿದ ಜೀವನ.

ಆಳ್ವಾರರು ಹೇಳುತ್ತಾರೆ: ಭೂಲೋಕದಲ್ಲಿ ಭಗವದ್ಭಕ್ತನಾಗಿ, ಭಗವಂತನಿಗೆ ಆಳಾಗಿ ಬಾಳುವವನು ಯಾರೇ ಆಗಲಿ, ಯಾವ ಜಾತಿ, ಯಾವ ವೃತ್ತಿಯವನಾಗಲಿ, ಅವನ ಜೀವನವು ಪರಮಪದದ ತೇಜಃಪೂರ್ಣವಾದ ಜೀವನಕ್ಕಿಂತಲೂ, ಉತ್ತಮವಾದದ್ದು. ಅವನ ಜನ್ಮಜನ್ಮಗಳ ಪಾಪಗಳೆಲ್ಲವೂ ನಿರ್ಮೂಲಗೊಳ್ಳುತ್ತವೆ. ಬ್ರಹ್ಮಾದಿ ಮೇಲಣ ಲೋಕಗಳ ಜೀವನಕ್ಕಿಂತಲೂ ಅದೇ ಶ್ರೇಷ್ಠವಾದದ್ದು.

80. பிறப்பிறப்பு மூப்புப் பிணிதுறந்து, பின்னும்
இறக்கவு மின்புடைத்தா மேலும், — மறப்பெல்லாம்
ஏதமே யென்றல்லா லெண்ணுவனே? — மண்ணளந்தான்
பாதமே யேத்தாய் பகல்

ಪಿಱಪ್ಪಿಱಪ್ಪು ಮೂಪ್ಪುಪ್ಪಿಣಿತುಱನ್ದು, ಪಿನ್ನುಮ್
ಇಱಕ್ಕವು ಮಿನ್ಪುಡೈತ್ತಾ ಮೇಲುಮ್, — ಮಱಪ್ಪೆಲ್ಲಾಮ್
ಏದಮೇ ಯೆನ್ಱಲ್ಲಾ ಲೆಣ್ಣುವನೇ? — ಮಣ್ಣಳನ್ದಾನ್
ಪಾದಮೇ ಯೇತ್ತಾಯ್ ಪಹಲ್.

ಪಿಱಪ್ಪು பிறப்பு = ಹುಟ್ಟುವಿಕೆಯೂ, ಇಱಪ್ಪು இறப்பு = ಮರಣವೂ,
ಮೂಪ್ಪು மூப்பு = ಮುದಿತನವೂ, ಪಿಣಿ பிணி = ರೋಗವೂ, ತುಱನ್ದು
துறந்து = ತೊರೆದು, ಪಿನ್ನುಮ್ பின்னும் = ಆಮೇಲೂ, ಇಱಕ್ಕವು
ಮ್ இறக்கவும் = ಅತಿಶಯವಾದ, ಇನ್ಬು இன்பு = ಆನಂದವನ್ನು,
ಉಡೈತ್ತು ಆಮ್ ಏಲುಮ್ உடைத்து ஆம் ஏலும் = ಪಡೆಯುವುದಾದ
ರೂ, ಮಱಪ್ಪು ಎಲ್ಲಾಮ್ மறப்பு எல்லாம் = ಮರೆಯುವದನ್ನೆಲ್ಲಾ,
ಏದಮೇ ஏதம் = ದುಃಖ, ಎನ್ಱು என்று = ಎಂದು, ಅಲ್ಲಾಲ್ அல்லா
ல் = ಅಲ್ಲದೆ, ಎಣ್ಣುವನೇ எண்ணுவனே = ಭಾವಿಸುವನೇ (ಎಣಿಸುವ
ನೇ), ಮಣ್ ಅಳನ್ದಾನ್ மண் அளந்தான் = ಭೂಮಿಯನ್ನು ಅಳೆದು
ಕೊಂಡವನ, ಪಾದಮೇ பாதமே = ತಿರುವಡಿಯನ್ನೇ, ಏತ್ತುಮ್ ஏத்து
ம் = ಸ್ತುತಿಸು, ಪಗಲ್ பகல் = ಎಲ್ಲಾ ಕಾಲದಲ್ಲೂ.

ಹುಟ್ಟು, ಮರಣ, ಮುದಿತನ, ರೋಗ - ಇವುಗಳನ್ನು ತೊರೆದ ಮೇಲೆಯೂ ಅತಿಶಯವಾದ ಆನಂದವನ್ನು ಪಡೆಯುವುದಾದರೂ, ಮರೆಯುವುದನ್ನೆಲ್ಲಾ ದುಃಖವೆಂದಲ್ಲದೆ ಬೇರೆಯಾಗಿ ಎಣಿಸುವನೇ? ನೆಲವನ್ನಳೆದು ಕೊಂಡವನ ಪಾದಗಳನ್ನೇ ಎಲ್ಲಾ ಕಾಲದಲ್ಲೂ ಸ್ತುತಿಸುತ್ತಿರು. (80)

ಭಗವಂತನ ದಾಸನಾಗಿ ಬಾಳುವುದು ಪರಮಪದ ಪ್ರಾಪ್ತಿಗಿಂತಲೂ ಶ್ರೇಷ್ಠವಾದದ್ದೆಂದು ಹಿಂದಿನ ಪಾಶುರದ ವಿಷಯ. ಮೋಕ್ಷ ದೊರೆತರೂ ಭಗವಂತನ ಆಶ್ರಯವನ್ನು ಬಿಡಬಾರದೆಂಬುದು ಈ ಪಾಶುರ.

ಆಳ್ವಾರರು ಹೇಳುತ್ತಾರೆ: ಹುಟ್ಟು, ಸಾವು, ಮುದಿತನ, ರೋಗ - ಇವುಗಳನ್ನು ಕಳೆದ ಬಳಿಕ ಬರುವ ಅತಿಶಯವಾದ ಆನಂದವನ್ನು ತರುವ ಮೋಕ್ಷವನ್ನು ಪಡೆಯುವುದಾದರೂ, ಆಗ 'ಮರೆವು' ಎಂಬುದು ಬಂದರೆ, ಅದು ದುಃಖವೇ ಅಲ್ಲದೆ ಬೇರೆಯಲ್ಲ. ಆದ್ದರಿಂದ, ಮೋಕ್ಷವನ್ನು ಪಡೆದು ಕೊಂಡಾಗಲೂ, ಭಗವಂತನ ತಿರುವಡಿಗಳನ್ನು ಮರೆಯದಂತೆ, ಅವುಗಳನ್ನೇ ಎಡೆಬಿಡದೆ ಚಿಂತಿಸುತ್ತಿರುವುದೇ ಶ್ರೇಷ್ಠವಾದ ಆನಂದ.

81\. பகலிரா வென்பதுவும் பாவியாது, எம்மை
இகல்செய் திருபொழுது மாள்வர், - துகளாத்
தொழும்பரிவர் சீர்க்குந் துணையிலரென் றோரார்,
செழும்பரவை மேயார் தெரிந்து.

ಪಗಲಿರಾವೆನ್ಬದುವುಮ್ ಪಾವಿಯಾದು, ಎಮ್ಮೈ
ಇಗಲ್ ಶೆಯ್ ತಿರು ಪೊೞುದು ಮಾಳ್ವರ್, - ತುಗಳಾ
ತ್ತೊೞುಮ್ಬರಿವರ್ ಶೀರ್ಕ್ಕುನ್ದುಣೈಯಿಲರೆನ್ಱೋರಾರ್,
ಶೆೞುಮ್ಬರವೈ ಮೇಯಾರ್ ತೆರಿನ್ದು.

Garani Srinivasan

ಪಕಲ್ ಇರಾ ಎನ್ಬದುವುಮ್ பகல் இரா என்பதுவும் = ಹಗಲು ರಾತ್ರಿ ಎಂಬುದನ್ನು, ಪಾವಿಯಾದು பாவியாது = ಭಾವಿಸದೆ, ಎಮ್ಮೈ நம் நாம = ನಮ್ಮನ್ನು (ನಮ್ಮೊಡನೆ), ಇಹಲ್ ಶೆಯ್ದು இகல் செய்து = ಹೋರಾಡಿ (ಕಿತ್ತಾಟ ಮಾಡಿ), ಇರು ಪೊೞುದುಮ್ இருபொழுதும் = ಎರಡು ಹೊತ್ತು, ಆಳ್ವರ್ ஆள்வர் = ರಕ್ಷಿಸುವರು, ತಹವಾ தகவா = ತಕ್ಕವನಲ್ಲದ, ಶಿಱುಮ್ಬರ್ சிறுமபர் = ಕೀಳು ಮನುಷ್ಯ, ಇವರ್ இவர் = ಇವನು, ಶೀರ್ಕ್ಕಿಮ್ ஈர்க்கும் = ಸದ್ಗುಣಗಳು, ತುಣೈ ಇಲರ್ துணை இலர் = ಜೊತೆಯಿಲ್ಲದವನು, ಎನ್ಬು நாணு = ಎಂದು, ಊರಾರ್ ஊரார் = ಊರ ಸುಂದರವಾದ ಕಡಲಲ್ಲಿ, ಒಂದುವುದಿಲ್ಲ, ಶೆೞು ಮಱೈ தசை பாராயை = ಸುಂದರವಾದ ಕಡಲಲ್ಲಿ, ಶೆನ್ದು தெரிந்து = ಶಿಕ್ಷ ಮೇಯಾರ್ மேயார் = ಮಲಗಿರುವವರು, ಶೆನ್ದು ತೆರಿನ್ದು = ಶಿಕ್ಷ (ಆಲೋಚಿಸಿ).

ಸುಂದರವಾದ ಕಡಲಲ್ಲಿ ಮಲಗಿರುವ ಸ್ವಾಮಿಯು, ~~[illegible]~~, 'ಇವನು ಸದ್ಗುಣಗಳು ಎಳ್ಳಷ್ಟೂ ಇಲ್ಲದವನು' ಎಂದು ತಕ್ಕವನಲ್ಲದ ಕೀಳು ಮನುಷ್ಯ, ಸದ್ಗುಣಗಳು ಎಳ್ಳಷ್ಟೂ ಇಲ್ಲದವನು' ಎಂದು ಭಾವಿಸದೆ ನಮ್ಮೊಡನೆ ಯೋಚಿಸುವುದಿಲ್ಲ. ಹಗಲು ಇರುಳು ಎಂದು ಭಾವಿಸದೆ ನಮ್ಮೊಡನೆ (81)
ಕಿತ್ತಾಟನಡಸಿ, ಎರಡು ಹೊತ್ತು ನಮ್ಮನ್ನು ರಕ್ಷಿಸುತ್ತಾನೆ.

ಈ ಪಾಶುರದಲ್ಲಿ ಹೊಸದೊಂದು ವಿಷಯವನ್ನು ಆಳ್ವಾರರು ಹೇಳುತ್ತಾರೆ. ಭಗವಂತನ ವಿಷ್ಣುಕೃಪೆ ಸ್ವಾಮಿ ಶರಣಾಗತಿ ಯಲ್ಲಿ ತಾನು ಎಷ್ಟು ಕೀಳು, ಭಗವಂತನ ಎಷ್ಟು ಯೋಗ್ಯನು' ಎಂದು ಚೆನ್ನಾಗಿ ಅರಿತುಕೊಳ್ಳುವುದು, ಭಗವಂತನನ್ನು ಉಪ್ಪಡೆದೊಂದು ಸ್ತುತಿಸುವುದು ಇಂದು ಮುಖ್ಯವಾದ ದಿಕ್ಕೆ.

ಆಳ್ವಾರರು ಹೇಳುತ್ತಾರೆ: ನಾನು ಭಗವಂತನ ಕೃಪೆಗೆ ಎಳ್ಳಷ್ಟೂ ತಕ್ಕವನಲ್ಲ. ನಾನು ಬಲು ಕೀಳು ಮಟ್ಟದವನು. ನನ್ನಲ್ಲಿ ಯಾವ ಸದ್ಗುಣಗಳೂ ಎಳ್ಳಷ್ಟೂ ಇಲ್ಲ. ಆದರೂ ಭಗವಂತನು ಎಷ್ಟು ದಯಾಮಯ! ನನ್ನ ಕೀಳುತನವನ್ನು ಲೆಕ್ಕಿಸದೆ, ನನ್ನೊಡನೆ ಕಿತ್ತಾಟ ಮಾಡಿ, ನನ್ನನ್ನು ಹೋಗದಂತೆ ಬಿಡದೆ ಬಳಿಗೆ ಕರೆದೊಯ್ದು ಸದ್ಗುಣಪ್ರ ನನ್ನನ್ನು ಯೋಗ್ಯನನ್ನಾಗಿ ಮಾಡುತ್ತಾನಲ್ಲ! ಹಗಲು ಇರುಳು ಎನ್ನದೆ ಎಲ್ಲ ಕಾಲದಲ್ಲೂ ನನ್ನನ್ನು ಆಳುತ್ತಾನಲ್ಲ!

82. தெரிந்துணர்வொன் றின்மையால் தீவினையேன், வாளா
இருந்தொழிந்தேன் கீழ்நாள்களெல்லாம், - கரந்துருவின்
அம்மானை யந்நான்று பின்தொடர்ந்த, ஆழியங்கை
அம்மானை யேத்தா தயர்த்து.

ತೆರಿನ್ದುಣರ್ವೊನ್ ಱಿನ್ಮೈಯಾಲ್ ತೀವಿನೈಯೇನ್, ವಾಳಾ
ಇರುನ್ದೊೞಿನ್ದೇನ್ ಕೀೞ್ ನಾಳ್ಗಳೆಲ್ಲಾಮ್, - ಕರನ್ದುರುವಿನ್

ಅಮ್ಮಾನ್ನೈ ಯಾನ್ನಾನ್ ಉಯ್ಯುನ್ ಉಹೊ ದರನ್ದ, ಆಟಿಯುಜ್ಞೈ
ಅಮ್ಮಾನ್ನೈ ಯೆಟ್ಟೋದಯರ್ ತ್ತು ದಾ

ಶೆರಿನ್ದ ಶೆರಿನ್ದ = ಕೆಳವಳಿಕೆಯಿಂದ ಕೂಡಿದ, ಉಣರ್ವು ಒಣ್ಣಾ‌ಗ್ಯ = ಅರಿವು, ಒನ್ನ ಉಯ್ ಗ್ಗಾಣ್ಣು = ಬಂದಾದರೂ, ಇನ್ನ್ರೆಯಾಲ್ ಶಿಣ್ಣಾಮಯಾಗ = ಇಲ್ಲದ್ದರಿಂದ, ತಿಲವಿನ್ನೆಯೇನ್ ಕ್ಷೋಭಿಣ ಬೇಣ್ = ಕಡುಪಾಪಿಯಾದ ನಾನು, ವಾಳ್ಣಾ ವಾಣಾ = ಶೆಯಿನ್ಯೇನ್ ಕ್ಷೋಭಿನಬೇಣ್ = ಕಡುಪಾಪಿಯಾದ ನಾನು, ಒಟ್ಟನ್ದ ನಿಂಯಾದ (ನಿಜವಾದ) ಬದುಕಿಲ್ಲದೆ, ಇರುನ್ದ ಇರುನ್ದ = ಇದ್ದುಕೊಂಡು, ಒಟ್ಟನ್ದ ನಿಂಯಾದ (ನಿಜವಾದ) ಬದುಕಿಲ್ಲದೆ, ಇರುನ್ದು ಇರುನ್ದು = ಇದ್ದುಕೊಂಡು, ಎಲ್ಲಾ ಕೋಣ್ ನಾಳ್‌ಕಳ್ ಎಲ್ಲಾಮ್ ಕೋಣ್ ನಾಣ್‌ಕಣ್ ನಾಟ್ಟುರ್ನ್ದೇನ್ = ಹಾಳಾದೆ, ಕೀಳ್ ನಾಳ್‌ಗಳ್ ಎಲ್ಲಾಮ್ (ಇದುವರೆಗಿನ ಜೀವನವನ್ನೆಲ್ಲಾ), ತರನ್ದ ಕಾರ್ನ್ದ = ನಾಲ್‌ನಾಗಮ್ = ಬಂದನಕಾಲವನ್ನೆಲ್ಲಾ (ಇದುವರೆಗಿನ ಜೀವನವನ್ನೆಲ್ಲಾ), ತರನ್ದ ಕಾರ್ನ್ದ = ಆ ಮರೆಮಾಚಿದ, ಉರುವಿನ್ ಒರುವಿನ್ = ರೂಪದ, ಅಮ್ಮನ್ನೈ ಮಾಣಿ = ಆ ಮರೆಮಾಚಿದ, ಉರುವಿನ್ ಒರುವಿನ್ = ರೂಪದ, ಅಮ್ಮನ್ನೈ ಮಾಣಿ = ಆ ಜಿಂಕೆಯನ್ನು, ಅನ್ನಾಳ್ ಅನ್ಗ್ಗಾಣ್ಣು = ಅಂದಿನ ಕಾಲದಲ್ಲಿ, ಪಿನ್ ತೊಡರ್ನ್ದ ಜಿಂಕೆಯನ್ನು, ಅನ್ನಾಳ್ ಅನ್ಗ್ಗಾಣ್ಣು = ಅಂದಿನ ಕಾಲದಲ್ಲಿ, ಪಿನ್ ತೊಡರ್ನ್ದ (ಅಟ್ಟಿಕೊಂಡು ಹೋದ), ಆಟಿ ಆಳಿ: ಪಿಣ್ ಶೆಗಾಟರ್ನ್ದ = ಬೆಂಬಾಲಿಸಿದ (ಅಟ್ಟಿಕೊಂಡು ಹೋದ), ಅವನ ಚಕ್ರಾಯುಧವನ್ನು, ಅಮ್ಮನ್ನೈ ಅಂಣಾ = ಕೋಬಿನಕೈಯಲ್ಲಿ ಹಿಡಿದ, ಅವನ ಚಕ್ರಾಯುಧವನ್ನು, ಅಮ್ಮನ್ನೈ ಅಂಣಾ = ಸ್ವಾಮಿಯನ್ನು, ಪ್ರತ್ತಾದು ಎತ್ತಿನಾಗು = ನೆನೆಸಿದೆ, ಅಯರ್ತ್ತು ಸ್ವೈ ಅಮ್ಮಾನಿ = ಸ್ವಾಮಿಯನ್ನು, ಪ್ರತ್ತಾದು ಎತ್ತಿನಾಗು = ನೆನೆಸಿದೆ, ಅಯರ್ತ್ತು ಅಯರ್ತ್ತು = ಅರಿವುಕೆಟ್ಟು.

ಕೆಳವಳಿಕೆಯಿಂದ ಕೂಡಿದ ಜ್ಞಾನವು ಸ್ವಲ್ಪವೂ ಇಲ್ಲದ್ದರಿಂದ, ಕಡುಪಾಪಿಯಾದ ನಾನು ಇದುವರೆಗಿನ ಜೀವನವನ್ನೆಲ್ಲಾ ನಿಜವಾದ ಬಾಳಿಯಲ್ಲಿ ನಡೆಸದೆ ಹಾಳಾದೆ. ಆ ಕಾಲದಲ್ಲಿ ಮರೆಮಾಚಿದ ರೂಪದ ಆ ಜಿಂಕೆಯ ಬೆನ್ನಟ್ಟಿ ಹೋದ ಚಕ್ರಾಯುಧವನ್ನು ಸುಂದರವಾದ ಕೈಯಲ್ಲಿ ಹಿಡಿದ ಸ್ವಾಮಿಯನ್ನು ಅರಿವುಕೆಟ್ಟು ನೆನೆಸದೆ ಹೋದೆ. (82)

ಈ ಪಾಶುರದಲ್ಲಿ ಆಳ್ವಾರರು ತಮ್ಮ ಜೀವನದಲ್ಲಿ ತಿಳುವಳಿಕೆ ಬಂದ ಕಾಲದಿಂದ ಈ ಭಗವದನುಭವವನ್ನು ಅನುಭವಿಸದೆ, ವ್ಯರ್ಥವಾಗಿ ಕಾಲಕಳೆದದ್ದಕ್ಕೆ ದುಃಖಿಸುತ್ತಾರೆ. ಮತ್ತು, ತಮ್ಮನ್ನು ತಾವೇ ನಿಂದಿಸಿಕೊಳ್ಳುತ್ತಾರೆ.

"ತರನ್ದುರವನ್ ಅಮ್ಮಾನ್ನೈ ಯಾನ್ನಾಟ್ಟು ಪಿನ್ ತೊಡರ್ನ್ದ ಆಟಿಯುಜ್ಞೈ ಅಮ್ಮಾನ್"— ಇದು ಭಗವಂತನ ಶ್ರೀರಾಮಾವತಾರದ ಪ್ರಸಂಗ. ತಂದೆಯ ಮಾತಿನಂತೆ ಶ್ರೀರಾಮನು ಸೀತಾಲಕ್ಷ್ಮಣರೊಡನೆ ವನವಾಸದಲ್ಲಿದ್ದಾಗ, ಪಂಚವಟಿಯಲ್ಲಿ, ಒಂದು ದಿನ, ತಮ್ಮ ಪರ್ಣಶಾಲೆಯ ಮುಂದೆ ಚಿನ್ನದ ಜಿಂಕೆಯೊಂದು ಓಡುತ್ತಿರುವುದನ್ನು ಕಂಡಳು. ಅದನ್ನು ತನಗೆ ತಂದುಕೊಡಬೇಕೆಂದು ಶ್ರೀರಾಮನನ್ನು ಬೇಡಿದಳು. ಮಾಯಾಮೃಗದ ರೂಪವನ್ನು ತಳೆದಿದ್ದ ಮಾರೀಚನೆಂಬ ಆ ರಾಕ್ಷಸನ ಬೆನ್ನಟ್ಟಿ ಶ್ರೀರಾಮನು ಕಾಡಿನಲ್ಲಿ ಬಹುದೂರ ಹೋದನು. ಕಡೆಗೆ ಅವನಿಗೆ ಬಾಣವನ್ನು ಬಿಟ್ಟಾಗ, ಅದು "ಹಾ ಸೀತಾ, ಹಾ ಲಕ್ಷ್ಮಣಾ" ಎಂದು ಶ್ರೀರಾಮನ ಧ್ವನಿಯನ್ನು ಅನುಕರಿಸಿ ಕೂಗುತ್ತಾ ಪ್ರಾಣಬಿಟ್ಟಿತು. ಆ ಧ್ವನಿಯನ್ನು ಕೇಳಿದ ಸೀತಾದೇವಿಯು ~~ಶ್ರೀರಾಮನನ್ನು~~ ಲಕ್ಷ್ಮಣನನ್ನು ರಾಮನಿಗೆ ಸಹಾಯಕ್ಕಾಗಿ ಕಳುಹಿಸಿದ ನಂತರ ಒಂಟಿಯಾಗಿದ್ದಾಗಲಲ್ಲವೇ, ರಾವಣನು ಬಂದು ಸೀತೆಯನ್ನು ಅಪಹರಿಸಿದ್ದು

ಆಳ್ವಾರರು ಹೇಳುತ್ತಾರೆ: ನಾನು ನನ್ನ ಇದುವರೆಗಿನ ಜೀವನವನ್ನು ಅಯುಕ್ತವಾದ ರೀತಿಯಲ್ಲಿ ನಡೆಸಿದೆ ಹಾಳಾದೆ. ನನಗೆ ವಿವೇಕ ಪ್ರಧಾನವಾದ ಜ್ಞಾನವಿರಲಿಲ್ಲ. ವಿವೇಕವಿಲ್ಲದೆ, ಹಿಂದೆ, ಸೀತಾದೇವಿಯು ಶ್ರೀರಾಮನನ್ನು ಮಾಯಾ ಜಿಂಕೆಯ ಹಿಂದೆ ಕಳುಹಿದಂತೆ ಮಾಡಿ ರಾವಣನ ಕೈಸೆರೆಯಾದದ್ದು. ನಾನೂ ನನ್ನ ಭಗವಂತನನ್ನು ಹಿಂದಿನಿಂದಲೂ ಸ್ತುತಿಸದೆ, ಅಂಥವನ್ನು, ಕಡುಬಡವಿಯಾದೆ.

83. அயர்ப்பாய் அயராப்பாய் நெஞ்சமே! சொன்னேன்,
உயப்போம் நெறியிதுவே கண்டாய், - செயற்பால
அல்லவே செய்கிறுதி நெஞ்சமே! அஞ்சினேன்,
மல்லர்நாள் வவ்வினனை வாழ்த்து.

ಅಯರ್ಪ್ಪಾಯ್ ಅಯರಾಪ್ಪಾಯ್ ನೆಂಜಮೇ! ಶೊನ್ನೇನ್,
ಉಯಪ್ಪೋಮ್ ನೆಱಿಯಿದುವೇ ಕಂಡಾಯ್, - ಶೆಯಱ್ಪಾಲ
ಅಲ್ಲವೇ ಶೆಯ್‍ಗಿಱುದಿ ನೆಂಜಮೇ! ಅಂಜಿನೇನ್,
ಮಲ್ಲರ್‌ನಾಳ್ ವವ್ವಿನನೈ ವಾಳ್ತ್ತು.

ಅಯರ್ಪ್ಪಾಯ್ அயர்ப்பாய் = (ಭಗವಂತನನ್ನು) ಪೂಜಿಸದಿದ್ದರೂ (ಮರೆತು), ಅಯರಾಪ್ಪಾಯ್ அயராப்பாய் = ಪೂಜಿಸಿದರೂ (ನೆನೆದರೂ), ನೆಂಜಮೇ நெஞ்சமே = ಮನಸ್ಸೇ, ಶೊನ್ನೇನ್ சொன்னேன் = ಹೇಳಿದ್ದೇನೆ, ಉಯಪ್ಪೋಮ್ உயப்போம் = ಉಜ್ಜೀವನಗೊಳ್ಳಲು, ನೆಱಿ நெறி = ಮಾರ್ಗ, ಇದುವೇ ಕಂಡಾಯ್ இதுவே கண்டாய் = ಇದೇ ನೋಡಯ್ಯಾ, ಶೆಯಱ್ಪಾಲ ಅಲ್ಲವೇ செயற்பால அல்லவே = ಮಾಡಬಾರದ್ದನ್ನೇ, ಶೆಯ್‍ಗಿಱುದಿ செய்கிறுதி = ಮಾಡುತ್ತಿರುವೆ, ನೆಂಜಮೇ நெஞ்சமே = ಮನಸ್ಸೇ, ಅಂಜಿನೇನ್ அஞ்சினேன் = ನಾನು ಅಂಜಿದ್ದೇನೆ, ಮಲ್ಲರ್ மல்லர் = ಮಲ್ಲರ (ಜಟ್ಟಿಗಳ), ನಾಳ್ நாள் = ಆಯುಸ್ಸನ್ನು, ವವ್ವಿನನೈ வவ்வினனை = ನಾಶಪಡಿಸಿದವನನ್ನು (ಮುಗಿಸಿದವನನ್ನು), ವಾಳ್ತ್ತು வாழ்த்து = ಸ್ತುತಿಸು.

ಮನಸ್ಸೇ, ನೀನು ಭಗವಂತನನ್ನು ಪೂಜಿಸಿದರೂ ಪೂಜಿಸು, ಬಿಟ್ಟರೂ ಬಿಡು. ಹೇಳುತ್ತೇನೆ ಕೇಳು. ಉಜ್ಜೀವನಗೊಳ್ಳುವುದಕ್ಕೆ ಇದೇ ಮಾರ್ಗ ನೋಡಯ್ಯಾ! ಮನಸ್ಸೇ, ಮಾಡಬಾರದ್ದನ್ನಲ್ಲವೇ ನೀನು ಮಾಡುತ್ತಿರುವುದು! ಮಲ್ಲರ ಆಯುಸ್ಸನ್ನು ಮುಗಿಸಿದವನನ್ನು ಸ್ತುತಿಸು. (83)

ಹಿಂದಿನ ಪಾಶುರದಲ್ಲಿ ಆಳ್ವಾರರು ತಾವು ಅಂಜುತ್ತೇನೆಂದೂ, ಅದರಿಂದ ತಮಗೆ ದುಃಖದಾಯಕಗಳು ತಪ್ಪಲಿಲ್ಲವೆಂದೂ ವ್ಯಕ್ತಪಡಿಸಿದ್ದರು. ಅದಕ್ಕೆ ತಮ್ಮ ಮನಸ್ಸೇ ಕಾರಣವೆಂದು ತಿಳಿದರಾದರೂ, ಅದಕ್ಕೆ ಬುದ್ಧಿಯ ಮಾತನ್ನು ಹೇಳಿ ಅದರ ಜೊತೆಗೆ ಬೋಧಿಸತೊಡಗುತ್ತಾರೆ. ಆದರೂ, ತಮ್ಮ ಕರ್ತವ್ಯವನ್ನು [illegible] ಅದಕ್ಕೆ

ಬುದ್ಧಿಯನ್ನು ಇಲ್ಲಿ ಹೇಳುತ್ತಿದ್ದಾರೆ.

“ಮಲ್ಲರ್ ನಾಳ್ ವವ್ವಿನನ್ನೈ” — ಇದು ಭಗವಂತನ ಶ್ರೀಕೃಷ್ಣಾವತಾರದ ಪ್ರಸಂಗ. ಬಾಲಕೃಷ್ಣನನ್ನು ಮಧುರೆಗೆ ಧನುರ್ಯಾಗದ ಉತ್ಸವಕ್ಕೆಂದು ಕಂಸನು ಬರಮಾಡಿಕೊಂಡು, ಅಲ್ಲಿ ಅವನನ್ನು ಮಲ್ಲಯುದ್ಧದಲ್ಲಿ ಸೋಲಿಸಿ ಕೊಲ್ಲಬೇಕೆಂದು ಯೋಚಿಸಿದನು. ನುರಿತ ಜಟ್ಟಿಗಳನ್ನು ನೇಮಿಸಿದ್ದನು. ಬಾಲಕೃಷ್ಣನು ಅವರನ್ನೆಲ್ಲರನ್ನೂ ಕೊಂದು ಹಾಕಿದನು. ಭಗವಂತನು ಪರಾಕ್ರಮಶಾಲಿ ಎಂಬುದಕ್ಕೆ ಇದೊಂದು ನಿದರ್ಶನವಿದ್ದಂತೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಮಾಡಬಾರದ್ದನ್ನು ~~[illegible]~~ ಮಾಡುವ ಸ್ವಭಾವ ನಿನ್ನದು. ಉಜ್ಜೀವನಗೊಳ್ಳುವ ಸರಿಯಾದ ಮಾರ್ಗವನ್ನು ನಾನು ಹೇಳುತ್ತೇನೆ! ಭಗವಂತನಾದ ಶ್ರೀಕೃಷ್ಣನನ್ನು (ಎಂದರೆ, ಪರಮ ಸಮರ್ಥನಾದ ಮಲ್ಲರನ್ನು ಕೊಂದವನನ್ನು) ಬಿಡದೆ ಭಜಿಸು ಕಂಡೆಯಾ! ಇದರ ಮೇಲೆ ನಿನ್ನಿಷ್ಟದಂತೆ ನಡೆ.

ಭಗವಂತನನ್ನು ಭಜಿಸಿ ಪೂಜಿಸುವುದರಿಂದ ಆತ್ಮೋದ್ಧಾರವಾಗುತ್ತದೆ. ಅದನ್ನು ಮರೆತರೆ, ಕಡುಪಾತಕಿಯಾಗಿ, ದುಃಖ-ನೋವುಗಳ ಬಂಧನ ಬಂದ ನರಳಬೇಕಾಗುತ್ತದೆ.

84. வாழ்த்தி யவனடியைப் பூப்புனைந்து, நின்தலையைத்
தாழ்த்தி இருகை கூப்பென்றால் கூப்பாத – பாழ்த்தவிதி,
எங்குற்றா யென்றவனை யேத்தாதென் நெஞ்சமே!,
தங்கத்தா னாமேலும் தங்கு.

ವಾಳ್ತ್ತಿ ಯವನಡಿಯೈಪ್ ಪೂಪ್ಪುನೈಂದು, ನಿನ್ ತಲೈಯೈತ್
ತಾಳ್ತ್ತಿ ಇರುಕೈ ಕೂಪ್ಪೆನ್ರಾಲ್ ಕೂಪ್ಪಾದ - ಪಾಳ್ತ್ತವಿದಿ,
ಎಙ್ಗುಟ್ರಾಯೆನ್ ರವನೈ ಯೇತ್ತಾದೆನ್ ನೆಂಜಮೇ!,
ತಙ್ಗತ್ತಾನಾಮೇಲುಮ್ ತಙ್ಗು.

ವಾಳ್ತ್ತಿ வாழ்த்தி = ಸ್ತುತಿಸಿ, ಅವನ್ ಅಡಿಯೈ அவன் அடியை = ಅವನ ತಿರುವಡಿಗಳನ್ನು, ಪೂ பூ = ಹೂವನ್ನು, ಪುನೈಂದು புனைந்து = ಸಮರ್ಪಿಸಿ, ನಿನ್ ತಲೈಯೈ நின் தலையை = ನಿನ್ನ ತಲೆಯನ್ನು, ತಾಳ್ತ್ತು தாழ்த்து = ಬಗ್ಗಿಸಿ (ಅವನಿಗೆ ಬಾಗಿಸಿ), ಇರುಕೈ இருகை = ಎರಡು ಕೈಗಳನ್ನು, ಕೂಪ್ಪು கூப்பு = ಜೋಡಿಸು (ಮುಗಿ), ಎನ್ರಾಲ್ என்றால் = ಎಂದರೆ, ಕೂಪ್ಪಾದ கூப்பாத = ನಮಸ್ಕರಿಸದ, ಪಾಳ್ತ್ತ ವಿದಿ பாழ்த்த விதி = ಕೆಟ್ಟ ವಿಧಿಯನ್ನುಳ್ಳ (ದುರದೃಷ್ಟವನ್ನುಳ್ಳ), ಎಙ್ಗು எங்கு = ಎಲ್ಲಿ, ಉಟ್ರಾಯ್ உற்றாய் = ಸೇರಿರುವೆ, ಎನ್ರು என்று = ಎಂದು, ಅವನೈ அவனை = ಅವನನ್ನು, ಏತ್ತಾದ ஏத்தாத = ಸ್ತುತಿಸದ, ಎನ್ ನೆಂಜಮೇ என் நெஞ்சமே = ನನ್ನ

ಮನಸ್ಸೇ, ತಙ್ಗಳ್ಮಾ (ತಙ್ಗಳಿಂಮ) ತುಙ್ಗಕ್ತ್ತಾಮ್ = ಆಮ್ = (ಹಾಗೆಂಯೇ)
ಇರುವ್ವದಕ್ಕೆ ಆಮುವ್ವದಾದರೆ, ತಙ್ಗು ತುಙ್ಗು = ಇರು.

ಅವನ ತಿರುವಡಿಗಳನ್ನು ಸ್ತುತಿಸಿ, ಹೂಗಳನ್ನು ಮುಡಿಸಿ, ನಿನ್ನ ತಲೆಯನ್ನು ಬಾಗಿಸಿ, ಎರಡು ಕೈಗಳನ್ನು ಜೋಡಿಸಿ ಮುಗಿ ಎಂದರೆ ಮುಗಿಯದ, ದುರದೃಷ್ಟ ವುಳ್ಳ ನನ್ನ ಮನಸ್ಸೇ, 'ಎಲ್ಲಿ ನೆಲೆಸಿರುವೆ' ಎಂದು ಅವನನ್ನು ಸ್ತುತಿಸದೆ ಹಾಗೆ ಯೇ ಇರುವ್ವದಕ್ಕೆ ಆಮುವ್ವದಾದರೆ, ಇರು. (84)

ಮನಸ್ಸು ಅದರ ಸ್ವಭಾವವನ್ನು ಬಿಡಬೇಕೆಂದೂ, ಭಗವಂತನ್ನು ಭಜಿಸಿ, ಪೂಜಿಸಿ, ಉದ್ಧಾರಗೊಳ್ಳಬೇಕೆಂದೂ ಬಂದಿದ ಪಾಶುರದ ವಿಷಯ. ಅದನ್ನೇ ಪೂಜಿಸಿ, ಉದ್ಧಾರಗೊಳ್ಳಬೇಕೆಂದು ಬಂದಿದ ಪಾಶುರದ ವಿಷಯ. ಅದನ್ನೇ ಮುಂದುವರಿಸುತ್ತಾ, ಭಗವಂತನನ್ನು ಆಶ್ರಯಿಸದೆ ಬದುಕುವುದು ದುರದೃಷ್ಟ ತರವಾದದ್ದು ಎನ್ನುತ್ತಾರೆ ಈ ಪಾಶುರದಲ್ಲಿ.

ಆಳ್ವಾರರು ಹೇಳುತ್ತಾರೆ: ನನ್ನ ಮನಸ್ಸೇ, ನಿನಗೆ ನಾನು ಬಳ್ಳೆಯ ಮಾತನ್ನು ಹೇಳುತ್ತೇನೆ. ಭಗವಂತನ ತಿರುವಡಿಗಳನ್ನು ಆಶ್ರಯಿಸು. ಅವುಗಳನ್ನು ಹೂವಿನಿಂದ ಪೂಜಿಸು. ನಿನ್ನ ತಲೆಬಾಗಿ ಎರಗು. ಕೈಜೋಡಿಸಿ ಕೈಮುಗಿ. ನನ್ನ ಈ ಮಾತನ್ನು ಕೇಳದೆಯೇ, ಭಗವಂತನನ್ನು ಕುರಿತು ಚಿಂತಿಸದೆಯೇ ನಡೆದುಕೋ. ಇರಬಲ್ಲೆಯಾದರೆ, ಹಾಗೆಯೇ ನಡೆ. ನಿನ್ನ ದುರದೃಷ್ಟದಿಂದೆಯೇ ನಡೆದುಕೋ.

ಭಗವಂತನನ್ನು ಆಶ್ರಯಿಸದೆ, ಅವನನ್ನು ಅಲಕ್ಷಿಸಿ ಬಾಳುವುದು ಬಾಳ್ವೆಯ ಭಗವಂತನನ್ನು ಆಶ್ರಯಿಸದೆ, ಅವನನ್ನು ಅಲಕ್ಷ್ಯಿಸಿ ಬಾಳುವುದು ಬಾಳ್ವೆ ಯನ್ನು ಹಾಳುಮಾಡಿಕೊಂಡಹಾಗೆ. ಅದರಿಂದ ಬರುವುದು ದುರ್ಭಾಗ್ಯವೆಂದೇ ಎಂದಹಾಗೆ.

85. துங்கா முயற்றிய வாய்த் தாழ் விசும்பின் மீது பாய்ந்து,
எங்கேபுக் கெத்தவஞ்செய் திட்டனைகொல்? - பொங்கு
கோதத்
தண்ணம்பால் வேலைவாய்க் கண்வளரும், என்னுடைய
கண்ணன்பால் நண்ணாதிறங்குகொள் கார்

ತುಙ್ಗಾ ಮುಯಟ್ರಿಯ ವಾಯ್ತ್ತಾೞ್ ವಿಶುಮ್ಬಿನ್ ಮೀದು ಪಾಯ್ನ್ದು,
ಎಙ್ಗೇ ಪುಕ್ಕೆತ್ತವಂಜೆಯ್ ದಿಟ್ಟನೈಕೊಲ್? - ಪೊಙ್ಗು
ತಣ್ಣಮ್ಬಾಲ್ ವೇಲೈವಾಯ್ ಕ್ಕಣ್ ವಳರುಮ್, ಎನ್ನುಡೈಯ
ಕಣ್ಣನ್ಬಾಲ್ ನಣ್ಣಾದಿಱಙ್ಗುಕೊಳ್ ಕಾರ್.

ತುಙ್ಗಾ = ಬಂಡೆಗಳಿಲ್ಲದ, ಮುಯಟ್ರಿಯ ವಾಯ್ ಮುயற்றிய - ವಾಯ್ = ತುಮುಕುವ್ವದಾ, (ಉತ್ಸಾಹವುಳ್ಳವಾ), ತಾೞ್ ವಿಶುಮ್ಬಿನ್ ಮೀದು ತாழ் விசும்பின் மீது = ವಿಶಾಲವಾದ ಆಕಾಶದಲ್ಲಿ, ಪಾಯ್ನ್ದು ಪாய்ந்து = ಹಾದುಹೋಗಿ, ಎಙ್ಗೇ எங்கே = ಎಲ್ಲಿಲ್ಲಿಯೋ, ಪುಕ್ಕು புக்கு = ಪ್ರವೇಶಿಸಿ, ಎತ್ತವಮ್ ಶೆಯ್ ದಿಟ್ಟನೈಕೊಲ್ எத்தவம்

செய்திட்டன கொல் = ಎಂಥ ಶಪಥವನ್ನು ಮಾಡಿದನೋ ಕಾಣೆ, ಪ್ರಿಜ್ಞಾ
உடைய பொங்கு ஓதம் = ಅಲೆಗಳಿಂದ ತುಂಬಿದ, ಕಡಲ್ ಕண் =
ಕಂಪಾದ, அவர் அம் = ಸುಂದರವಾದ, ಪಾಲ್ ವೇಲೈ ವಾಯ್ பால் வே
லை வாய் = ಪಾಲ್ಗಡಲಲ್ಲಿ, ಕಣ್ ವಳರುವನ್ கண்வளரும் = ಪವ
ಡಿಸಿರುವ (ಯೋಗನಿದ್ರೆಯಲ್ಲಿರುವ), ಎನ್ನುಡೈಯ என்னுடைய =
ನನ್ನ, ಕಣ್ಣನ್ ಪಾಲ್ கண்ணன் பால் = ಶ್ರೀಕೃಷ್ಣನ, ನಲ್ನಿಱಮ
நல் நிறம் = ಒಳ್ಳೆಯ ಬಣ್ಣವನ್ನು, ಕೊಳ್ ಕಾರ್ கொள் கார் =
ಹೊಂದಿರುವ ಮೇಘಗಳು.

ಅಲೆಗಳಿಂದ ತುಂಬಿದ ಕಂಪಾದ, ಸುಂದರವಾದ, ಪಾಲ್ಗಡಲಲ್ಲಿ ಯೋಗ
ನಿದ್ರೆಯಲ್ಲಿರುವ ನನ್ನ ಶ್ರೀಕೃಷ್ಣನ ಶ್ರೇಷ್ಠವಾದ ಬಣ್ಣವನ್ನು ಹೊಂದಿ
ರುವ ಮೇಘಗಳು ಬಂದಿದ್ದ ನಿಲ್ಲದಂತೆ / ಶ್ರಮಿಸುತ್ತ, ವಿಶಾಲವಾದ
ಆಕಾಶದಲ್ಲಿ ಹಾದು ಹೋಗುತ್ತ, ಎಲ್ಲೆಲ್ಲಿಯೂ ಧ್ವನಿಸುತ್ತ ಎಂಥ (85)
ಶಪಥವನ್ನು ಮಾಡಿದವೋ ಕಾಣೆ!

ಕಾರ್ಮುಗಿಲನ್ನು ಕಂಡೊಡನೆಯೇ ಆಳ್ವಾರರಿಗೆ ಭಗವಂತನ ಬಣ್ಣ,
ಜ್ಞಾಪಕಕ್ಕೆ ನೆನಪು ಬಂದದ್ದರಿಂದ, ಅದನ್ನು ಇಲ್ಲಿ ಹೇಳುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಅಲೆಗಳಿಂದ ತುಂಬಿ, ಕಂಪಾಗಿಯೂ, ಸುಂ
ದರವಾಗಿಯೂ ಇರುವ ಪಾಲ್ಗಡಲಲ್ಲಿ ಭಗವಂತನು ಆದಿಶೇಷನ
ಮೇಲೆ ಯೋಗನಿದ್ರೆಯಲ್ಲಿರುತ್ತಾನೆ. ಕಾರ್ಮುಗಿಲೂ ಸಹ ಅವನ ಬಣ್ಣವನ್ನೇ
ಪಡೆದಿದೆಯಲ್ಲಾ! ಎಂಥ ಶಪಥವನ್ನು ಮಾಡಿದ್ದರಿಂದ ಅದಕ್ಕೆ ವಿಶಾಲವಾದ ಆಕಾಶ
ದಲ್ಲಿ ಸಂಚರಿಸುವಂತೆಯೂ, ಎಲ್ಲ ಜೀವರಾಶಿಗಳಿಗೆ ಹೋಗುವಂತೆಯೂ,
ತನ್ನಲ್ಲಿರುವ ನೀರನ್ನು ಮಳೆಯ ರೂಪದಲ್ಲಿ ಅಲ್ಲಲ್ಲಿ ಸುರಿಸುವಂತೆಯೂ,
ಭಾಗ್ಯವನ್ನು ನೀಡುವಂತೆಯೂ ಮಾಡುವಂತೆ ಸಾಧ್ಯವಾಯಿತೋ ಕಾಣೆ
ನಲ್ಲ!

86. கார் கலந்த மேனியான் கைகலந்த வாழியான்
பார் கலந்த வல்வயிற்றான் பாம்பணையான், — சீர் கலந்த
சொன்னினைந்து போக்காரேற் சூழ்வினையி னாழ்துயரை,
என்னினைந்து போக்குவரிப் போது.

ಕಾರ್ ಕಲನ್ದ ಮೇನಿಯಾನ್ ಕೈಕಲನ್ದ ವಾಳಿಯಾನ್
ಪಾರ್ ಕಲನ್ದ ವಲ್ವಯಿಟ್ರಾನ್ ಪಾಂಬಣೈಯಾನ್, — ಶೀರ್ ಕಲನ್ದ
ಶೊನ್ನಿನೈನ್ದು ಪೋಕ್ಕಾರೇಱ್ ಶೂಳ್ವಿನೈಯಿನಾಳ್ತುಯರೈ,
ಎನ್ನಿನೈನ್ದು ಪೋಕ್ಕುವರಿಪ್ಪೋದು.

ಕಾರ್ ಕಲನ್ದ ಮೇನಿಯಾನ್ கார் கலந்த மேனியான் =
ಕಾರ್ಮುಗಿಲನ್ನು ಹೋಲುವ ರೂಪ [illegible] ಕಲನ್ದ ಆಳಿಯಾನ್

கை கலந்த ஆழியான் = ಕೈಯಲ್ಲಿ ಧರಿಸಿರುವ ಚಕ್ರಾಯುಧವುಳ್ಳವನು, ಪಾರ್ ಕಲನ್ದ ವಲ್ ವಯಿಱ್ಱಾನ್ பார் கலந்த வல் வயிற்றான் = ಲೋಕಗಳನ್ನೆಲ್ಲಾ ಒಳಗೊಳ್ಳುವ ಬಲವಾದ ಹೊಟ್ಟೆಯುಳ್ಳವನು, ಪಾಮ್ಬು ಅಣೈಯಾನ್ பாம்பு அணையான் = ಹಾವಿನ ಹಾಸಿಗೆಯುಳ್ಳವನು ಆದ ಭಗವಂತನ, ಶೀರ್ ಕಲನ್ದ ಶೊಲ್ சீர் கலந்த சொல் = ಶ್ರೇಷ್ಠಗುಣಗಳಿಂದ ತುಂಬಿದ ಮಾತುಗಳನ್ನು (ತಿರುನಾಮಗಳನ್ನು), ನಿನೈನ್ದು நினைந்து = ನೆನೆದು, (ಚಿಂತಿಸುತ್ತಾ), ಪೋಕ್ಕಾರ್ ಏಲ್ போக்கார் ஏல் = ಕಾಲಕಳೆಯುವರಾದರೆ, ಶೂೞ್ ವಿನೈಯಾಲ್ சூழ் வினையால் = ಸುತ್ತಿಕೊಂಡಿರುವ ಪಾಪಗಳಿಂದ ತುಂಬಿದ, ತುಯರೈ துயரை = ದುಃಖವನ್ನು, ಎನ ನಿನೈನ್ದು என் நினைந்து = ಏನನ್ನು ನೆನೆಯುತ್ತಾ (ಚಿಂತಿಸುತ್ತಾ), ಪೋಕ್ಕುವರ್ போக்குவர் = ಹೋಗಲಾಡಿಸುವರು, ಇ(ಪ್ಪೋದು இ) போது = ಈಗ.

ಕಾರ್ಮುಗಿಲನ್ನು ಹೋಲುವ ರೂಪ (ಬಣ್ಣ)ವುಳ್ಳವನು, ಕೈಯಲ್ಲಿ ಧರಿಸಿದ ಚಕ್ರಾಯುಧವುಳ್ಳವನು, ಲೋಕಗಳೆಲ್ಲವನ್ನೂ ಅಡಗಿಸಿಕೊಳ್ಳುವ ಬಲವಾದ ಹೊಟ್ಟೆಯುಳ್ಳವನು, ಹಾವಿನ ಹಾಸಿಗೆಯುಳ್ಳವನೂ ಆದ ಭಗವಂತನ ಶ್ರೇಷ್ಠವಾದ ಗುಣಗಳಿಂದ ತುಂಬಿದ ತಿರುನಾಮಗಳನ್ನು ನೆನೆಯುತ್ತಾ (ಚಿಂತಿಸುತ್ತಾ) ಕಾಲಕಳೆಯುವವರಾದರೆ, ಸುತ್ತಿಕೊಂಡಿರುವ ಪಾಪಗಳಿಂದ ತುಂಬಿದ ದುಃಖವನ್ನು ಏನನ್ನು ನೆನೆಯುತ್ತಾ (ಚಿಂತಿಸುತ್ತಾ) (೮೮)
ಈಗ ಹೋಗಲಾಡಿಸುವರು?

ಭಗವಂತನ ಬಣ್ಣವನ್ನು ಗುಣವನ್ನು ಹೋಲುವ ಕಾರ್ಮುಗಿಲನ ಪುಣ್ಯವಿಶೇಷವನ್ನು ತಿಳಿಸಲು ಬಂದಿನ ಪಾಶುರ ಹೇಳಿಕೆ. ಇಲ್ಲಿ, ಭಗವನ್ನಾಮ ಸ್ಮರಣೆ ಚಿಂತನೆಗಳನ್ನು ಮಾಡುತ್ತಾ, ಭಗವದ್ಗುಣಾನುಭವ ಮಾಡುತ್ತ ಕಾರಣ ಹೇಳಿರಬಹುದು ಎಂದು ಅವರ ಕಾಲಕಳೆಯಲು ಬೇಕೆಂಬುದಕ್ಕೆ ಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಕಾರ್ಮುಗಿಲಂತೆ ಅತ್ಯಂತ ಸುಂದರನೂ, ಪರಮಸಮರ್ಥನೂ, ಸಕಲಲೋಕರಕ್ಷಕನೂ, ನಿರವದ್ಯನೂ ಆದ ಭಗವಂತನ ದಿವ್ಯ ಕಲ್ಯಾಣಗುಣಗಳನ್ನು ಸ್ಮರಿಸುತ್ತಾ, ಚಿಂತಿಸುತ್ತಾ ಬಾಳ್ವೆಯನ್ನು ನಡೆಸುವ ಜನರಿದ್ದಾರಲ್ಲ! ಅವರಿಗೆ ಸುತ್ತಿಕೊಂಡಿರುವ ಪಾಪರಾಶಿಯಿಂದ ಆಗುವ ದುಃಖ ಸಂಕಟಗಳನ್ನು ಅವರು ಏನನ್ನು ನೆನೆದು ಚಿಂತಿಸುತ್ತಾ ಅವುಗಳನ್ನು ನೀಗಿಕೊಳ್ಳುತ್ತಾರೆ?

ಪ್ರಸ್ತುತ ಪಾಶುರದಲ್ಲಿರುವ ಆಳ್ವಾರರ ವಚನ ಧ್ಯೇಯಂ ಸ್ಪಷ್ಟವಾದದ್ದು: ಭಗವದ್ಗುಣಾನುಭವವನ್ನು ಬಿಡಬಾರದೆಂದೇ ಮಾಡುತ್ತಿರ

ಜೀವನವನ್ನು ಸಾಗಿಸುವವರು, ತಮಗೆ ಜನ್ಮ ಜನ್ಮಗಳಿಂದಲೂ ಅಂಟಿರುವ ಹಿರಿಯ ಪಾಪರಾಶಿಯನ್ನೆಲ್ಲಾ ಆ ಭಗವತ್ಕೃಪೆಯಿಂದಲೇ ನಾಶಪಡಿಸಿಕೊಳ್ಳುತ್ತಾರೆ ಎಂದರ್ಥ. ಇದರಿಂದ ಎರಡು ವಿಧಗಳು ತೋರಿಯುತ್ತವೆ; ಪಾಪವಿಮೋಚನೆಯೊಂದು, ಪರಮಪದ ಪ್ರಾಪ್ತಿ ಇನ್ನೊಂದು — ಎಂದೇ.

87. இப்போது மின்னு மினிச்சிறிது நின்றாலும், எப்போ எப்போது மீதே சொல் என்னெஞ்சே!, – எப்போது
கைகழலா நேமியான் நம்மேல் வினைகடிவான்,
மொய் கழலே யேத்த முயல்.

ಇಪ್ಪೋದುಮ್ ಇನ್ನುಮ್ ಇನಿಚ್ಚಿಱಿದು ನಿನ್ಱಾಲುಮ್,
ಎಪ್ಪೋದುಮ್ ಈದೇ ಶೊಲ್ ಎನ್ನೆಂಜೇ!, – ಎಪ್ಪೋದುಮ್
ಕೈಕಳಲಾ ನೇಮಿಯಾನ್ ನಮ್ಮೇಲ್ ವಿನೈಕಡಿವಾನ್,
ಮೊಯ್ ಕಳಲೇ ಏತ್ತ ಮುಯಲ್.

ಇಪ್ಪೋದುಮ್ இப்போதும் = ಈಗಲೂ (ಈಕ್ಷಣದಲ್ಲೂ), ಇನ್ನು ಇನಿ ಶಿಱಿದು இனிச்சிறி ಮ್ இன்னும் = ಇನ್ನು ಮುಂದೆಯೂ, நின்றாலும் = (ಭೂತಕಾಲ) ದು = ಇನ್ನು ಸ್ವಲ್ಪವೇ, ನಿನ್ಱಾಲುಮ್ நின்றாலும் = ನಿಲ್ಲದೆಯಾದ ಒಳ್ಳೆಯದ್ದಾಗ, ಎಪ್ಪೋದುಮ್ எப்போதும் = ಈ ವಿಷಯವನ್ನೇ (ಭಗವಲ್ಲಾಭ) ಎಂಬುದಂತೆ, ಈದೇ ஈதே = ಈ ವಿಷಯವನ್ನೇ (ಭಗ ವದ್ಗುಣಾನುಭವವನ್ನೇ), ಶೊಲ್ சொல் = ಹೇಳು, ಎನ್ ನೆಂಜೇ ನ್ ನೆಂಜೇ = ನನ್ನ ಮನಸ್ಸೇ, ಎಪ್ಪೋದುಮ್ எப்போதும் = ಎಲ್ಲಾ ಕಾಲದಲ್ಲೂ, ಕೈ ಕಳಲಾ கைகழலா = ಕೈ ಬಿಡದಂತೆ (ಎಲ್ಲಾ ಕಾಲದಲ್ಲೂ), ನೇಮಿಯಾನ್ நேமியான் = ಚಕ್ರವನ್ನು ಹಿಡಿದಿರುವವನು, ನಮ್ಮೇಲ್ நம்மேல் = ನಮ್ಮ ಮೇಲೆ ಇರುವ ಚಕ್ರಾಯುಧವನ್ನುಳ್ಳವನು, ನಮ್ಮ ಮೇಲ್ நம்மேல் = ನಮ್ಮ ಮೇಲೆ ಇರುವ, ವಿನೈ வினை = ಪಾಪವನ್ನು, ಕಡಿವಾನ್ கடிவான் = ನಾಶ ಮಾಡುವವನು, ಮೊಯ್ ಕಳಲೇ மொய் கழலே = ಬಲಿಷ್ಠವಾದ ಪಾದವನ್ನು, ಏತ್ತ ஏத்த = ಸ್ತುತಿಸಲು, ಮುಯಲ್ முயல் = ಪ್ರಯತ್ನಿಸು ಎಂದರ್ಥ.

ಈಗಲೂ, ಇನ್ನು ಮುಂದೆಯೂ, ಭೂತಕಾಲ ಇನ್ನು ಸ್ವಲ್ಪವೇ ಒಳ್ಳೆಯದ್ದಾಗ ನಿಲ್ಲ ಎಂಬುದಂತೆ ಇದನ್ನೇ – ಭಗವನ್ನಾಮವನ್ನೇ, ಅವನ ಗುಣಾನುಭವವನ್ನೇ – ಹೇಳುತ್ತಿರು, ನನ್ನ ಮನಸ್ಸೇ!

Garani Srinivasan

ಎದೆ ಬಿಡದಂತೆ, ಎಲ್ಲ ಕಾಲದಲ್ಲೂ, ಕೃಷ್ಣನನ್ನು ಬಿಟ್ಟಗಲದೆ ಇರುವ ಚಿತ್ತ
ಯುದ್ಧವನ್ನು ಕ್ಷಣವೂ ನಮ್ಮ ಮೇಲಿರುವ ಪಾಪರಾಶಿಯನ್ನು ನಾಶಮಾಡ
ವನ್ನು. ಬಹುಷ್ಟಾಗಿ ಅವನ ತಿರುವಡಿಗಳನ್ನೇ ಪ್ರಾರ್ಥನೆ ಉಕ್ತದ (87)
ತೊಳ್ಳು.

ಪೆರಿಯ ತಿರುವಂದಾದಿಯ ತನಿಯ ಮುಗಿಯಿತು. ಇತರ ತಿರುವಂದ
ಗಳಲ್ಲಿರುವಂತೆ, ಇಲ್ಲಿ ಬರೆದಿರುವ ವಿಷಯವಿಲ್ಲ. ಅದಕ್ಕೆ ಬದಲ
ಆ, ಆಳ್ವಾರರು ತಮ್ಮ ಮನಸ್ಸನ್ನು ಬಿಟ್ಟಿಯ ಮಾತಿನಿಂದ ಸಂಪ್ರದಾಯ
ಬಿಡಿಸಿಕೊಳ್ಳುವದಾಗಿದೆ.

ಆಳ್ವಾರರು ಹೇಳುತ್ತಾರೆ: ನನ್ನ ಮನಸ್ಸೇ, ನಮ್ಮ ಬೀಳಿಕೆ ಕಾಲ
ಇನ್ನು ಮುಂದೆ ಎಷ್ಟೇ ಅಲ್ಪವಾಗಿದೆ ಎಂದರೂ ಚಿಂತಿಸಬಿಲ್ಲ. ಕೇಳು
ದಲೂ, ಕದೆಯುಂಟಿನ ಪರಿಗಾ ನೀನು ಧ್ಯಾನವನ್ನು ಮುಚಿಂತನೆಯನ್ನು
ಧ್ಯಾನದಲ್ಲಿಯೂ ಧ್ಯಾನವನ್ನು ಮಾಡುತ್ತಿರು. ಅವನ ಕೃಷ್ಣನನ್ನವನ ಕ್ಲೇ
ಶದ ಚಿತ್ರೆಯುದ್ಧವುಳ್ಳ ಅವನು ನಮ್ಮ ಮೇಲಿರುವ ಪಾಪರಾಶಿಯನ್ನ
ನಿಮೂರ್ಲಗೊಳಿಸುವನು. ಪರಮ ಸಮುದ್ರನಾದ ಅವನ ತಿರುವಡಿಗ
ನ್ನತ್ರಯನು. ಅವುಗಳನ್ನು ಉಕ್ತದಿಂದ ಪ್ರಾರ್ಥಿಸು. 10/4/8-

Garani Srinivasan

Garani Srinivasan

10.11.82

- ಶ್ರೀ: - (1) - ಶ್ರೀಯ್ಯೆನಮಃ -

ದಿವ್ಯಪ್ರಬನ್ಧಮ್ - ಮೂರನೆಯ ಸಾವಿರ - ತಿರುವಾಶಿರಿಯಮ್

திவ்யப்ரபந்தம் - மூன்றாவதாயிரம் - திருவாசிரியம்.

ತನಿ - தனியன்

காசினியோர் தாம் வாழக் கலியுகத்தே வந்துதித்து
ஆசிரியப் பாவதனால் அருமறைநூல் விரித்தானைத்
தேசிகனைப் பராங்குசனைத் திகழ்வகுளத் தாரானை
மாசடையா மனத்துவைத்து மறவாமல் வாழ்த்துதுமே

ಕಾಶಿನಿಯೋರ್ ತಾಮ್ ವಾಳ ಕ್ಕಲಿಯುಗತ್ತೇ ವನ್ದುದಿತ್ತು
ಆಶಿರಿಯ ಪ್ಪಾವದನಾಲರುಮಱೈನೂಲ್ ವಿರಿತ್ತಾನೈ
ತ್ತೇಶಿಗನೈ ಪ್ಪರಾಙ್ಕುಶನೈ ತ್ತಿಗಳ್ವಕುಳ ತ್ತಾರಾನೈ
ಮಾಶಡೈಯಾ ಮನತ್ತು ವೈತ್ತು ಮಱವಾಮಲ್ ವಾಳ್ತ್ತುದುಮೇ.

ಕಾಶಿನಿಯೋರ್ (ಶಾಮ) காசினியோர் தாம் = ಭೂಲೋಕವಾಸಿಗಳು, ವಾಳ வாழ = ಉಜ್ಜೀವನ ಹೊಂದಲು, ಕಲಿಯುಗತ್ತೇ கலியுகத்தே = ಕಲಿಯುಗದಲ್ಲಿ, ವನ್ದುದಿತ್ತು வந்து உதித்து = ಬಂದು ಅವತರಿಸಿ, ಆಶಿರಿಯ ಪಾ ಅದನಾಲ್ ஆசிரிய பா அதனால் = 'ತಿರುವಾಶಿರಿಯ' ಎಂಬ ಪಾಶುರಗಳಿಂದ, ಅರು அரு = ಅಪೂರ್ವವಾದ, ಮಱೈನೂಲ್ மறை நூல் = ವೇದ ಶಾಸ್ತ್ರಗಳನ್ನು, ವಿರಿತ್ತಾನೈ விரித்தானை = ವಿವರಿಸಿದವನನ್ನು, ತೇಶಿಗನೈ தேசிகனை = ಆಚಾರ್ಯನನ್ನು (ಮಾರ್ಗದರ್ಶಕನನ್ನು), ಪರಾಙ್ಕುಶನೈ, பராங்குசனை = ಪರಾಂಕುಶನೆಂದು ಹೆಸರಾದವನನ್ನು, ತಿಗಳ್ திகழ் = ಬೆಳಗುವ, ವಕುಳಮ್ வகுளம் = ವಕುಳ ಪುಷ್ಪಗಳ, ತಾರಾನೈ தாரானை = ಮಾಲೆಯುವನನ್ನು, ಮಾಶ್ ಅಡೈಯಾ மாசு அடையா = ಕಳಂಕವನ್ನು ಹೊಂದದ, ಮನತ್ತು மனத்து = ಮನಸ್ಸಿನಲ್ಲಿ, ವೈತ್ತು வைத்து = ಇಟ್ಟುಕೊಂಡು (ಮನಃಪೂರ್ವಕವಾಗಿ), ಮಱವಾಮಲ್ மறவாமல் = ಮರೆಯದಂತೆ, ವಾಳ್ತ್ತುದುಮೇ வாழ்த்துதுமே = ಹರಸುತ್ತೇವೆ.

ಭೂಲೋಕವಾಸಿಗಳು ಉಜ್ಜೀವನಗೊಳ್ಳಲೆಂದು ಕಲಿಯುಗದಲ್ಲಿ ಬಂದು ಅವತರಿಸಿ 'ತಿರುವಾಶಿರಿಯಮ್' ಎಂಬ ಪಾಶುರಗಳಿಂದ ಅಪೂರ್ವವಾದ ವೇದ ಶಾಸ್ತ್ರಗಳನ್ನು ವಿವರಿಸಿದವನನ್ನು, ಆಚಾರ್ಯನಾಗಿ ಮಾರ್ಗದರ್ಶಕನಾದವನನ್ನು, ಪರಾಂಕುಶನೆಂಬ ಹೆಸರುಳ್ಳವನನ್ನು, ಬೆಳಗುವ ವಕುಳ ಪುಷ್ಪಗಳ ([illegible]) ಮಾಲೆಯುವನನ್ನು ಕಳಂಕವನ್ನು ಹೊಂದದ (ಪರಿಶುದ್ಧವಾದ) ಮನಸ್ಸಿನಿಂದ ಮರೆಯದಂತೆ ಹರಸುತ್ತೇವೆ.

Garani Srinivasan

ಈ ಕಥೆಯಲ್ಲಿ 'ತಿರುವಾಯ್ಮೊಳಿ' ಎಂಬ ದಿವ್ಯಪ್ರಬಂಧವನ್ನು ರಚಿಸಿದ ಮಹನೀಯರು ಯಾರು, ಯಾವ ಉದ್ದೇಶದಿಂದ ಅದನ್ನವರು ರಚಿಸಿದರು, ಅವರಿಗೆ ನಮ್ಮ ಕರ್ತವ್ಯವೇನು ಎಂಬುದನ್ನು ಹೇಳಲಾಗುತ್ತದೆ.

ಅಪೌರುಷೇಯವಾದ ವೇದಶಾಸ್ತ್ರಗಳು ಸಂಸ್ಕೃತದಲ್ಲಿವೆ. ಅವುಗಳನ್ನು ಶ್ರಮವಾಗಿ, ಗುರುಮುಖೇನ, ಕಲಿತು ಅರಿತವರಿಗೆ ಮಾತ್ರ ಅವು ಅಭ್ಯಶಕ್ಯವು. ಸಾಮಾನ್ಯಜನಕ್ಕೆ ಅವು ಅಪರಿಚಿತ ಗ್ರಂಥಗಳು. ವೇದಶಾಸ್ತ್ರಗಳಲ್ಲಿ ಭಗವಂತನನ್ನು ಅರ್ಚಿಸಿ ಒಲಿಸಿಕೊಳ್ಳುವ ರಹಸ್ಯವನ್ನು ವಿವರಿಸಲಾಗಿದೆ. ಅದು ಎಲ್ಲರಿಗಾಗಿ ಎಂದರೆ, ಮನುಷ್ಯನಾಗಿ ಹುಟ್ಟಿದವರಿಗೆಲ್ಲ ಬೇಕಾದದ್ದು. ಸುಲಭಸಾಧ್ಯವಲ್ಲದ ಈ ವೇದಶಾಸ್ತ್ರಗಳನ್ನು, ತಮಿಳು ಭಾಷೆಯಲ್ಲಿ, ಸರಳವಾದ ರೀತಿಯಲ್ಲಿ, ಸಾಮಾನ್ಯಜನರಿಗೆ ಅರ್ಥವಾಗುವಂತೆ ತಿಳಿಯ ಹೇಳಿದವರು 'ಮಾರನ್' ಎಂಬ ಹೆಸರುಳ್ಳ ಶಠಗೋಪ ಮಹಾಮುನಿಗಳು. 'ಶಠ'ವೆಂಬ ವಾಯುವನ್ನು ಜಯಿಸಿದ್ದರಿಂದ ಇವರನ್ನು 'ಶಠಗೋಪ'ರೆಂದೂ, ಯಾವಾಗಲೂ ವಕುಳಪುಷ್ಪದ (ಪಾದರಿಹೂವಿನ) ಹಾರವನ್ನು ಧರಿಸಿದ್ದರಿಂದ 'ವಕುಳಾಭರಣ'ರೆಂದೂ, ಪರಮತಗಳಿಗೆ ಅಂಕುಶಪ್ರಾಯರಾದ್ದರಿಂದ 'ಪರಾಂಕುಶ'ರೆಂದೂ, ಸಂಸಾರವೆಂಬ ಬಂಧನದಿಂದ ಬಿಡುಗಡೆಯಾಗುವುದಕ್ಕೆ ತಕ್ಕ ಸುಲಭೋಪಾಯವನ್ನು ಉದಾರವಾಗಿ ಎಲ್ಲರಿಗೂ ಬೋಧಿಸಿದರಾದ್ದರಿಂದ 'ದೇಶಿಕ' (ಮಾರ್ಗದರ್ಶಕ, ಆಚಾರ್ಯ)ರೆಂದೂ, ಎಲ್ಲರಿಗೂ ಪ್ರಿಯವಾದ ಆಳ್ವಾರರಾದ್ದರಿಂದ 'ನಮ್ಮಾಳ್ವಾರ್' ಎಂದೂ ಇವರನ್ನು ಕರೆಯುತ್ತಾರೆ.

ಶಠಗೋಪರು ರಚಿಸಿರುವುದು ನಾಲ್ಕು ದಿವ್ಯಪ್ರಬಂಧಗಳು. 'ತಿರುವಿರುತ್ತಮ್' ಎಂಬುದು ಋಗ್ವೇದದ ಸಾರವೆಂದೂ, 'ತಿರುವಾಶಿರಿಯಮ್' ಎಂಬುದು ಯಜುರ್ವೇದದ ಸಾರವೆಂದೂ, 'ತಿರುವಾಯ್ಮೊಳಿ' ಎಂಬುದು ಸಾಮವೇದದ ಸಾರವೆಂದೂ, 'ಪೆರಿಯ ತಿರುವಂದಾದಿ' ಎಂಬುದು ಅಥರ್ವವೇದದ ಸಾರವೆಂದೂ ಬಲ್ಲವರು ಹೇಳುತ್ತಾರೆ. ಈ ವಿವರಣೆಯಿಂದ 'ತಿರುವಾಯ್ಮೊಳಿ'ಯ ಮಹತ್ವವೇನು ಎಂಬುದು ಅರಿವಾಗುತ್ತದೆ.

ಕಥೆ ಹೇಳುತ್ತದೆ: ಜನಲೋಕವಾಸಿಗಳು ಸಂಸಾರವೆಂಬ ಸಂಕಟದಿಂದ ಪಾರಾಗಲೆಂಬ ಹೆಬ್ಬಯಕೆಯಿಂದ, 'ತಿರುವಾಯ್ಮೊಳಿ' ಎಂಬುದರ ಮೂಲಕ ಅವರಿಗೆ ಮಾರ್ಗದರ್ಶನ ಮಾಡಿದ ಆಚಾರ್ಯರಾದ (ದೇಶಿಕ) ಪರಾಂಕುಶ ಮುನಿಗಳನ್ನು ಪರಿಶುದ್ಧವಾದ ಮನದಿಂದ ನಾವು ಕೃತಜ್ಞತೆಯ ಭಾವದಲ್ಲಿ ಹರಸೋಣ.

12.11.82

-శ్రీః- ③ -శ్రీయై నమః-

దివ్యప్రబన్ధము - మూణ్ఱావదాయిర - తిరువాశిరియము

திவ்ய ப்ரபந்தம் - மூன்றாவதாயிரம் - திருவாசிரியம்

1. செக்கர்மா முகிலுடுத்து மிக்க செஞ்சுடர்ப்
பரிதிசூடி, அஞ்சுடர் மதியம்பூண்டு,
பலசுடர் புனைந்து பவளச்செவ்வாய்,
திகழ் பசுஞ்சோதி மரதகக் குன்றம்,
கடலோன் கைமிசைக் கண்வளர்வது போல்,
பீதகவாடை முடிபூண் முதலா,
மேதகு பல்கலனணிந்து, சோதி
வாயவும் கண்ணவும் சிவப்ப, மீதிட்டுப்
பச்சை மேனி மிகப்பகைப்ப,
நச்சுவினைக் கவர்தலை யரவினமளியேறி,
எறிகடல் நடுவுளறிதுயிலமர்ந்து,
சிவனய னிந்திர னிவர்முத லனைத்தோர்,
தெய்வக் குழாங்கள் கைதொழக் கிடந்த,
தாமரை யுந்தித் தனிப்பெரு நாயக!,
மூவுலகளந்த சேவடியோயே!

శెక్కర్మా ముగిలుడుత్తు మిక్క శెంజుడర్
ప్పరిది శూడి, అంజుడర మదియమ్ పూణ్డు,
పలశుడర్ పునైన్దు పవళచ్చెవ్వాయ్,
తిగళ్ పశుంజోది మరదగ క్కున్ఱమ్,
కడలోన్ కైమిశై క్కణ్వళర్వదు పోల్,
పీదగవాడై ముడిపూణ్ ముదలా,
మేదగు పల్కలనణిన్దు, శోది
వాయవుమ్ కణ్ణవుమ్ శివప్ప, మీదిట్టు
ప్పచ్చై మేని మిగప్పగైప్ప,
నచ్చు వినై క్కవర్తలై యరవినమళియేఱి,
ఎఱికడల్ నడువుళ్ ఱిదుయిలమర్న్దు,
శివనయ నిన్దిర నివర్ ముదలనైత్తోర్,
దెయ్వ క్కుళాఙ్గళ్ కైతొళక్కిడన్ద,
తామరై యున్దిత్తనిప్పెరు నాయగ!,
మూవులగళన్ద శేవడియోయే!

Galani Srinivasan

ಶೆಕ್ಕರ್ செக்கர் = ಸಂಜೆಗೆಂಪಾದ, ಮಾ மா = ಬಲುದೊಡ್ಡ, ಮುಗಿಲ್ முகில் =
ಮೋಡವನ್ನು, ಉಡುತ್ತು உடுத்து = ಉಟ್ಟುಕೊಂಡು, ಮಿಕ್ಕ மிக்க = ಬಹಳ, ಶೆಮ್
ಶುಡರ್ செம் சுடர் = ಕೆಂಪು ಕಿರಣಗಳನ್ನು (ಸೂರ್ಯನ[illegible]), ಪರಿದಿ பரிதி = ಪರಿವೇ-
ಷವನ್ನು (ಸುತ್ತ ಇರುವ ವಿಶಿಷ್ಟವಾದ ಬೆಳಕನ್ನು), ಶೂಡಿ சூடி = ಮುಡಿದು (ಶಿಖರದಲ್ಲಿ ಧರಿಸಿ)
ಅಮ್ ಶುಡರ್ அம் சுடர் = ಸೊಬಗಿನ ಕಿರಣಗಳ, ಮದಿಯಮ್ மதியம் =
ಚಂದ್ರನನ್ನು, ಪೂಣ್ಡು பூண்டு = (ಆಭರಣದಂತೆ) ಧರಿಸಿ, ಪಲ ಶುಡರ್ பல சுடர் =
ಹಲವಾರು ಜ್ಯೋತಿ(ನಕ್ಷತ್ರ)ಗಳನ್ನು, ಪುನೈನ್ದು புனைந்து = ಅಲಂಕರಿಸಿಕೊಂಡು,
ಪವಳಮ್ பவளம் = ಹವಳದಂತೆ, ಶೆವ್ವಾಯ್ செம் வாய் = ಕೆಂದುಟಿ
ಮರಕತಕ್ಕುನ್ರಮ್ மரகதக் குன்றம் = ಮರಕತರತ್ನದ
ನಗ, ಮರಕತದ [illegible]
[illegible]; ಕಡಲೋನ್ கடலோன் = ಸಮುದ್ರರಾಜನ, ಕೈ ವಿರಿತ್ತ [illegible]
ಕಣ್ ವಳರ್ವದು ಪೋಲ್ கண் வளர் [illegible] = ಕೈಗಳಲ್ಲಿ (ಕೊಳಗಳಲ್ಲಿ), [illegible]
ವತ್ತು போல் = ಮಲಗಿರುವಂತೆ, ಪೀತಕ பீதக = ಹಳದಿಯ, ಆಡೈ ஆடை
= ವಸ್ತ್ರವನ್ನು (ಪೀತಾಂಬರವನ್ನು), ಮುಡಿ ಪೂಣ್ முடி பூண் = ಕಿರೀಟ,
ಮುದಲಾ முதலா = ಮೊದಲಾದ, ಮೇದಗು மேதகு = ಬಲು ಶ್ರೇಷ್ಠವಾದ, ಪಲ್
பல் = ಹಲವಾರು, ಕಲನ್ ಅಣಿನ್ದು கலன் அணிந்து = ಆಭರಣಗಳನ್ನು
ಧರಿಸಿ, ಶೋದಿ சோதி = ಬೆಳಗುವ, ವಾಯ್ ಅವುಮ್ வாய் அவும் =
ತುಟಿಗಳನ್ನು, ಕಣ್ ಅವುಮ್ கண் அவும் = ಕಣ್ಣುಗಳನ್ನು, ಶಿವಪ್ಪ
சிவப்ப = ಕೆಂಪನ್ನು, (ಕೆಂಪಾಗಿರಲು), ಮೀದಿಟ್ಟು மீதிட்டு = ಮೇಲೆ ಜೋಡಿಸಿ
ರುವ, ಪಚ್ಚೈ ಮೇನಿ பச்சை மேனி = ಪಚ್ಚೆಯ ಬಣ್ಣದಿಂದ ಶೋಭಿಸುವ ದೇಹ(ಕಾಂತಿ)
ವು, ಮಿಗ மிக = ಬಹುವಾಗಿ, ಪಗೈಪ್ಪ பகைப்ப = (ಪರಸ್ಪರ) ವೈವಿಧ್ಯಮಯವಾಗಿ,
ನಚ್ಚು நச்சு = ವಿಷದ (ನಂಜಿನ), [illegible] = ಕಾಯವನ್ನು ಮೂಡುವ, ಕವರ್
ತಲೈ கவர் தலை = ಹರಡಿರುವ ತಲೆಯುಳ್ಳ, ಅರವು அர[illegible]வு = ಸರ್ಪದ,
ಅಮಳಿ அமளி = ಹಾಸುಗೆಯನ್ನು,
ಇನ್ இன் = ಇನಿದಾದ (ಸುಖಕರವಾದ), ಎಱಿ ಕಡಲ್ எறி கடல் = ಅಲೆಗಳಿಂದ ತುಂಬಿದ ಕಡಲಿನ,
ಎಱಿ எறி = ಶಕ್ತಿ, ಅಱಿ ತುಯಿಲ್ அறிதுயில் = ಯೋಗನಿದ್ರೆ
ನಡುವುಳ್ நடுவண் = ನಡುವೆ,
ಯನ್ನು, ಅಮರ್ನ್ದು அமர்ந்து = ಇದ್ದು, ಶಿವನ್ சிவன் = ಶಿವನೂ, ಅಯನ್
அயன் = ಚತುರ್ಮುಖನೂ (ಅಜನೂ), ಇನ್ದಿರನ್ இந்திரன் = ದೇವೇಂದ್ರನೂ,
ಇವರ್ ಮುದಲ್ இவர் முதலோர் = ಇವರೇ ಮೊದಲಾಗ, ಅನೈತ್ತೋರ್ அனைத்
தோர் = ಎಲ್ಲರೂ, ದೆಯ್ವ ಕ್ಕುೞಾಂಗಳ್ தெய்வக் குழாங்கள் =
ದೇವತೆಗಳ ಗುಂಪುಗಳೂ, ಕೈತೊೞ கைதொழ = ಕೈಮುಗಿಯಲು,
ಕಿಡನ್ದ கிடந்த = ಪವಡಿಸಿರುವ, ತಾಮರೈ ಉನ್ದಿ தாமரை உந்தி =

Gerani Srinivasan

ತಾವರೆಹೂವನ್ನು ಹೊಕ್ಕುಳಲ್ಲಿ ಉಳ್ಳ, ತನಿ ಕ್ಕಣ್ಣಿ = ವಿಶಿಷ್ಟನಾದ, ಪೆರು ನಾಯಗ ಉಲಗು
ಯಾನ = ಸರ್ವೇಶ್ವರನೇ, ಮೂ ಉಲಗು ಉಣ್ಡ ಉಲಗು = ಮೂರು ಲೋಕಗಳನ್ನು, ಅಳಿದ
ಅಗಾಧ = ಅಳೆದುಕೊಂಡ, ಕೋ ಅಡಿಯೋಳಯೀ ಕೋ ಅಡಿಯೋಗಳು = ಕೋ
ಮಲವಾದ (ಸುಂದರವಾದ) ತಿರುವಡಿಗಳುಳ್ಳವನೇ.

ಸಂಜೆಗೆಂಪಿನ ಬಲು ದೊಡ್ಡ ಮುಗಿಲನ್ನುಟ್ಟು, ಬದಲು ಕೆಂಪು ತೇಜಸ್ಸನ್ನುಳ್ಳ ಸೂರ್ಯ
ನ ಸುತ್ತ ಇರುವ ವಿಶಿಷ್ಟವಾದ ಬೆಳಕನ್ನು ಶಿಖರದಲ್ಲಿ ಧರಿಸಿ, ಸೊಬಗಿನ ಕೆಲಜನ್ನಿನ ಚಂದ್ರ
ನನ್ನು ಆಭರಣದಂತೆ ಧರಿಸಿ, ಹಲವಾರು ಜ್ಯೋತಿ (ನಕ್ಷತ್ರ)ಗಳನ್ನು ಅಲಂಕರಿಸಿಕೊಂಡು,
ಹವಳದಂತೆ ಚೆಂದುಟಿಗಳನ್ನುಳ್ಳ, ಮರಕತರತ್ನದ ವಿವರತವು ಸಮುದ್ರರಾಜನ ಕೈಗ
ಳಲ್ಲಿ ಮಡಿಸಿರುವದಾಗ, ಪೀತಾಂಬರವನ್ನುಟ್ಟು, ಕಿರೀಟವೇ ಮೊದಲಾದ ಬಹು
ಶ್ರೇಷ್ಠವಾದ ಹಲವಾರು ಆಭರಣಗಳನ್ನು ಧರಿಸಿ, ಬೆಳಗುವ (ಕಾಂತಿಯುತ) ಕುಟಿಗಳನ್ನು
ಕಣ್ಣುಗಳನ್ನು ಹೊಂದಿರುವ ಪಚ್ಚೆ ಬಣ್ಣದಿಂದ ಹೊಳೆಯುವ ದೇಹವು ಅತ್ಯಂತ
ವೈವಿಧ್ಯಮಯವಾಗಿಯೂ, ವಿಷ್ಣುದ ಕೆಲಸದ ಹರಡಿರುವ ಕಲೆಯನ್ನುಳ್ಳ ಸವಿನಯ
ಸುಖಕರವಾದ ಹಾಸಿಗೆಯಲ್ಲಿ ಅಲೆಗಳಿಂದ ತುಂಬಿದ ಕಡಲಿನ ನಡುವೆ ಯೋಗನಿದ್ರೆ
ಯನ್ನು ಹೊಂದು, ಶಿವನೂ, ಬ್ರಹ್ಮನೂ (ಅಜನೂ), ದೇವೇಂದ್ರನೂ, ಇವರೇ ಮೊದ
ಲಾದ ಎಲ್ಲ ದೇವತೆಗಳ ಕೂಟಗಳೂ ಸ್ತುತಿ ಮಾಡುತ್ತಿಯುನಂತೆ, ಪವಡಿಸಿರುವ ಸರ್ವಾ
ಭನಾದ ಅತಿಶ್ರೇಷ್ಠನಾದ ಸರ್ವೇಶ್ವರನೇ, ಮೂರು ಲೋಕಗಳನ್ನು ಅಳೆದುಕೊಂ (1)
ಡ ಕೋಮಲವಾದ (ಸುಂದರವಾದ) ತಿರುವಡಿಗಳುಳ್ಳವನೇ!

ಸರ್ವೇಶ್ವರನ ದಿವ್ಯಮಂಗಳ ಸ್ವರೂಪವನ್ನು - ಎಂದರೆ, ಭಗವಂತನ ಸಾಕಾರ
ಸ್ವರೂಪವನ್ನು - ಇಲ್ಲಿ ಆಳ್ವಾರರು ವಿವರಿಸ ಕೊಡುತ್ತಿದ್ದಾರೆ. ಯಾವುದಕ್ಕೂ ಸಾಟಿ-
ಯಿಲ್ಲದ, ಎಲ್ಲ ಬಗೆಯಲ್ಲೂ ಸರ್ವಶ್ರೇಷ್ಠನೂ, ಪರಮಸುಂದರನೂ ಆದ ಭಗವಂತ
ನನ್ನು ನಮ್ಮಂಥ ಸಾಮಾನ್ಯ ಜನರಿಗೆ ವಿವರಿಸಿ ಹೇಳುವುದಾದರೂ ಹೇಗೆ? ನಮ್ಮ
ಅನುಭವದಲ್ಲಿಯೇ ಇರುವ ಯಾವುದಾದರೊಂದು ಅಪರೂಪವಾದ ವಸ್ತುವನ್ನು
ಎತ್ತಿಕೊಂಡು, ಅದರ ಸೊಬಗನ್ನು ಊಹೆಯಿಂದ ಅನೇಕ ಪಟ್ಟು ಹೆಚ್ಚಿಸಿಕೊಂಡು,
ಆ ಮೂಲಕ ಭಗವಂತನನ್ನು ಅರಿಯಬಹುದಾದ ಮಾರ್ಗವನ್ನು ಇಲ್ಲಿ ಅನುಸರಿಸ
ಲಾಗಿದೆ.

ಭಗವಂತನ ಒಂದೊಂದು ಅವಯವವನ್ನೂ, ಅಂಗ, ಬೇರೆ ಬೇರೆ ವಸ್ತುಗ
ಳೊಡನೆ ಹೋಲಿಸಿ, ವರ್ಣಿಸಿ ಹೇಳಬಹುದಾಗಿರುವಾಗ, ಅವನನ್ನು ಪರಿಪೂರ್ಣ
ವಾಗಿ ವರ್ಣಿಸಿ ತಿಳಿಯುವುದಾದರೂ ಸಾಧ್ಯವೇ? ಇದಕ್ಕಾಗಿ, ಇಲ್ಲಿ ಆಳ್ವಾರರು
ಒಂದು ವಿಶಿಷ್ಟವಾದ ಉಪಮಾನವನ್ನು ಬಳಸಿಕೊಂಡಿದ್ದಾರೆ. ಇತಿಹಾಸ, ಪುರಾ
ಣಾದಿ ಮಹಾಕಾವ್ಯಗಳಲ್ಲಿ ಬಳಸುವ ಕಾವ್ಯೋಪಮಾನಗಳ ಹಾಗೆಂದೇ ಇಲ್ಲಿರು
ವ ಉಪಮಾನ. ಸಾಮಾನ್ಯ ಉಪಮಾನದಂತಲ್ಲದೆ, ~~ಇದು~~ ಇದರ ಎರಡು ಭಾಗಗಳೂ
ಬೆಳೆಯುತ್ತಾ ಹೋಗುತ್ತವೆ. ಎರಡು ಭಾಗಗಳಿಗೂ ನಿಖರವಾದ ಹೋಲಿಕೆ ಕಲ
ಸ್ಪಷ್ಟ ಕಂಡುಬರದಿರಬಹುದು. ಅಪ್ಪಟ ಅಪ್ಪಟವಾಗಿಯೇ ಜೋಡಣೆ

ಯಾಗಿರಬಹುದು.

ಇಲ್ಲಿ ಬಳಸಿರುವ ಕಾವ್ಯೋಚಿತ ಉಪಮಾನದ ವೈಶಿಷ್ಟ್ಯವನ್ನು ನೋಡೋಣ. ಉಪಮಾನದ ಪೂರ್ವಭಾಗದಲ್ಲಿರುವುದು: ಒಂದು ದೊಡ್ಡ ಬೆಟ್ಟ. (ಅದನ್ನು ಅಂಜನಾಚಲ ಎನ್ನಬಹುದೇನೋ!). ಅದು ಬಲು ದೂರದಲ್ಲಿದೆ. ಸೂರ್ಯನು ಅದರಿಂದ ಮರೆಯಾಗುವುದರಲ್ಲಿದ್ದಾನೆ. ಸೂರ್ಯನ ಹೊಂಬೆಳಕು (ಅದನ್ನು) ಅದರ ಸುತ್ತಲೂ ಇರುವ ಮೋಡಗಳನ್ನು ಸಂಜೆಗೆಂಪಿನ ಸುಂದರವಾದ ಬಣ್ಣದಿಂದ ಹೊಳೆಯುತ್ತದೆ. ಸೂರ್ಯನು ತನ್ನ ಕಿರಣಗಳನ್ನು ಅದರ ಶಿಖರದಲ್ಲಿ ಹರಡಿ ಹೊಳೆಯುತ್ತಿದ್ದಾನೆ. ಕೆಂಬಣ್ಣದ ಬೆಳಕನ್ನುಳ್ಳ ಮರಕತರತ್ನದ ಹಾಗೆ ಆ ಬೆಟ್ಟ ಆಕರ್ಷಕವಾಗಿ ಕಾಣಿಸುತ್ತದೆ. ಚಂದ್ರನೂ ತಾರೆಗಳೂ ಆ ಬೆಟ್ಟ ಬೆಳಗುತ್ತಾ ಬೆಟ್ಟಕ್ಕೆ ಬಗೆಬಗೆಯ ಆಭರಣಗಳನ್ನು ಜೋಡಿಸಿದಂತೆ ಕಂಗೊಳಿಸುತ್ತವೆ. ಸಂಜೆಯ ಕೆಂಬಣ್ಣವು ಶಿಖರವನ್ನು ಚೆಂದುಟಿಗಳಂತೆ ಮಾಡಿದೆ. ಆ ಬೆಟ್ಟದ ಮುಂದುಗಡೆಯಲ್ಲಿ ಅಲೆಗಳಿಂದ ತುಂಬಿರುವ ಬಲು ವಿಸ್ತಾರವಾದ ಸಾಗರವಿದೆ. ಆ ಸಾಗರದಲ್ಲಿ ಶಾಂತವಾಗಿ ಆ ಬೆಟ್ಟ ~~ಮಲ~~ ಮಲಗಿರುವಂತೆ (ನಿದ್ರಿಸುತ್ತಿರುವಂತೆ) ಕಾಣಿಸುತ್ತದೆ. ಇದೆಲ್ಲ ಉಪಮಾನದ ಮೊದಲಭಾಗ.

ಉಪಮಾನದ ಉತ್ತರಭಾಗದಲ್ಲಿ (~~x~~ ಕಡೆಯ ಭಾಗದಲ್ಲಿ) ಸರ್ವೇಶ್ವರನಾದ ಭಗವಂತನ ಸಾಟಿಯಿಲ್ಲದ ರೂಪದ ವಿವರಣೆ ಕಂಡುಬರುತ್ತದೆ. ಭಗವಂತನದೇಹ ಒಂದು ದೊಡ್ಡ ಪಚ್ಚೆಯ ಬೆಟ್ಟವೇ. ಅವನು ಹೊಳೆಹೊಳೆಯುವ ಪೀತಾಂಬರವನ್ನು ಉಟ್ಟಿದ್ದಾನೆ. ಅವನ ತುಟಿಗಳು ಕೆಂಪಗೆ ಆಕರ್ಷಕವಾಗಿವೆ. ಎದೆಯಮೇಲೆ ನಾನಾ ಬಗೆಯ ರತ್ನಾಭರಣಗಳ ಅಲಂಕಾರ. ಅಲೆಗಳಿಂದ ತುಂಬಿದ ಹಾಲ್ಗಡಲಲ್ಲಿ, ಹೆಡೆಗಳನ್ನು ಬಿಚ್ಚಿ ಕೊಡೆಯಂತೆ ಹಿಡಿದಿರುವ ಶೇಷನ ಹಾಸಿಗೆಯಲ್ಲಿ ಸ್ವಾಮಿಯು ಪವಡಿಸಿ, ಯೋಗನಿದ್ರೆಯಲ್ಲಿದ್ದಾನೆ. ಬ್ರಹ್ಮ, ರುದ್ರ, ಇಂದ್ರ ಮುಂತಾದ ದೇವತೆಗಳೆಲ್ಲರೂ ಅಲ್ಲಿಗೆ ಬಂದು, ಮೂರುಲೋಕಗಳನ್ನೂ ಅಳೆದುಕೊಂಡ ಅವನ ಪವಿತ್ರವಾದ ಪಾದಗಳನ್ನು ಪೂಜಿಸುತ್ತಾರೆ. ಅವನ ನಾಭಿಯಲ್ಲಿ ಸುಂದರವಾದ ಕಮಲದ ಹೂ ಇದೆ.

ಈ ಎರಡು ಭಾಗಗಳನ್ನು ಒಂದು ಬಗೆಯಲ್ಲಿ ಅದ್ಭುತವಾಗಿ ಕೂಡಿಸಿ, ~~ಅಪೂ~~ ಅಪೂರ್ವವಾದ ರೀತಿಯಲ್ಲಿ ಜೋಡಿಸಿರುವುದೇ ಈ ಕಾವ್ಯದ ಜೀವನ. ವಿವರಣೆಯನ್ನು ನೋಡಿದರೆ ಮಹಾವಿಷ್ಣುವಾದ ಸರ್ವೇಶ್ವರನ ವಿಭಾವಕಾರವನ್ನು ಇಲ್ಲಿ ಹೇಳಲಾಗುತ್ತಿದೆ ಎನಿಸುತ್ತದೆ.

2. உலகுபடைத் துண்ட எந்தை, அறைகழல்
சுடர்ப்பூந் தாமரை சூடுதற்கு, அவாவா
ருயிருருகியுக்க, நேரிய காதல்
அன்பிலின்பீன் தேறல், அமு~~x~~த
வெள்ளத் தானாம் சிறப்பு விட்டு, ஒருபொருட்
கசைவோ ரசைக, திருவொடு மருவிய
இயற்கை, மாயாப் பெருவிறலுலகம்

Garani Srinivasan

(7)

மூன்றிரண்டு நால்வீடு பெறினும்,
கொள்வதெண்ணுமோ தெள்ளியோர் குறிப்பே?

ಉಲಕು ಪಡೈತ್ತುಣ್ಡವೆನ್ತೈ, ಅಱೈಕಲಲ್
ಶುಡರ್ ಪ್ಪೂನ್ದಾಮರೈ ಶೂಡುದಱ್ಕು-, ಅವಾವಾ
ರುಯಿರುರುಹಿಯುಕ್ಕ, ನೇರಿಯ ಕಾದ
ಲನ್ಬಿಲಿನ್ ಪಿನ್ ಕೇೞಿಲ್, ಅಮುದ
ವೆಳ್ಳತ್ತಾನಾಮ್ ಶಿಱಪ್ಪು ವಿಟ್ಟು-, ಒರು ಪೊರುಟ್ಕು
ಅಶೈವೋರಶೈಗ, ಶಿಱುವರು ಮರುವಿಯ
ಇಯಲ್ವೂಕ್ಕೈ, ಮಾಯಾ ಪ್ಪೆರುವಿೞುಮಿಯ ಉಲಗಮ್
ಮೂನ್ಱಿರಣ್ಡು ನಲ್ವೀಡು ಪೆಱಿನುಮ್,
ಕೊಳ್ವದೆಣ್ಣುಮೋ ತೆಳ್ಳಿಯೋರ್ ಕುಱಿಪ್ಪೇ?

ಉಲಕು உலகு = ಲೋಕಗಳನ್ನು, ಪಡೈತ್ತು படைத்து = ಸೃಷ್ಟಿಸಿ, ಉಣ್ಡ உண்ட = ನುಂಗಿದ, ಎನ್ತೈ எந்தை = ಸರ್ವೇಶ್ವರನ, ಅಱೈ அறை = ಧ್ವನಿಮಾಡುವ, ಕಲಲ್ கழல் = ಆಭರಣಗಳ, ಶುಡರ್ சுடர் = ಜ್ಯೋತಿಸುವ, ಪೂ பூ = ಸುಂದರವಾದ, ತಾಮರೈ தாமரை = ಕಮಲಗಳನ್ನು, ಶೂಡುದಱ್ಕು சூடுதற்கு = (ತಲೆಯಲ್ಲಿ) ಮುಡಿಯುವುದಕ್ಕೆ, ಅವಾವು அவாவு = ಆಶಿಸುವ, ಆರ್ ಉಯಿರ್ ஆர் உயிர் = ತುಂಬು ಜೀವವು (ಆತ್ಮವು), ಉರುಹಿ உருகி = ಕರಗಿ, ಉಕ್ಕ உக்க = ಶಿಥಿಲ, ನೇರಿಯ நேரிய = ಉಂಟಾದ, ಕಾದಲ್ காதல் = ಭಕ್ತಿಯಿಂ ಅನ್ಬಿಲ್ அன்பில் = ಆಶೆಯಿಂದ, ಇನ್ಬು ಇನ್ಬು = ಸಂತೋಷವನ್ನು (ಆನಂದವನ್ನು), ಕೇೞಿಲ್ கேழில் = ಮಧು [redacted] ಈನ್ ஈன் = ಕೊಡುವ, (ಉಂಟುಮಾಡುವ), ವೆಳ್ಳತ್ತಾನ್ வெள்ளத்தான் = ಪ್ರವಾಹ ಆದ, ಅಮುದಮ್ அமுதம் = ಅಮೃತದ, ಶಿಱಪ್ಪು சிறப்பு = ಹಿರಿಮೆಯಿಂದ = ಪ್ರವಾಹದಿಂದ, ಆಮ್ ஆம் = ಆಗುವ, ಶಿಱಪ್ಪು ಪೆರುಮೈಯನ್ನು, ವಿಟ್ಟು விட்டு = ಬಿಟ್ಟು (ತ್ಯಜಿಸಿ), ಒರು ಪೊರುಟ್ಕು ஒரு பொருட்கு = (ಕೀಳಾದ ಒಂದು) ಪ್ರಯೋಜನಕ್ಕಾಗಿ, ಅಶೈವೋರ್ அசைவோர் = ಅಲೆದಾಡುತ್ತಿರುವ, ಅಶೈಗ அசைக = (ಹಾಗೆಯೇ) ಅಲೆದಾಡುವವರು, ಶಿಱುವರು சிறுவரு = ಮರುವಿಯ மருவிய = ಶಿರುವರು தெருவொடு = ಶ್ರೀದೇವಿಯೊಡನೆ (ಕೂಡಿ), ಮಾಯಾ மாயா = ಕೂಡಿರುವ, ಇಯಲ್ವೂಕ್ಕೈ இயற்கை = ಸ್ವಭಾವದ, ಪೆರುವಿೞುಮಿಯ ಅತ್ಯಂತ ಸಮರ್ಥವಾದ, ಉಲಗಮ್ ನಾಶವಾದ, ಪೆರು ವಿೞುಮಿಯ பெரு விழுமிய = ಅತ್ಯಂತ, ಉಲಗಮ್ உலகம் = ಲೋಕಗಳು, ಮೂನ್ಱಿರಣ್ಡು மூன்றிரண்டு = ಮೂರರ ಎರಡರಷ್ಟು (ಮೂರು ಎರಡು), ನಲ್ ವೀಡು நல் வீடு = ಉತ್ತಮವಾದ ಮೋಕ್ಷವನ್ನು, ಪೆಱಿನುಮ್ பெறினும் = ಪಡೆದರೂ (ಪಡೆಯುವಂತಾದರೂ), ಕೊಳ್ವದು கொள்வது = ಸ್ವೀಕರಿಸುವುದು (ಸ್ವೀಕರಿಸುವುದು), ಎಣ್ಣುಮೋ எண்ணுமோ = ನಾಡುವುದೋ, ತೆಳ್ಳಿಯೋರ್ தெள்ளியோர் = ತಿಳಿದವರ, ಕುಱಿಪ್ಪೇ குறிப்பே = ಉದ್ದೇಶ.

ಲೋಕಗಳನ್ನು ಸೃಷ್ಟಿಸುವ ಮತ್ತು ಲಯಗೊಳಿಸುವ (ಅಳಿಸುವ) ಸರ್ವೇಶ್ವರನ ಸದ್ದು ಮಾಡುವ ಆಭರಣಗಳ ಹೊಳೆಯುವ ಸೊಬಗಿನ (ಪಾದ) ಕಮಲಗಳನ್ನು ತಲೆಯಲ್ಲಿ ಮುಡಿಯುವುದಕ್ಕೆ ಆಶಿಸುವ ತುಂಬು ಜೀವವು (ಆತ್ಮವು) ತನಗೆ ಕೃಶಿಸಿ (ಬಾಡಿ) ಉಂಟಾದ ಭಕ್ತಿಯೆಂಬ ಆಶೆಯಿಂದ ಹಂತವನ್ನು (ಆನಂದವನ್ನು) ತರುವ ಮಧುರವಾದ ಅಮೃತದ ಪ್ರವಾಹದಿಂದ ಆಗುವ ಹಂತಿಯನ್ನು ಬಿಟ್ಟುಕೊಟ್ಟು, ಕೀಳಾದ (ಅಲ್ಪವಾದ) ಒಂದು ಪ್ರಯೋಜನಕ್ಕಾಗಿ ಅಲೆದಾಡುವವರು ಹಾಗೆಯೇ ಅಲೆದಾಡುತ್ತಿರಲಿ. ಶ್ರೀದೇವಿಯೊಡನೆ ಕೂಡಿರುವ (ದಿಕ್ಕಿಲ್ಲದವರ ಆಶ್ರಯದಿಂದ ಕೂಡಿರುವ), ಅತ್ಯಂತ ಸಮರ್ಥವಾದ, ಮೂರು ಲೋಕಗಳಿಗಿಂತಲೂ ಉತ್ತಮವಾದ ಪಾದದ್ವಯವನ್ನು (ನೆಲೆಯನ್ನು) ಪಡೆಯುವಂತಾದರೂ ತಿಳಿದವರ ಗುರಿಯನ್ನೇ ಸ್ವೀಕರಿಸುವುದು ಸಾಧ್ಯವೋ? (೨)

ಈ ಪಾಶುರವೂ ಹಿಂದಿನ ಪಾಶುರದಂತೆ [illegible] ತುಂಬಿದೆ. ಜ್ಞಾನಿಗಳಂತೆ ಇಂತಹ ವಿಷಯವನ್ನು ಅಡಗಿಸಿಕೊಂಡು, ಸಾರವನ್ನು ಸೂಚಿಸಬೇಕಾಗಿದೆ.

ಯಾವ ಬಗೆಯ ಜೀವನ ಶ್ರೇಯಸ್ಕರ? ಸಾಮಾನ್ಯ ಗೃಹಸ್ಥ ಜೀವನವೇ? ವಿವೇಕಿಯ ಜೀವನವೇ? ಸಾಮಾನ್ಯ ಗೃಹಸ್ಥನ ಆಶೆ ಅಲ್ಪವಾದದ್ದು. ಪ್ರಾಪಂಚಿಕ ಸುಖವನ್ನು ಪಡೆದುಕೊಳ್ಳುವ ಆಶೆಮಾತ್ರ. ವಿವೇಕಿ ಬಲ್ಲ ಈ ಪ್ರಾಪಂಚಿಕ ಸುಖ ಕ್ಷಣಿಕವಾದದ್ದು ಎಂದೂ, ಶಾಶ್ವತಾನಂದವನ್ನು ಕೊಡುವ ಗುರಿಯೊಂದಿದೆಯೆಂದೂ, ಅದನ್ನು ಸಾಧಿಸಿಕೊಳ್ಳುವುದಕ್ಕೆ ನಿರತ ಪ್ರಯತ್ನ ನಡೆಸುವುದೇ ಪರಮ ಶ್ರೇಯಸ್ಸೆಂದೂ. ಆ ಗುರಿಯನ್ನು ಸೇರಲು ತಕ್ಕ ಮಾರ್ಗವನ್ನೇ ಅವನು ಅನುಸರಿಸುತ್ತಾನೆ. ಆ ಮಾರ್ಗ ಯಾವುದು?

ಹಿಂದಿನ ಪಾಶುರದಲ್ಲಿ ಸರ್ವೇಶ್ವರನಾದ ಭಗವಂತನ ನಿತ್ಯಸೌಂದರ್ಯ ಸ್ವರೂಪವನ್ನು ಸ್ವಾರಸ್ಯಪೂರ್ಣವಾಗಿ ಹೇಳಲಾಯಿತು. ಇಲ್ಲಿ ಆ ಸ್ವಾಮಿಯ ಹಿರಿಮೆಯನ್ನು ಹೇಳಲಾಗುತ್ತದೆ. ಭಗವಂತನು ಸೃಷ್ಟಿ, ಸ್ಥಿತಿ, ಲಯ ಕಾಲಗಳಲ್ಲೆಲ್ಲಾ ಸರ್ವ ರಕ್ಷಕನಾಗಿರತಕ್ಕವನು. ಅವನನ್ನು ದೃಢವಾಗಿ, ~~ಆಶ್ರಯಿಸಿ~~, ಭಕ್ತಿಪೂರ್ವಕವಾಗಿ ಆಶ್ರಯಿಸುವುದರಿಂದ, ಅಮರತ್ವವನ್ನೂ, ಸಕಲ ಸೌಭಾಗ್ಯಗಳನ್ನೂ ಅನುಭವಿಸಿ ಆನಂದಿಸುವ ಶ್ರೇಷ್ಠವಾದ ನೆಲೆಯನ್ನು ಪಡೆಯಬಹುದು. ಅದು ಹೇಗೆ? ಭಗವಂತನಲ್ಲಿ ದೃಢವಾದ ಆಶೆಯನ್ನು ತಂದುಕೊಳ್ಳುವುದು ಹೇಗೆ?

ಸರ್ವಸಮರ್ಥನೂ, ಸರ್ವರಕ್ಷಕನೂ ಆದ ಅವನ ದಾಸಿಯಲ್ಲದ ~~[illegible]~~ ಹಿಂದೆ ಯಲ್ಲಿ ಅಚಲವಾದ ವಿಶ್ವಾಸವನ್ನಿಡುವುದು. ದಿವ್ಯಾಭರಣಗಳಿಂದ ಹೊಳೆಯುವ ಅವನ ತಿರುವಡಿಗಳನ್ನು ತನ್ನ ತಲೆಯ ಮೇಲೆ ಬಿಡದೆ ಧರಿಸುವ ಆಶೆಯನ್ನು ಪೋಷಿಸಿಕೊಳ್ಳುವುದು. ಅದಕ್ಕಾಗಿ ತನು ಮನಗಳನ್ನು ಸೊರಗಿಸುವುದು. ಹೀಗೆ, ಭಕ್ತಿಯೆಂಬ ಗಾಢವಾದ ಆಶೆಯನ್ನು ಪೋಷಿಸಿಕೊಳ್ಳುವುದು. ಅನ್ನು ಬೆಳೆಸಿಕೊಳ್ಳುತ್ತಾ, ಆ ಜೀವನವನ್ನೇ ಬಿಡಬಾರದೆಂತೆ ನಿವಿಯುತ್ತಾ ಹೋಗುವುದು. ಹೀಗೆ ಮಾಡ

Garani Srinivasan

ವೃದಂತ ಬರುವ ಅಮರತ್ವದ ಐಂಮಯೋನಂದು ಅಂಕುಶಗೊಳ್ಳುವುದು. ಇದೆಲ್ಲ ಲೋಕಹಿತಕ್ಕಾಗಿ ಇಡೀ ಜೀವನವನ್ನು ಕಳೆಯುವ 'ಶಿಷ್ಟರ' (ಜ್ಞಾನಿಗಳ) ಮಾರ್ಗ ದರ್ಶನವನ್ನು, ಗುರಿಯನ್ನು ಚಿಂತಿಸುತ್ತಾ, ಸಾಧ್ಯವಾಗ ಜೀವಿಸುವುದೇ ಬಂದ ದಿವ್ಯಾನುಭವ. ಸಾಮಾನ್ಯ ವ್ಯಕ್ತಿಗಳು ಹೊಟ್ಟೆ, ಬಟ್ಟೆ, ಅಲಂಕಾರ, ಇಂದ್ರಿಯ ಸುಖಗಳೆಂಬ ಕ್ಷಣಿಕವಾದ ಅಲ್ಪ ಫಲಗಳ ಕಡೆಗೆ ಗಮನ ಕೊಡುವುದಕ್ಕಿಂತಲೂ ಎಲ್ಲರೂ 'ಶಿಷ್ಟರ' ಗುರಿಯನ್ನು ಮಾರ್ಗವನ್ನು ಸ್ವೀಕರಿಸುವುದೇ ಯುಕ್ತವಾದದ್ದು.

3. குறிப்பில் கொண்டு நெறிப்பட, உலகம்
மூன்றுடன் வணங்குதோன்று புகழ், ஆணை,
மெய்பெற நடாய தெய்வம் மூவரில்
முதல்வனாகி, சுடர்விளங்க கலத்து,
வரைபுரை திரை பொரு பெருவரை வெருவர,
உருமுரலொலி மலி நளிர்கடற்படவர
வரசு - உடல் தடவரை சுழற்றிய, தனிமாத்
தெய்வத்தடியவர்க்கினி நாமாளாகவே
யிசையுங்கொல்? ஊழிதோறூழியேயாவதே.

ಕುಱಿಪ್ಪಿಲ್ ಕೊಣ್ಡು ನೆಱಿಪ್ಪಡ, ಉಲಗಮ್
ಮೂನ್ಱುಡನ್ ವಣಙ್ಙುತೋನ್ಱು ಪುಗಳ್, ಆಣೈ,
ಮೆಯ್‌ಪೆಱ ನಡಾಯ ದೆಯ್ವಮ್ ಮೂವರಿಲ್
ಮುದಲ್ವನಾಗಿ, ಶುಡರ್ ವಿಳಙ್ಗ ಕಲತ್ತು,
ವರೈ ಪುರೈ ತಿರೈ ಪೊರು ಪೆರುವರೈ ವೆರುವರ,
ಉರುಮುರಲೊಲಿ ಮಲಿ ನಳಿರ್ ಕಡಱ್ಪಡವರ,
ವರಶು - ಉಡಲ್ ತಡವರೈ ಶುಳಱ್ಱಿಯ, ತನಿಮಾ
ತ್ತೆಯ್ವತ್ತಡಿಯವರ್ಕ್ಕಿನಿ ನಾಮಾಳಾಗವೇ
ಯಿಶೈಯುಙ್ಕೊಲ್? ಊಳಿದೋಱೂಳಿಯೋವಾದೇ.

ಕುಱಿಪ್ಪಿಲ್ ಕೊಣ್ಡು குறிப்பில் கொண்டு = ಗುರಿಯಾಗಿಟ್ಟುಕೊಂಡು, (ಸಂಕಲ್ಪಿಸಿ), ನೆಱಿಪ್ಪಡ நெறிப்பட = ಸನ್ಮಾರ್ಗದಲ್ಲಿ ಬಾಳುವುದನ್ನು, ಉಲಗಮ್ ಮೂನ್ಱು உலகம் மூன்று = ಮೂರು ಲೋಕಗಳೂ, ಉಡನ್ உடன் = ಒಟ್ಟಿಗೆ, ವಣಙ್ಗು வணங்கு = ಎರಗುವ (ದಂಡ), ತೋನ್ಱು தோன்று = ಮನಾಗ ಕೋರುವ (ಕಂಡುಬರುವ), ಪುಗಳ್ புகழ் = ಕೀರ್ತಿಯುಳ್ಳ, ಆಣೈ ஆணை = (ತನ್ನ) ಆಜ್ಞೆಯನ್ನು, ಮೆಯ್‌ಪೆಱ மெய்பெற = ಸತ್ಯವಾಗಿ (ನಿಶ್ಚಯವಾಗಿ, ನಡೆಯುವಂತೆ), ನಡಾಯ நடாய = ನಡೆಸುವವನಾಗಿ, ದೆಯ್ವಮ್ ಮೂವರಿಲ್ தெய்வம் மூவரில் = ಮೂವರು ದೇವರುಗಳಲ್ಲಿ,

Gallani Srinivasan

ಮುದಲ್ವನ್ ಆಯ್ முதல்வன் ஆகி = ಪ್ರಧಾನನಾಗಿರುವವನೂ, ಶುಡರ್
ವಿಳಕ್ಕು சுடர் விளங்கு = ಜ್ಯೋತಿ ಬೆಳಗುವ, ಅಕತ್ತು ஆகத்து = ಎದೆಯು
ಳ್ಳವನೂ, ವರೈಪುರೈ வரை புரை = ಬೆಟ್ಟದಂತೆ, ತಿರೈ திரை = ಅಲೆಗಳು,
ಪೊರು பொரு = ನುಗ್ಗಿ ಬರುವ, ಪೆರುವರೈ பெருவரை = ಮಹತ್ತಾದ ಪರ್ವತ
ಗಳೂ (ಕುಲಪರ್ವತಗಳೂ), ವೆರುವರ வெருவர = ಅಂಜುವಂತೆ, ಉರುಮ್
உரும் = ಸಿಡಿಲು, ಮುರಲ್ முரல் = ಮೊಳಗುವಂತೆ, ಒಲಿ ஒலி = ಶಬ್ದದಿಂದ,
ಮಲಿ மலி = ತುಂಬಿರುವ, ನಳಿರ್ நளிர் = ತಂಪಾದ, ಕಡಲ್ கடல் = ಕಡಲಲ್ಲಿ,
ಪಡಮ್ ಅರವು படம் அரவு = ಹೆಡೆಯ ಸರ್ಪದ, ಅರಶು அரசு = ~~ಅರಸ~~
ಅರಸನ (ವಾಸುಕಿಯ), ಉಡಲ್ உடல் = ದೇಹವನ್ನು, ತಡವರೈ தடவரை =
ಬಲುದೊಡ್ಡ ಪರ್ವತಕ್ಕೆ (ಮಂದರ ಪರ್ವತಕ್ಕೆ), ಶುಳಿತ್ತಿಯ சுழற்றிய = ಸುತ್ತಿದ
ವನಾದ, ತನಿ தனி = ಸಾಟಿಯಿಲ್ಲದವನಾದ (ಅದ್ವಿತೀಯನಾದ), ಮಾದೆಯ್ವತ್ತು
மா தெய்வத்து = ಮಹಾದೇವನ (ಪರಮೇಶ್ವರನ), ಅಡಿಯವರ್ಕ್ಕು அடிய
வர்க்கு = ಭಕ್ತರಿಗೆ, ಇನಿ இனி = ಇನ್ನು, ನಾಮ್ நாம் = ನಾವು, ಆಳ್
ಆಕವೇ ஆள் ஆகவே = ದಾಸರಾಗಿಯೇ, ಇಶೈಕ್ಕುಮ್ ಕೊಲ್ இசை
க்கும் கொல் = ಹೊಂದಿಕೊಂಡಿರಬೇಕೋ?, ಊಳಿ ತೋಱುಮ್ ಊಳಿ
ஊழி தோறு ஊழி = ಯುಗಯುಗಗಳಲ್ಲಿಯೂ, ಓವಾದೇ ஓவாதே
= ಬಿಡದಂತೆ.

ಮೂರು ಲೋಕಗಳೂ ಪ್ರಳಯದಲ್ಲಿ ನಶಿಯುವುದನ್ನು ಕಂಡು ಅವುಗಳನ್ನು ನುಂ
ದವನೂ, (ಅವು) ಹೊಟ್ಟೆಗೆ ಎರಗುವುದರಿಂದ ಕಂಡುಬರುವ ಕೀರ್ತಿಯುಳ್ಳವನೂ,
ತನ್ನ ಆಜ್ಞೆಯನ್ನು ದಕ್ಷವಾಗಿರುವಂತೆ (ಚಾಚೂ ತಪ್ಪದಂತೆ) ನಡೆಸುವವನೂ,
ಮೂವರು ದೇವರುಗಳಲ್ಲಿ ಪ್ರಧಾನನಾಗಿರುವವನೂ, ಹೊಳೆಹೊಳೆಯುವ ಎದೆ
ಯುಳ್ಳವನೂ, ಕುಲಪರ್ವತಗಳು ನಡುಗುವಂತೆ ಬೆಟ್ಟದಂತೆ ಅಲೆಗಳು
ನುಗ್ಗಿಬರುವ, ಸಿಡಿಲು ಮೊಳಗುವಂತೆ ಶಬ್ದದಿಂದ ತುಂಬಿರುವ, ತಂಪಾದ ಕಡ
ಲಲ್ಲಿ, ಹೆಡೆಯ ಸರ್ಪಗಳ ಅರಸನ ದೇಹವನ್ನು ಬಲುದೊಡ್ಡ ಪರ್ವತಕ್ಕೆ
ಸುತ್ತಿ ಕಡೆದವನೂ, ಸಾಟಿಯಿಲ್ಲದವನೂ, ಆದ, ಪರಮೇಶ್ವರನ ಭಕ್ತರಿಗೆ
ಇನ್ನು ನಾವು ಯುಗಯುಗಗಳಲ್ಲೂ ಬಿಡದಂತೆ ದಾಸರಾಗಿಯೇ ಹೊಂದಿಕೊಂ (3)
ಡಿರಬೇಕೋ?

ಭಗವದ್ಭಕ್ತಿಯನ್ನು ಪರಿಪೂರ್ಣವಾಗಿ ಪಡೆದುಕೊಳ್ಳುವುದಕ್ಕೆ ಯಾವುದು
ಉಪಾಯ? ಅದರ ವಿಷಯದಲ್ಲಿ ಜ್ಞಾನವನ್ನು ಸಂಪಾದಿಸಿಕೊಳ್ಳುವುದೇ, ಅಥವಾ,
ಭಕ್ತಿಭಾವವನ್ನು ಚೆನ್ನಾಗಿ ಅನುಭವಿಸಿ ತಿಳಿದವರಾದ ಭಗವದ್ಭಕ್ತರ ಮಾರ್ಗ
ವನ್ನು ಕಾರ್ಯತಃ ಅನುಸರಿಸುವುದೇ? — ಎಂಬುದನ್ನು ಹಿಂದಿನ ಪಾಶುರ
ದಲ್ಲಿ ಹೇಳಲಾಯಿತು.

ಅದೇ ವಿಷಯವನ್ನು ಮುಂದುವರಿಸುತ್ತಾ — ನಾವು ಭಕ್ತರ ಸಂಸರ್ಗದಲ್ಲಿ
ಎಷ್ಟು ಕಾಲ ನಡೆದುಕೊಳ್ಳುವುದರಿಂದ ನಮಗೆ ಭಕ್ತಿಯ ಫಲ ಲಭಿಸುವುದು?

Gelani Srinivasan

ಯುಗಯುಗಗಳಲ್ಲಿ ಹೀಗೆಯೇ ನಡೆಯುತ್ತಾ ಇರುತ್ತಿರಬೇಕೇ? ಎಂದು ಪ್ರಶ್ನಿಸಿ, ಕೇಳುತ್ತಾರೆ.

ಭಗವಂತನ ಸಂಕಲ್ಪ ಎಷ್ಟು ಉದಾತ್ತವಾದದ್ದು! ತಾನು ಸೃಷ್ಟಿಸಿದ ಮೂರು ಲೋಕಗಳೂ ಸನ್ಮಾರ್ಗದಲ್ಲಿ ನಡೆಯುತ್ತಾ, ಆ ಮೂಲಕ ಉಜ್ಜೀವನ ಹೊಂದಬೇಕೆಂಬುದೇ ಅವನ ಸಂಕಲ್ಪ. ಆ ಕಾರಣದಿಂದಲೇ ಅವನು ಮೂರುಲೋಕಗಳನ್ನು ರಕ್ಷಿಸುವನು. ಬ್ರಹ್ಮ, ವಿಷ್ಣು, ರುದ್ರರೆಂಬ ಮೂರು ಮೂರ್ತಿಗಳಲ್ಲಿ ಅವನೇ ಪ್ರಧಾನನಾದವನು. ಅವನ ಆಜ್ಞೆ (ಶಾಸ್ತ್ರಗಳು) ಈ ಜಗತ್ತಿನಂತೆ ತನ್ನ ಸೃಷ್ಟಿಯನ್ನು ನಡೆಸತಕ್ಕವನು. ಸರ್ವೇಶ್ವರ ಪೂರ್ಣನಾದ ವಿಷ್ಣುವಲ್ಲದವನು. ಭಯಂಕರವಾಗಿ ಭೋರ್ಗರೆಯುವ ಪಾಲ್ಗಡಲಲ್ಲಿ ಮಂದರ ಪರ್ವತವನ್ನಿಟ್ಟು, ವಾಸುಕಿಯನ್ನು ಅದಕ್ಕೆ (ಹಗ್ಗವಾಗಿ) ಸುತ್ತಿ, ದೇವಾಸುರರಿಂದ ಕಡೆಯಿಸಿ, ಅಮೃತವನ್ನು ಪಡೆದು, ದೇವತೆಗಳಿಗಿತ್ತು, ಅವರನ್ನು ಅಮರರನ್ನಾಗಿಸಿದನು. ಅವನು ಸ್ವತಃ ಪರಿಪೂರ್ಣನು. ಕೊರತೆಯಿಲ್ಲದವನು. ಅಂಥವನ ಪಾದಸೇವೆ ಮಾಡುವವರು, ಅವನನ್ನೇ ನಂಬಿ, ಆಶ್ರಯಿಸಿ, ಎಡೆಬಿಡದಂತೆ ಅವನನ್ನು ಭಜಿಸಿ ಪೂಜಿಸುವವರು. ಅವರ ಕಿಂಕರರಾಗಿ, ನಾವು ಅವರ ಸೇವೆ ಮಾಡುತ್ತಾ ಬರುವುದರಿಂದ, ನಮ್ಮಲ್ಲಿ ಭಕ್ತಿ ಬೆಳೆಯುತ್ತಾ ಹೋಗುವುದು. ಅವರ ಮಾರ್ಗವು ನಮಗೆ ಅ[illegible]ಗುವುದು. ನಾವೂ ಭಗವಂತನ ಅನನ್ಯ ಭಕ್ತರಾಗಬಲ್ಲೆವು.

4. ஊழிதோறூழி யோவாது, வாழிய
வென்று யான் தொழ விசையுங்கொல்?,
யாவகை யுலகமும் யாவரு மில்லா,
மேல்வரும் பெரும்பாழ் காலத்து-, இரும்பொருட்
கெல்லா மரும்பெறல் தனிவித்து-, ஒருதா
னாகித் தெய்வ நான்முகக் கொழுமுளை
யீன்று, முக்கணீசனொடு தேவுபல நுதலி,
மூவுலகம் விளைத்த வுந்தி,
மாயக்கடவுள் மாமுதலடியே.

ಊಳಿದೋಱೂಳಿ ಓವಾದು, ವಾಳಿಯ
ವೆನ್ಱು ಯಾನ್ ತೊಳ ವಿಶೈಯುಂಗೊಲ್?,
ಯಾವಗೈ ಯುಲಗಮುಮ್ ಯಾವರು ಮಿಲ್ಲಾ,
ಮೇಲ್ ವರುಮ್ ಪೆರುಮ್ಬಾಳ್ ಕಾಲತ್ತು-, ಇರುಮ್ಬೊರುಟ್
ಕೆಲ್ಲಾ ಮರುಮ್ ಪೆಱಲ್ ತನಿ ವಿತ್ತು-, ಒರುತಾ
ನಾಕಿತ್ ತೆಯ್ವ ನಾನ್ ಮುಗಕ್ಕೊಳು ಮುಳೈ
ಯೀನ್ಱು, ಮುಕ್ಕಣೀಶನೊಡು ತೇವು ಪಲ ನುದಲಿ,
ಮೂವುಲಗಮ್ ವಿಳೈತ್ತ ವುನ್ದಿ,
ಮಾಯಕ್ಕಡವುಳ್ ಮಾಮುದಲಡಿಯೇ.

Garani Srinivasan

ಊಳಿದೋಱೂಳಿ ஊழி தோறூழி = ಯುಗಯುಗಗಳಲ್ಲಿಯೂ, ಓವಾದು
ஓவாது = ಎಡೆಬಿಡದಂತೆ, ವಾಳಿಯ ಎನ್ಱು வாழியென்று = ಬದುಕುವಂತಾಗಲಿ ಎಂದು, ಯಾನ್ யான் = ನಾನು, ಶೊಲ್ಲಿ ஏத்தாழ = ಹೇಳಿ ಸೇವೆಮಾಡುವಂತೆ, ಇತ್ತ್ರಿ ಯುಮ್ ಶೆಲ್ ஓசையும் ஏகாம் = ಸಾಧ್ಯವಾಗುವುದೋ? ಏಳುವತ್ತ್ರಿ ಉಲಗಮುಮ್ யாவகை உலகமும் = ಎಲ್ಲಾ ವಿಧವಾದ ಲೋಕಗಳೂ, ಯಾವರುಮ್ யாவரும் = ಎಲ್ಲಾ ಜೀವಗಳೂ, ಇಲ್ಲಾ ஓலா = ಇಲ್ಲದ, ಮೇಲ್ ವರುಮ್ ಓಙ வருக்கம் = ಮುಂದೆ ಕಳೆದುಹೋಗದ (ಮುಂದೆ ಬರುವ), ಪೆರು ವಾಳಿ ಕಾಲತ್ತು ஏபருவாழி காலத்து = ಮಹಾಪ್ರಳಯ ಕಾಲದಲ್ಲಿ, ಇರು ஓரு = ಇರುವ, ಪೊರುಟ್ಕು ಎಲ್ಲಾಮ್ ஏபாருட்கு எல்லாம் = (ಆತ್ಮ) ವಸ್ತುಗಳಿಗೆಲ್ಲಾ, ಅರು அரு = ಕಾರಣವಾಗಿ, ಪೆಯಿಲ್ ஏபறல = ಸೃಷ್ಟಿಗೆ, ಶನಿ ವಿತ್ತು தனி வித்து = ಒಂಟಿ ಬೀಜ, ಒರು ஒரு = ನಾಟಿಯು ಇಲ್ಲದ, ತಾನ್ ಓಙ தான் ஆகி = ತಾನೇ ಆಗಿ, ತೆಯ್ವಮ್ ஏதய்வம் = ದೈವನಾದ, ನಾನ್ಮುಗನ್ நான்முகன் = ಚತುರ್ಮುಖನೆಂಬ, ಕೊಳು ஏகாழு = ಬಲಿಷ್ಠವಾದ, ಮುಳೈ முளை = ಮೊಳಕೆಯನ್ನು, ಈನ್ಱು ஈன்று = ಪಡೆದು, ಮುಕ್ಕಣ್ ಈಶನೊಡು முக்கண் ஈசனொடு = ಮುಕ್ಕಣ್ಣನೆಂಬ ಈಶನೊಡನೆ, ತೇವು ஏதவு = ದೇವತೆಗಳನ್ನು, ಪಲಪಲ = ಅನೇಕರನ್ನು, ನುದಲ ஙுதலி = ಪಡೆದು, ಮೂ ಉಲಗಮ್ மூ உலகம் = ಮೂರು ಲೋಕಗಳನ್ನು, ವಿಳೈತ್ತ விளைத்த = ಬೆಳೆಸಿದ, ಉನ್ದಿ உந்தி = ನಾಭಿಯುಳ್ಳ, ಮಾಯಮ್ மாயம் = ಆಶ್ಚರ್ಯಕಾರಕನಾದ, ಕಡವುಳ್ கடவுள் = ಭಗವಂತನ, ಮಾ மா = ದಿವ್ಯ ಸುಂದರವಾದ, ಮುದಲ್ முதல் = ಪರಮಶ್ರೇಷ್ಠವಾದ, ಅಡಿಯೇ அடியே = ತಿರುವಡಿಯನ್ನೇ.

ಎಲ್ಲಾ ವಿಧವಾದ ಲೋಕಗಳೂ, ಎಲ್ಲಾ ಜೀವಿಗಳೂ ಇಲ್ಲದ, ಒಂದೆ ಕಳೆದುಹೋದ (ಮುಂದೆ ಬರುವ) ಮಹಾಪ್ರಳಯಕಾಲದಲ್ಲಿ ಇರುವ ಆತ್ಮವಸ್ತುಗಳಿಗೆಲ್ಲಾ ಕಾರಣವಾಗಿ, ಸೃಷ್ಟಿಗೆ ನಾಟಿಯಿಲ್ಲದ ಒಂಟಿ ಬೀಜ ತಾನೇ ಆಗಿ, ದೈವನಾದ ನಾಲ್ಮುಖನೆಂಬ ಬಲಿಷ್ಠವಾದ ಮೊಳಕೆಯನ್ನು ಪಡೆದು, ಮುಕ್ಕಣ್ಣನೆಂಬ ಈಶನೊಡನೆ ಅನೇಕಾನೇಕ ದೇವತೆಗಳನ್ನು ಪಡೆದು, ಮೂರು ಲೋಕಗಳನ್ನು ಬೆಳೆಸಿದ ನಾಭಿಯುಳ್ಳ ಆಶ್ಚರ್ಯಕಾರಕನಾದ ಭಗವಂತನ ದಿವ್ಯಸುಂದರವಾದ ಪರಮಶ್ರೇಷ್ಠವಾದ ತಿರುವಡಿಯನ್ನೇ ಯುಗಯುಗಗಳಲ್ಲಿಯೂ ಎಡೆಬಿಡದಂತೆ ಬಾಳುವಂತಾಗಲಿ ಎಂದು ನಾನು ಸೇವೆಮಾಡುವುದಕ್ಕೆ ಸಾಧ್ಯವಾಗುವುದೋ? (4)

ಯಾವುದು ಪರಮಶ್ರೇಷ್ಠವಾದ ಗುರಿ? ಹುಟ್ಟು - ಸಾವುಗಳ ಸುಳಿಯಲ್ಲಿ ಸಿಕ್ಕಿಬಿದ್ದು, ಜರೆ, ವ್ಯಾಧಿ, ದುಃಖ, ಸಂಕಟಗಳನ್ನು ಅನುಭವಿಸುತ್ತಲೇ ಇರುವುದೇ? ಅಥವಾ, ಭಗವಂತನ ಅಡಿದಾವರೆಗಳನ್ನು ಶ್ರೇಯಃ. ಹುಟ್ಟಿನಿಂದ ಮುಕ್ತನಾಗಿ, ಭಗವಂತನನ್ನು ಸೇರಿ, ಅಲ್ಲಿ ಅವನ ನಿತ್ಯಕೈಂಕರ್ಯ ಮಾಡಿ ಬಾಳುವುದೇ? ಇದಕ್ಕೆ ಉತ್ತರವಾಗಿದೆ ಈ ಪಾಶುರ.

ಉಂಟೆ ಇಂದು ಮಹಾಪ್ರಳಯ ಬಂತು. ಆಗ ಸರ್ವನಾಶವಾಯಿತು. ಎಲ್ಲವೂ ಅಳಿದವು. ಆ ಜೀವಿಗಳೆಲ್ಲಾ ನೆಲೆಸಿದ್ದ ಆತ್ಮವಸ್ತುಗಳಿಗೆ ಎಡೆಕೊಡುವುದಕ್ಕಾಗಿ, ಸರ್ವೇಶ್ವರನಾದ ಭಗವಂತನೇ ಸೂಕ್ಷ್ಮಗಾತ್ರವಾದ, ಹಿಂಟಿಯಾದ, ಬೀಜವಾದ. ತನ್ನ ನಾಭಿಯಿಂದಲೇ ನಾಲ್ಕುಮುಖನನ್ನು ಸೃಷ್ಟಿಸಿದ. ಅವನ ಮೂಲಕ ಮುಕ್ಕಣ್ಣನೇ ಮುಂತಾದ ಸಮಸ್ತ ದೇವತೆಗಳನ್ನು ಪಡೆದ. ಆ ಮೂಲಕ ಮೂರು ಲೋಕಗಳನ್ನು ಬೆಳೆಸಿದ. ಹೀಗೆಯೇ ಹಿಂದೊಂದು ಮಹಾಪ್ರಳಯ ಬಂದಾಗ ಆಶ್ರಯ ಕರಗಾಗ, ಭಗವಂತನು ಎಲ್ಲ ಸೃಷ್ಟಿಯನ್ನು ನಡೆಸುತ್ತಾನೆ. ಎಲ್ಲವನ್ನು ರಕ್ಷಿಸುತ್ತಾನೆ.

ಆಳ್ವಾರರು ಹೇಳುತ್ತಾರೆ: ನಾಟಿಯಲ್ಲದ ಆ ಸರ್ವೇಶ್ವರನ ದಿವ್ಯಸುಂದರವೂ ಪರಮಪವಿತ್ರವೂ ಶ್ರೇಷ್ಠವೂ ಆದ ತಿರುವಡಿಗಳನ್ನು ನಾನು ಎಡೆಬಿಡದಂತೆ ಎಲ್ಲಾ ಕಾಲದಲ್ಲೂ ಸೇವೆ ಮಾಡುತ್ತಾ ಬಾಳುವ ಭಾಗ್ಯ ನನಗೆ ಲಭಿಸುವುದೇ?
"ನಾನು", ಎಂದರೆ, ಪ್ರತಿಯೊಬ್ಬ ಜೀವಿಯೂ. ಈ ಆಶಯ ಎಲ್ಲಾ ಜೀವಿಗಳಿಗೂ ಅನ್ವಯಿಸುತ್ತದೆ. ಪ್ರತಿ ಜೀವಿಯ ಉಜ್ಜೀವನದ ಗುರಿಯೇ ಇದು!

5. மாமுதலடிப்போதொன்று கவிழ்த்தலர்த்தி,
மண்முழுதுமகப்படுத்து -, ஒண்சுடரடிப்போ
தொன்று விண்செலீஇ, நான்முகப் புத்தேள்
நாடு வியந்துவப்ப, வானவர் முறைமுறை
வழிபட நெறீஇ, தாமரைக்காடு
மலர்க்கண்ணொடு கனிவாயுடையது
மாய், இருநாயிறாயிரம் மலர்ந்தன்ன,
கற்பகக்காவு பற்பலவன்ன,
முடிதோளாயிரம் தழைத்த,
நெடியோய்க்கல்லது மடியதோ வுலகே.

ಮಾ ಮುದಲಡಿಪ್ಪೋದೊನ್ರು ಕವಿಳ್ತ್ತಲರ್ತ್ತಿ,
ಮಣ್ ಮುಳುದು ಮಗಪ್ಪಡುತ್ತು -, ಒಣ್ ಶುಡರಡಿಪ್ಪೋ
ದೊನ್ರು ವಿಣ್ ಶೆಲೀಇ, ನಾನ್ ಮುಗಪ್ಪುತ್ತೇಳ್
ನಾಡು ವಿಯನ್ದುವಪ್ಪ, ವಾನವರ್ ಮುರೈ ಮುರೈ
ವಳಿಪಡ ನೆರೀಇ, ತಾಮರೈಕ್ಕಾಡು
ಮಲರ್ಕ್ಕಣ್ಣೊಡು ಕನಿವಾಯುಡೈಯದು
ಮಾಯ್, ಇರುನಾಯಿರಾಯಿರಮ್ ಮಲರ್ನ್ದನ್ನ,
ಕರ್ಪಗಕ್ಕಾವು ಪರ್ಪಲವನ್ನ,
ಮುಡಿದೋಳಾಯಿರಮ್ ತಳೈತ್ತ,
ನೆಡಿಯೋಯ್ಕ್ಕಲ್ಲದು ಮಡಿಯದೋ ವುಲಗೇ.

Garani Srinivasan

ಮಾ ಮಾ = ಬಲುದೊಡ್ಡ, ಮುದಲ್ ಅಡಿ ಪೋದು முதல் அடி போது = ಮೊದಲ ಶಿರುವಡಿ ಎಂಬ ಪುಷ್ಪ, ಒನ್ರು ಆಣ್ರು = ಒಂದನ್ನು, ಕವಿೞ್ತ್ತು கவிழ்த்து = ಪ್ರದಕ್ಷಿ, ಮಣ್ ಮುಳುದುಮ್ ಮಣ் முழுதும் = ಭೂಮಂಡಲವನ್ನೆಲ್ಲಾ, ಅಡಪ್ಪಡುತ್ತ ಅಕಪ್ಪಡுத்து = ಸ್ವಾಧೀನ ಪಡಿಸಿಕೊಂಡು, ಒಣ್ ಆಣ್ = ಸುಂದರವಾದ, ಶುಡರ್ ಶುಡರ್ = ಕಾಂತಿಯಿಂದ ಕೂಡಿದ, ಅಡಿ ಪೋದು அடி போது = ಶಿರುವಡಿ ಪುಷ್ಪ, ಒನ್ರು ಆಣ್ರು = ಮತ್ತೊಂದನ್ನು, ನಾನ್ಮುಗನ್ நான்முகன் = ನಾಲ್ಕುಮುಖನ, ಪುಕ್ಕೋಳ್ಳ ಆಣ್ರು = ಮತ್ತೊಂದನ್ನು, (ದೇವತೆಗಳ),
ಪುಕ್ಕೋನ್ = ಪವಿತ್ರವಾದ, ನಾಡು ನಾடு = ಲೋಕವು, ವಿಯನ್ತು ವியந்து = ಆನಂದ ಸಂತೋಷದಿಂದಲೂ, ವಾನವರ್ ಆಶ್ಚರ್ಯ ಪಡುವಂತೆಯೂ, ಉವಪ್ಪ ಉவப்ப = ಆನಂದ ಸಂತೋಷದಿಂದಲೂ, ವಾನವರ್ ವಾனவர் = ದೇವತೆಗಳು, ಮುಱೈ ಮುಱೈ முறை முறை = ಶಾಸ್ತ್ರಗಳರೀತಿ ವಿಧಿವತ್ತಾಗಿ, ಯಲ್ಲಿ (ಶಾಸ್ತ್ರೋಕ್ತವಾಗಿ), ವಳಿಪಡ ವழிபட = ಪೂಜಿಸುವಂತೆಯೂ, ನಿಱೈ ವಿಣ್ = ಆಕಾಶಕ್ಕೆ, ಶೆಱಿಱ ಶಕಾಶ = ಪರಿಪೂ, (ಕಲ್ಲುಗಳು), ನೀಳ್ ವಿಣ್ಣ = ಆಕಾಶಕ್ಕೆ, ಶೆಱಿ ಕಮಲ... = ತಾವರೆಯಂತೆ,
ಇಸ್ತಿರಿತ್ತಿ = ನಿಲ್ಲಿಸಿ, ತಾಮರೈ ಕಾಡು தாமரைக் காடு = ತಾವರೆಯಂದದ, ಕಣ್ಣ ಕಣ்ண = ಕಣ್ಣುಗಳನ್ನು, ನ, ಮಲರ್ ಮಲರ್ = ಹೂವಿನಂತೆ, ಶಿವನ್ದು ಕಣ್ = ಕಣ್ಣುಗಳನ್ನು, ಉದ್ಭವಿಸುವ ಕನಿವಾಯ್ ಕனிவாய் = (ತೊಂಡೆ) ಹಣ್ಣಿನಂತೆ ಕೆಂಪಗಿನ ತುಟಿಗಳನ್ನು, ಇರು ತಿರು = ಬಲುದೊಡ್ಡ, ಆಯ್ ಉಡೈಯದುಮ್ ஆய் = ಉಳ್ಳವನಾಗಿ, ಇರು ತಿರು = ಬಲುದೊಡ್ಡ, ಆಯ್ ಉಡೈಯದುಮ್ ಆಯ್ = ಉಳ್ಳವನಾಗಿ, ಆಯಿರಮ್ ஆயிரம் = ಸಾವಿರ, ಮಲರ್ನ್ದ ನಾಯಿರು ನாயிறு = ಸೂರ್ಯನು, ಆಯಿರಮಾ ಆಯಿರಮ್ = ಸಾವಿರ, ಮಲರ್ನ್ದ ನಾಯಿರು = ಸೂರ್ಯನು, ಮುಡಿ ಮುಡಿ = ಕಿರೀಟವನ್ನು (ತಲೆಯನ್ನು) ಮಲರ್ನ್ದದನ್ನ = ಉದಯಿಸಿದಂತೆ, ಕಱ್ಪಕಮ್ ಕற்பகம் (ಉಳ್ಳವನಾಗಿ), ಪಲ್ ಪಲ ಪல பல = ಅನೇಕಾನೇಕ, ಕಱ್ಪಕಮ್ = ಕಲ್ಪವೃಕ್ಷಗಳ, ಕಾವು ಅನ್ನ காவு அன்ன = ಕಾಡುಗಳಂತೆ, ತೋಳ್ ಆಯಿ = ಕಲ್ಪವೃಕ್ಷಗಳ, ಕಾವು ಅನ್ನ = ಕಾಡುಗಳಂತೆ, ತೋಳ್ಗಳನ್ನು, ತಮ್ ತಾಳ್ಗಳ್ = ತಮ ತೋಳ್ ಆಯಿರಮ್ = ಸಾವಿರ ತೋಳುಗಳನ್ನು, ತೋಳ್ಗಳ್ = ಸರ್ವೇಶ್ವರನಿಗೆ (ಸರ್ವೇಶ ಪಡೆದವನಾದ, ನೆಡಿಯೋಕ್ಕೆ ನೆಡಿಯೋಯ್ಕ್ಕು = ಸರ್ವೇಶ್ವರನಿಗೆ (ಸರ್ವೇಶ ಅಡಿಯಯ್ದೋ ಅடியேனோ = ಕ್ಷರನಾದ ನಿನಗೆ), ಅಲ್ಲದು ಅಲ್ಲದು = ಅಲ್ಲದೆ, ಅಡಿಯಯ್ದೋ ಅಡಿಯೇನೇ = ಲೋಕವೇ? ಸೇವೆಮಾಡದೋ, ಉಲಡೇ ಉಲಕೇ = ಲೋಕವೇ?

ಬಲುದೊಡ್ಡ ಮೊದಲನೆಯ ಪಾದಪುಷ್ಪವೊಂದನ್ನು ಪ್ರದಕ್ಷಿ, ಭೂಮಂಡಲವನ್ನೆಲ್ಲಾ ಸ್ವಾಧೀನಪಡಿಸಿಕೊಂಡು, ಅತಿದಿವ್ಯವಾದ ಕಾಂತಿಯಿಂದ ಕೂಡಿದ (ಲೋಕ) ಮತ್ತೊಂದು ಪಾದಪುಷ್ಪವನ್ನು ನಾಲ್ಕುಮುಖನ ಮತ್ತು ದೇವತೆಗಳ ಪವಿತ್ರವಾದ ನಾಡು ಆಶ್ಚರ್ಯಪಡುವಂತೆಯೂ, ಆನಂದಿಸುವಂತೆಯೂ, ದೇವತೆಗಳು ವಿಧಿವತ್ತಾಗಿ ಪೂಜಿಸುವಂತೆಯೂ ಆಕಾಶಕ್ಕೆ ಪರಿಪೂ, ನಿಲ್ಲಿಸಿ, ತಾವರೆಯಂದಂತಿನ ಹೂವಿನಂ ತಿರುವ ಕಣ್ಣುಗಳನ್ನು, ತೊಂಡೆಹಣ್ಣಿನಂತಿರುವ ತುಟಿಗಳನ್ನು ಉಳ್ಳವನಾಗಿ, ಬಲುದೊಡ್ಡ ಸಾವಿರಸೂರ್ಯರು ಉದಯಿಸಿದಂತೆ ಕಿರೀಟ (ತಲೆ) ವನ್ನುಳ್ಳವನಾಗಿ, ಅನೇಕಾನೇಕ ಕಲ್ಪವೃಕ್ಷಗಳ ಕಾಡುಗಳಂತೆ ಸಾವಿರತೋಳುಗಳನ್ನು ಪಡೆದವನಾದ ಸರ್ವೇಶ್ವರನಾದ ನಿನಗಲ್ಲದೆ ಲೋಕವೇ (ಬೇರೊಬ್ಬನಿಗೆ) ಸೇವೆ ಮಾಡುವುದೇ?

ಭಗವಂತನ ತ್ರಿವಿಕ್ರಮಾವತಾರವನ್ನು ಎಷ್ಟೆಷ್ಟು ಬಗೆಯಲ್ಲಿ ವರ್ಣಿಸಿದರೂ, ಆಳ್ವಾರರಿಗೆ ತೃಪ್ತಿಯಾಗುವುದಿಲ್ಲವೇನೋ ಎಂತೋ! ಈ ಪಾಶುರದಲ್ಲೂ ಸಹ ಆ ~~ಆ~~ ದಿವ್ಯ ಅವತಾರದ ವರ್ಣನೆಯೇ ಮೂಡಿದೆ!

ಆಳ್ವಾರರು ಹೇಳುತ್ತಾರೆ: ಭಗವಂತ, ನೀನು ಮಹಾದ್ಭುತನಾದ ತ್ರಿವಿಕ್ರಮನೇ! ನಿನ್ನ ಆ ಅದ್ಭುತವಾದ ಸೊಬಗನ್ನು, ನಿನ್ನ ಸರ್ವವ್ಯಾಪಕತ್ವವನ್ನು ಕಂಡುಕೊಂಡವರು ನಿನ್ನನಲ್ಲದೆ ಬೇರೊಬ್ಬರಿಗೆ ಸೇವೆ ಮಾಡ ಬಯಸುವರೇ? ಎಲ್ಲಾ ಲೋಕಗಳೂ ನಿನಗೇಯೇ ಎಲ್ಲಾ ಬಗೆಯ ಸೇವೆಯನ್ನು ಮಾಡುತ್ತಾರೆ, ಎಂದರು.

6. ஓஓ உலகினதியல்வே, ஈன்றோளிருக்க
மணைநீராட்டி, படைத்திடந்துண்டுமிழ்ந்
தளந்து, தேர்ந்துலகளிக்கும் முதற்பெரும்
கடவுள் நிற்ப, புடைப்பல தானறி
தெய்வம் பேணுதல், தனாது
புல்லறிவாண்மை பொருந்தக்காட்டி,
கொல்வனமுதலா அல்லன முயலும்,
இனைய செய்கை யின்புதுன்பளி,
தொன்மாமாயப் பிறவியுள் நீங்கா,
பன்மா மாயத்தழுந்துமா நளிர்ந்தே.

ಓಓ ಉಲಗಿನದಿಯಲ್ವೇ, ಈನ್ರೋಳಿರುಕ್ಕ
ಮಣ್ಣೈ ನೀರಾಟ್ಟಿ, ಪಡೈತ್ತಿಡರ್ನ್ದುಣ್ಡುಮಿಳ್
ನ್ದಳನ್ದು, ತೇರ್ನ್ದುಲಗಳಿಕ್ಕುಮ್ ಮುದಱ್ಪೆರುಮ್
ಕಡವುಳ್ ನಿಱ್ಪ, ಪುಡೈಪ್ಪಲ ತಾನಱಿ
ತೆಯ್ವಮ್ ಪೇಣುದಲ್, ತನದು
ಪುಲ್ಲಱಿವಾಣ್ಮೈ ಪೊರುನ್ದಕ್ಕಾಟ್ಟಿ,
ಕೊಲ್ವನಮುದಲಾ ಅಲ್ಲನ ಮುಯಲುಮ್,
ಇನೈಯ ಶೆಯ್ಗೈ ಯಿನ್ಬುದುನ್ಬಳಿ,
ತೊನ್ಮಾ ಮಾಯಪ್ಪಿಱವಿಯುಳ್ ನೀಙ್ಗಾ,
ಪನ್ಮಾ ಮಾಯತ್ತಳುನ್ದುಮಾ ನಳಿರ್ನ್ದೇ.

ಓಓ ஓஓ = ಅಯ್ಯೋ, ಉಲಗಿನದು உலகினது = ಲೋಕದ, ಇಯಲ್ವೇ இயல்வே = ಸ್ವಭಾವವೇ, ಈನ್ರೋಳ್ ஈன்றோள் = ಹೆತ್ತವಳು, ಇರುಕ್ಕ இருக்க = ಇರಲಾಗಿ, ಮಣ್ಣೈ மணை = (ಅವಳು ಕುಳಿತುಕೊಳ್ಳುವ) ಮಣೆಗೆ, ನೀರಾಟ್ಟಿ நீராட்டி = ಸ್ನಾನಮಾಡಿಸಿ (ಉಪಚಾರಗಳನ್ನು ಮಾಡಿ), ಪಡೈತ್ತು படைத்து = ಲೋಕಗಳನ್ನು ಪಡೆದು (ಸೃಷ್ಟಿಸಿ), ಇಡರ್ನ್ದು இடர்ந்து = ಉದ್ಧರಿಸಿ, ಉಣ್ಡು உண்டு = ಉಂಡು, ಉಮಿಳ್ನ್ದು உமிழ்ந்து = ಉಗುಳಿ (ಮತ್ತೆ ಹೊರಹಾಕಿ), ಅಳನ್ದು

அளந்து = (ಅದನ್ನು) ಅಳೆದುಕೊಂಡು, ತೇರ್ನ್ದು தேர்ந்து = ಅರಿತುಕೊಂಡು, ಅಳಿಕ್ಕುಮ್ அளிக்கும் = ರಕ್ಷಿಸುವ, ಮುದಲ್ முதல் = ಆದಿಕಾರಣನಾದ, ಪರ பரன் = ಪರಾತ್ಪರನಾದ (ಅತಿಶ್ರೇಷ್ಠನಾದ), ಕಡವುಳ್ கடவுள் = ಭಗವಂತನು, ನಿಱ್ಪ நிற்ப = ಇರಲಾಗಿ, ಪುಡೈ புடை = ಯಾವ ಮೂಲೆಯಲ್ಲೂ ಇರುವ, ಪಲ பல = ಹಲವಾರು, ತಾನ್ ಅಱಿ தான் அறி = ತಾನು ಅರಿತುಕೊಳ್ಳಬಹುದಾದ, ದೆಯ್ವಮ್ தெய்வம் = ದೈವವನ್ನು, ಪೇಣುದಲ್ பேணுதல் = ಆರಾಧಿಸುವುದೂ, ತನದು தனது = ತನ್ನ, ಪುಲ್ ಅಱಿವಾಣ್ಮೈ புல் அறிவாண்மை = ಅಲ್ಪಜ್ಞಾನವನ್ನು, ಪೊರುನ್ದ பொருந்த = ಹೊಂದಿಕೊಳ್ಳುವುದನ್ನು, ಕಾಟ್ಟಿ காட்டி = ತೋರಲಿ, ಕೊಲ್ವನ கொல்வன = ಕೊಲ್ಲುವಿಕೆ (ಬಲಕೊಡುವಿಕೆ), ಮುದಲಾ முதலா = ಮೊದಲಾದ, ಅಲ್ಲನ அல்லன = ಅಲ್ಲದ (ಮಾಡಬಾರದ), ಮುಯಲ್ವುಮ್ முயல்வும் = ಪ್ರಯತ್ನಗಳನ್ನೂ (ಮಾಡಿ), ಇನ್ನೈಯ ಶೆಯ್ಗೈ இனைய செய்கை = ಇಂಥ ಕೆಲಸಗಳನ್ನು, ಇನ್ಬು ತುನ್ಬು இன்பு துன்பு = ಸುಖವನ್ನೂ ಸಂಕಟವನ್ನು, ಅಳಿ அளி = ಕೊಡುವ, ಕೋಲ್ கோல் = ಪ್ರಕಾಶನವಾದ, ಮಾ மா = ಮಹತ್ತಾದ, ಮಾಯಮ್ மாயம் = ವಂಚನೆಯ, ಪಿಱವಿಯುಳ್ பிறவியுள் = ಹುಟ್ಟಿನಲ್ಲಿ, ನೀಙ್ಗಾ நீங்கா = ಎಂದೆಂದಿಗೂ ನೀಗದಂಥ (ಬಿಡುಗಡೆಯಾಗದಂಥ), ಪಲ್ ಪಲ் = ಹಲವಾರು (ಅನೇಕಾನೇಕ), ಮಾ மா = ವಿಚಿತ್ರವಾದ, ಮಾಯತ್ತು மாயத்து = ಮಾಯಾಜಾಲದಲ್ಲಿ, ಅಳುನ್ದುವರ್ அழுந்தும் = ಮುಳುಗುತ್ತಾರೆ, ಆ = ಆಹಾ, (ಅಯ್ಯೋ), ನಳಿರ್ನ್ದ நளிர்ந்தே = ವ್ಯರ್ಥವಾಗಿಯೇ (ನಿರರ್ಥಕವಾಗಿಯೇ),

ಅಯ್ಯೋ, ಲೋಕದ ಸ್ವಭಾವವೇ! ಹಿಡಿದವರು ಇರಲಾಗಿ, (ಅವರುಬರ ಯೋಗ್ಯರು) ಮನಸ್ಸಿಗೆ ಧ್ಯಾನ ಮಾಡಿಸು (ಉಪಚಾರಗಳನ್ನು ಮಾಡುತ್ತಾರೆ. ಲೋಕಗ ಯೋಗ್ಯರು) ಅಳೆದು (ಸೃಷ್ಟಿಸಿ), ಉದ್ಧರಿಸಿ, ಉಂಡು, ಮತ್ತೆ ಸೃಷ್ಟಿಸಿ, ಅವನ್ನೆಲ್ಲ ಅರಿತುಕೊಂಡು, ಅರಿತು, ರಕ್ಷಿಸುವ ಆದಿಕಾರಣನಾದ ಪರಮಶ್ರೇಷ್ಠನಾದ ಭಗವಂತನಿರಲಾಗಿ, ಯಾವುದೋ ಮೂಲೆಯ ದೈವವನ್ನು ಆರಾಧಿಸುವುದೂ, ತನ್ನ ಅಲ್ಪಮತಿಗೆ ಹೊಂದಿಕೊಳ್ಳುವುದನ್ನು ತೋರಲಿ, ಬಲಕೊಡುವಿಕೆ ಮೊದಲಾದ ಮಾಡಬಾರದ ಪ್ರಯತ್ನ(ಕಾರ್ಯ)ಗಳನ್ನೂ, ಇಂಥವೇ ಇತರ ಕೆಲಸಗಳನ್ನೂ ಮಾಡಿ, ಸುಖವನ್ನೂ ಸಂಕಟವನ್ನು ಕೊಡುವ ಪ್ರಕಾಶನವೂ ಮಹಾ ವಂಚನೆಯುದೂ ಆದ ಹುಟ್ಟಿನಲ್ಲಿ, ಅನೇಕಾನೇಕ ವಿಚಿತ್ರ ವಿಚಿತ್ರವಾದ ಮಾಯಾಜಾಲದಲ್ಲಿ ವ್ಯರ್ಥವಾಗಿಯೇ (ನಿರರ್ಥಕವಾಗಿಯೇ) ಮುಳುಗುತ್ತಾರಲ್ಲ, ಅಯ್ಯೋ!

(6) ಈ ಪಾಶುರ ಸ್ಪಷ್ಟವೂ ಸ್ವಾರಸ್ಯಪೂರ್ಣವೂ ಆದದ್ದು. ಹೃದಯಂಗಮವೂ ಸುಂದರವೂ ಆದ ಕಾವ್ಯ (ಉಪಮಾನ) ಹೊಂದನ್ನು ಬಳಸಿಕೊಂಡು, ಆಳ್ವಾರರು ತಮ್ಮ ಮುಖ್ಯ ಉಪದೇಶವನ್ನು ಇಲ್ಲಿ ನೀಡುತ್ತಿದ್ದಾರೆ.

'ಈನ್ಱೋಳಿರುಕ್ಕ ಮಣ್ಣೈ ನೀರಾಟ್ಟಿ" — ತನಗೆ ಜನ್ಮಕೊಟ್ಟ ತಾಯಿಯೇ ಕಣ್ಣೆದುರಲ್ಲಿರುವಾಗ, ಅವಳಿಗೆ ಸಲ್ಲಬೇಕಾದ ಆದರ ಮರ್ಯಾದೆಯನ್ನು, ಉಪಚಾರಗಳನ್ನು ಸಲ್ಲಿಸದೆ, ಅವಳು ಉಪಯೋಗಿಸುವ ನಿರ್ಜೀವ ವಸ್ತುವೊಂದಕ್ಕೆ ಎಲ್ಲಾ ಬಗೆಯ ಉಪಚಾರಗಳನ್ನು ನಡೆಸುವುದು ಎಂಥ ನಗೆಪಾಟಲಿನ ವಿಚಾರ! ಇದೆಂಥ ಲೋಕಸ್ವಭಾವ!

ಆಳ್ವಾರರು ಲೋಕದ ಜನರ ಸ್ವಭಾವಕ್ಕೆ ಮರುಗುತ್ತಾರೆ. ಜನ ಹೆತ್ತತಾಯಿಯನ್ನೇ ಅಲಕ್ಷಿಸುತ್ತಾರೆ. ಅವಳಿಗೆ ಬದಲಾಗಿ, ಅವಳು ಬಳಸುವ ಯಾವುದೋ ಒಂದು ಅಲ್ಪ ವಸ್ತುವಿಗೆ ಎಲ್ಲ ಬಗೆಯ ಉಪಚಾರಗಳನ್ನು ನಡೆಸುತ್ತಾರಲ್ಲ! ನಿಜವಸ್ತು ಯಾವುದೆಂದು ಕಂಡುಕೊಳ್ಳದೆ, ಯಾವುದೋ ಒಂದು ಅಸಮರ್ಥವಾದ ಅಲ್ಪವಸ್ತುವನ್ನು ಪೂಜಿಸುತ್ತಾರೆ. ಇದರಿಂದ ಅವರಿಗೆ ಬರುವುದಾದರೂ ಏನು? ವಂಚನೆಯಿಂದ ಕೂಡಿದ, ಕ್ಲೇಶವೂ ನಷ್ಟವೂ ಆದ 'ಜರ' ಎಂಬ ಸಂಕಟದಿಂದ ಕೂಡಿದ 'ಪ್ರಕೃತಿ'ಯ ಮಾಯಾಜಾಲದಲ್ಲಿ ಸಿಕ್ಕಿಕೊಂಡು ನರಳುತ್ತಾರಲ್ಲ! ಏನು ವಿಚಿತ್ರ ಸ್ವಭಾವ ಅವರದು!

ಆಳ್ವಾರರು ಹೇಳುತ್ತಾರೆ: ಲೋಕದ (ಜನರ) ಸ್ವಭಾವವನ್ನು ಏನೆನ್ನಬೇಕು? ಹೆತ್ತ ತಾಯಿಯನ್ನು ಕಡೆಗಣಿಸಿ, ಆಕೆ ಬಳಸುವ ಯಾವುದೋ ಒಂದು ಅಲ್ಪವಾದ ನಿರ್ಜೀವ ವಸ್ತುವನ್ನು ಆದರದಿಂದ ಕಾಣುತ್ತಾರಲ್ಲ! ಇದೇ ರೀತಿಯಲ್ಲಿ, ಸೃಷ್ಟಿ, ಸ್ಥಿತಿ, ಲಯಗಳಿಗೆ ಆದಿ-ಕಾರಣನಾದ, ಸರ್ವಸಮರ್ಥನಾದ, ಎಲ್ಲ ಕಾಲಗಳಲ್ಲೂ ರಕ್ಷಕನಾದ ಭಗವಂತನನ್ನು ಕಡೆಗಣಿಸುತ್ತಾರೆ. ಬದಲಾಗಿ, ಯಾವುದೋ ಒಂದು ಅಸಮರ್ಥವೂ ಅಲ್ಪವೂ ಆದ ದೈವವನ್ನು ಆದರದಿಂದ ಪೂಜಿಸುತ್ತಾರೆ! ಇದರಿಂದ ಅವರಿಗೆ 'ಬಿಡುಗಡೆ' ಬರುವುದೇ? ಸಂಸಾರದ ಬಂಧನ ಬಿಡುಗಡೆಯಾಗುವುದೇ? ಬದಲಾಗಿ, ಅವರಿಗೆ ಸಂಸಾರದ ಸಂಕೋಲೆಯು ಇನ್ನಷ್ಟು ಬಲವಾಗಿ ಬಿಗಿಕೊಳ್ಳುವುದು, ಅಷ್ಟೆ!

ಇಹಲೋಕದಲ್ಲಿ 'ತಾಯಿ' ಪ್ರತ್ಯಕ್ಷದೈವ. ಅವಳಿಗೆ ನಡೆಸುವ ಆದರದ ಸೇವೆಯಿಂದ ತಾನು ತೃಪ್ತಿ ಸಂತೋಷಗಳನ್ನು ಪಡೆಯಬಹುದು. ಹಾಗೆಯೇ, ಸರ್ವಶ್ರೇಷ್ಠನಾದ ಭಗವಂತನನ್ನು ಆಶ್ರಯಿಸಿ, ಆದರದಿಂದ ಪೂಜಾಸೇವೆ ಮಾಡುವುದರಿಂದ, ತನಗೆ ಸಂಸಾರಬಂಧನದಿಂದ ಬಿಡುಗಡೆಯೂ ನಿತ್ಯಾನಂದಸುಖವೂ ಲಭಿಸುವುದು. ಇದೇ ಆಳ್ವಾರರ ಅತಿ ಮುಖ್ಯ ಉಪದೇಶ.

7. நளிர்மதிச் சடையனும் நான்முகக்கடவுளும்,
தளிரொளி யிமையவர் தலைவனும் முதலா,
யாவகையுலகமும் யாவருமகப்பட,
நிலநீர் தீகால் சுடரிரு விசும்பும்,
மலர்சுடர் பிறவும் சிறிதுடன் மயங்க,
ஒருபொருள் புறப்பாடின்றி முழுவது
மகப்படக் கரந்து, ஓராலிலைச் சேர்ந்தவெம்
பெருமாமாயனை யல்லது,
ஒருமாதெய்வம் மற்றுடையமோ யாமே.

Garani Srinivasan

ನಳಿರ್ ಮದಿ ಚ್ಚಡೈಯನುಮ್ ನಾನ್ಮುಗಕ್ಕಡವುಳುಮ್,
ತಳಿರೊಳಿ ಯಿಮೈಯವರ್ ತಲೈವನುಮ್ ಮುದಲಾ,
ಯಾವಗೈಯುಲಗಮುಮ್ ಯಾವರುಮ್ ಅಗಪ್ಪಡ,
ನಿಲನೀರ್ ತೀಕಾಲ್ ಶುಡರಿರು ವಿಶುಮ್ಬುಮ್,
ಮಲರ್ ಶುಡರ್ ಪಿಱವುಮ್ ಶಿಱಿದುಡನ್ ಮಯಙ್ಗ,
ಒರು ಪೊರುಳ್ ಪುಱಪ್ಪಾಡಿನ್ಱಿ ಮುೞುವದು
ಮಗಪ್ಪಡಕ್ಕರನ್ದು—, ಓರಾಲಿಲೈ ಚ್ಚೇರ್ನ್ದವೆಮ್
ಪೆರುಮಾ ಮಾಯನೈ ಯಲ್ಲದು—,
ಒರುಮಾ ದೆಯ್ವಮ್ ಮಱ್ಱುಡೈಯಮೋ ಯಾಮೇ.

ನಳಿರ್ நளிர் = ತಣ್ಣನೆಯ, ಮದಿ மதி = ಚಂದ್ರನನ್ನು, ಚಡೈಯನುಮ್ சடையனும் = ಜಡೆಯಲ್ಲಿ ಉಳ್ಳವನೂ, ನಾನ್ಮುಗಕ್ಕಡವುಳುಮ್ நான்முகக்கடவுளும் = ನಾಲ್ಕುಮುಖನೆಂಬ ದೈವವೂ, ತಳಿರ್ தளிர் = ಹಸನಾದ, ಒಳಿ ஒளி = ತೇಜಸ್ಸಿನ, ಇಮೈಯವರ್ இமையவர் = ದೇವತೆಗಳ, ತಲೈವನುಮ್ தலைவனும் = ಒಡೆಯನೂ, ಮುದಲಾ முதலா = ಮೊದಲಾಗಿ, ಯಾವಗೈ யாவகை = ಯಾವ ಬಗೆಯ (ಎಲ್ಲಾ), ಉಲಗಮುಮ್ உலகமும் = ಲೋಕವೂ, ಯಾವರುಮ್ யாவரும் = ಯಾವ ಬಗೆಯ (ಎಲ್ಲಾ) ಪ್ರಾಣಿಗಳೂ, ಅಗಪ್ಪಡ அகப்பட = ಒಳಪಟ್ಟ, ನಿಲಮ್ நிலம் = ನೆಲ, ನೀರ್ நீர் = ನೀರು, ತೀ தீ = ಬೆಂಕಿ, ಕಾಲ್ கால் = ಗಾಳಿ, ಶುಡರ್ சுடர் = ತೇಜಸ್ಸಿನಿಂದ ಕೂಡಿದ, ಇರು இரு = ವಿಸ್ತಾರವಾದ, ವಿಶುಮ್ಬುಮ್ விசும்பும் = ಆಕಾಶ, (ಇವುಗಳೂ), ಮಲರ್ ಶುಡರ್ ಪಿಱವುಮ್ மலர் சுடர் பிறவும் = ಬಲು ಹೆಚ್ಚು ಸಂಖ್ಯೆಯ (ಪದ್ಮವೆಂಬಷ್ಟು, ತೇಜೋವಸ್ತುಗಳೂ (ಸೂರ್ಯ, ಚಂದ್ರ, ನಕ್ಷತ್ರಾದಿಗಳು), ಶಿಱಿದು சிறிது = ಚಿಕ್ಕದರಲ್ಲಿ, ಉಡನ್ உடன் = ಒಟ್ಟಿಗೆ, ಮಯಙ್ಗ மயங்க = ಅಡಗಿಕೊಳ್ಳುವಂತೆ, ಒರು ஒரு = [illegible], ಪೊರುಳ್ பொருள் = ವಸ್ತುವೂ, ಪುಱಪ್ಪಾಡು புறப்பாடு = ಹೊರಕ್ಕೆ ಬರುವಿಕೆ, ಇನ್ಱಿ இன்றி = ಇಲ್ಲದೆ, ಮುೞುವದುಮ್ முழுவதும் = ಎಲ್ಲವೂ (ಸಂಪೂರ್ಣವಾಗಿ), ಅಗಪ್ಪಡ அகப்பட = ಒಳಗಾಗುವಂತೆ, ಕರನ್ದು கரந்து = ಮರೆಮಾಡಿ, ಓರ್ ಆಲ್ ಇಲೈ ஓர் ஆல் இலை = ಒಂದು ಆಲದ ಎಲೆಯನ್ನು, ಶೇರ್ನ್ದ சேர்ந்த = ಸೇರಿದ, **ಎಮ್** எம் = ನಮ್ಮ, **ಪೆರುಮಾ ಮಾಯನೈ** பெருமா மாயனை = ಬಲು ದೊಡ್ಡ ಆಶ್ಚರ್ಯಕಾರಿಯನ್ನು, ಅಲ್ಲದು அல்லது = ಅಲ್ಲದೆ, ಒರು ஒரு = ಒಂದು, ಮಾ மா = ಮಹಾ, ದೆಯ್ವಮ್ தெய்வம் = ದೈವವನ್ನು, ಮಱ್ಱು மற்று = ಬೇರೆ, ಉಡೈಯಮೋ உடையமோ = ಪಡೆದಿರುವೆವೆ, ಯಾಮೇ யாமே = ನಾವೆ.

ಸಣ್ಣನೆಯ ಚಂದ್ರನನ್ನು ಜಡೆಯಲ್ಲಿಟ್ಟವನೂ, ನಾಲ್ಕು ಮುಖಂಬದ್ದವನೂ
ಹಣಿನಾದ ತೇಜಸ್ಸಿನ ದೇವತೆಗಳ ಒಡೆಯನೂ ಮೊದಲಾಗಿ ಯಾವ ಬಗೆಯ (ಎಲ್ಲಾ)
ಲೋಕಗಳೂ, ಯಾವ ಬಗೆಯ (ಎಲ್ಲಾ) ಪ್ರಾಣಿಗಳೂ ಒಳಗೊಳ್ಳ ನೆಲ, ನೀರು,
ಬೆಂಕಿ, ಗಾಳಿ, ಮತ್ತು ತೇಜಸ್ಸಿನಿಂದ ಕೂಡಿದ ವಿಸ್ತಾರವಾದ ಆಕಾಶವೂ, ಬಲು ದೊಡ್ಡ
ಸಂಖ್ಯೆಯ (ಪದ್ಮಸಂಖ್ಯೆಯ) ತೇಜೋವಸ್ತುಗಳೂ ಚಿಕ್ಕದರಲ್ಲಿ ಒಟ್ಟಿಗೆ
ಅಡಗಿಕೊಳ್ಳುವಂತೆಯೂ, ಯಾವೊಂದು ವಸ್ತುವೂ ಹೊರಬೀಳದೆ ಸಂಪೂರ್ಣ
ವಾಗಿ ಅಡಗಿರುವಂತೆ ಮರೆಮಾಡಿ, ಒಂದು ಆಲದ ಎಲೆಯಮೇಲೆ ನಿಂದ
ನಮ್ಮ ಬಲು ದೊಡ್ಡ ಆಶ್ಚರ್ಯ ಕಾರ್ಯಮಾಡಿಲ್ಲದೆ ಒಂದು ಮಹಾದ್ವೈತವನ್ನು (7)
ನಾವು ಬೇರೆ ಏಕೆ ವಿವರಿಸಬೇಕೇ?

ಹಿಂದಿನ ಪಾಶುರದಲ್ಲಿ ಲೋಕದ ಜನರ ಅಲ್ಪತನಕ್ಕಾಗಿ, ಅಜ್ಞಾನಕ್ಕಾಗಿ, ಮರುಗುತ್ತಾ
ಅವರ ಉದ್ಧಾರವನ್ನೇ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಉಪದೇಶವನ್ನು ಆಳ್ವಾರ್ ಮಾಡು
ತ್ತಿದ್ದಾರೆ. ಸಂಸಾರವೆಂಬ ಸಂಕೋಲೆಯಿಂದ ಬಿಡಿಸಲು ಸರ್ವೇಶ್ವರನಾದ ಭಗವಂತನೊಬ್ಬ
ನಿಂದಲೇ ಸಾಧ್ಯ. ಅವನನ್ನೇ ಎಲ್ಲರೂ ಆಶ್ರಯಿಸಿ ಉಜ್ಜೀವನಗೊಳ್ಳಬೇಕು. ಇತರ
ದೇವತೆಗಳನ್ನು ಆಶ್ರಯಿಸುವುದರಿಂದ ಯಾವ ಬಗೆಯ ಪ್ರಯೋಜನವೂ ಲಭಿಸುವು
ದಿಲ್ಲ — ಇದನ್ನು ಹಿಂದಿನ ಪಾಶುರದಲ್ಲಿ ಹೇಳಲಾಯಿತು.

ಈ ಪಾಶುರದಲ್ಲಿ ಆ ಸರ್ವೇಶ್ವರನ ಶಕ್ತಿ (ಸಾಮರ್ಥ್ಯ) ಯನ್ನು ಹೇಳಲಾ
ಗುತ್ತದೆ.

'ನಕ್ಕರ್ ಮಡಿಚ್ಚಡೈಯನುಮಾ' — ಎಂದರೆ ತಲೆಯಲ್ಲಿ (ಜಡೆಯಲ್ಲಿ) ಚಂದ್ರ
ನನ್ನು ಮುಡಿದ ಶಿವನು.

'ತಕ್ಕೊಳ್ಳ ಉಮ್ಮೈಯುಮರ್ ತಿಲ್ವನುಮಾ' — ಎಂದರೆ, ಎಲ್ಲಾ ದೇವತೆಗಳ
ಒಡೆಯನಾದ ದೇವೇಂದ್ರನು. 'ಮುದಲಾ' — ಎಂದರೆ, ಇತರ ದಿಕ್ಪಾಲಕರು (ಮರುತ್ತುಗಳು, ಅಶ್ವಿನಿಯರು) ಮುಂತಾದವರು.

'ಯಾವರ್ತ್ಯೆಯುಲಹುಮುಮಾ' — ಎಂದರೆ, ಎಲ್ಲಾ ಮೇಲಣ ಲೋಕ
ಗಳೂ, ಅಧೋಲೋಕಗಳೂ, ಭೂಲೋಕವೂ. ಕೂಡಿರುವ ಬ್ರಹ್ಮಾಂಡವೇ.

'ಯಾವರುಮಾ' — ಎಂದರೆ, ಎಲ್ಲಾ ಲೋಕಗಳಲ್ಲಿರುವ ಚೇತನರೂ.

ಆಳ್ವಾರರು ಹೇಳುತ್ತಾರೆ: ಬ್ರಹ್ಮ, ರುದ್ರ, ಇಂದ್ರ, ಇತರ ದಿಕ್ಪಾಲಕರು,
ಸಿದ್ಧ ಸಾಧ್ಯ ಚಾರಣರೇ ಮುಂತಾದವರೆಲ್ಲರನ್ನೂ, ಅವರಿರುವ ಲೋಕಗಳನ್ನೂ,
ಪಂಚಭೂತಗಳನ್ನೂ, ಸೂರ್ಯ ಚಂದ್ರ ನಕ್ಷತ್ರಾದಿ ಎಲ್ಲಾ ತೇಜೋವಸ್ತು
ಗಳನ್ನೂ, ಭೂಲೋಕ ಮತ್ತು ಇತರ ಲೋಕಗಳ ಎಲ್ಲಾ ಚೇತನರನ್ನೂ
ಸರ್ವೇಶ್ವರನಾದ ಭಗವಂತನು, ಪ್ರಳಯಕಾಲ ಬಂದಾಗ, ತಾನೊಂದು
ಪುಟ್ಟ ಶಿಶುವಾಗಿ, ತನ್ನ ಪುಟ್ಟ ಹೊಟ್ಟೆಯಲ್ಲೇ ಎಲ್ಲವನ್ನೂ ಅಡಗಿಸಿಟ್ಟುಕೊಂ
ಡು, ಕಲ್ಪಗಳ ಕಾಲ, ಸಂರಕ್ಷಿಸುತ್ತಾ, ಒಂದು ಪುಟ್ಟ ಆಲದೆಲೆಯ ಮೇಲೆ
ಕಡಲಲ್ಲಿ (ಜಲರಾಶಿಯಲ್ಲಿ) ಪವಡಿಸಿ ಯೋಗನಿದ್ರೆಯಲ್ಲಿರುತ್ತಾನೆ. ಅಂದ

ಪರಮಾನಂದಮೂರ್ತಿಯಾದ ಸರ್ವೇಶ್ವರನ ಹೊರತು ಬೇರೆ ಯಾರೂ ನಮ್ಮನ್ನು ಉದ್ಧರಿಸಲಾರರು. ನಾವು ಅವನನ್ನೇ ಏಕಪ್ರಾಣರಾಗಿ ಶರಣಾಗತಿ ಹೊಂದಬೇಕು. ಬೇರೆ ಯಾರನ್ನು ಆಶ್ರಯಿಸಿದರೂ ಯಾವ ಪ್ರಯೋಜನವೂ ಇಲ್ಲ.

ಈ ಪಾಶುರದೊಡನೆ 'ತಿರುಪಾವೈ' ವ್ಯಾಖ್ಯಾನವು ಮುಗಿಯಿತು. ಕೇವಲ ಏಳು ಪಾಶುರಗಳಲ್ಲಿ ಆಳ್ವಾರರು ತಾವು ಲೋಕಕ್ಕೆ ನೀಡಬೇಕಾದ ಉಪದೇಶಾಮೃತವನ್ನು ತೋರಿಸಿ ಕೊಟ್ಟು, ಎಲ್ಲರೂ ಉದ್ಧಾರವಾಗಲೆಂದು ಹಾರೈಸುತ್ತಾರೆ.

— o —

Garani Srinivasan